ಸಂಪುಟ 22 ಸಂಚಿಕೆ 51
ಡಿಸೆಂಬರ್ 10, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ




ವಿರೋಧ ಪಕ್ಷಗಳು ಎಲ್ಲಿ?

ಆರೋಗ್ಯದ ಬೆಳಕಿಗಾಗಿ ಆಂದೋಲನ

ಸಿನಿಮಾ

‘ಲೈಫ್ ಈಸ್ ಬ್ಯೂಟಿಫುಲ್’




ದುಡಿಯುವ ಮಹಿಳೆಗೆ
ಲೈಂಗಿಕ ಕಿರುಕುಳ

ತಡೆಯುವುದೆಂತು?

ಸಂಯುಕ್ತ ರಂಗದ ವಿರುದ್ಧ ಪಿತೂರಿ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 52

ಕಳೆದ ಸಂಚಿಕೆಯಲ್ಲಿ ಪ.ಬಂಗಾಳದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಗಿ ಸಂಯುಕ್ತ ರಂಗ ಅಧಿಕಾರಕ್ಕೆ ಬಂದಿದ್ದು ಮತ್ತು ಕೇರಳದಲ್ಲಿಯೂ ಕಾಂಗ್ರೆಸ್ ಮಣ್ಣು ಮುಕ್ಕಿದ್ದರ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಪ.ಬಂಗಾಳದಲ್ಲಿ ಅಧಿಕಾರ್ಕಕೆ ಬಂದ ಸಂಯುಕ್ತ ರಂಗ ಸರ್ಕಾರ ಜನತೆ ಹಾಗೂ ಪ್ರಜಾಪ್ರಭುತ್ವದ ಕಲ್ಯಾಣಕ್ಕಾಗಿ ರೂಪಿಸಿದ ಕಾರ್ಯಕ್ರಮಗಳು ಹಾಗೂ ಆ ಸರ್ಕಾರವನ್ನು ಪದಚ್ಯುತಿಗೊಳಿಸಲು ಕೇಂದ್ರ-ರಾಜ್ಯ ಕಾಂಗ್ರೆಸ್ ಸ್ಥಾಪಿತ ಹಿತಾಸಕ್ತರು, ಪೋಲೀಸರು ಮತ್ತು ಆಡಳಿತ ಶಾಹಿ ಒಂದು ವಿಭಾಗ ರೂಪಿಸಿದ ಪಿತೂರಿ ಬಗ್ಗೆ ಓದಿ

ರಾಜ್ಯದ ಎಲ್ಲ ಬರಪೀಡಿತ ಹಾಗೂ ಪ್ರವಾಹ ಸಂತ್ರಸ್ತ ಪ್ರದೇಶಗಳಲ್ಲಿ ತೆರಿಗೆಯನ್ನು ಮನ್ನಾ ಮಾಡಲಾಯಿತು ಹಾಗೂ ಸಾಲ ವಸೂಲಿಯನ್ನು ತಾತ್ಕಾಲಿಕ ಅಮಾನತು ಮಾಡಲಾಯಿತು. ಬಂಕುರಾ ಮತ್ತು ಪುರುಲಿಯಾ ಜಿಲ್ಲೆಗಳ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಂಯುಕ್ತ ರಂಗ ಸರಕಾರ ಯುದ್ಧೋಪಾದಿಯಲ್ಲಿ: ಪರಿಹಾರ ಕಾರ್ಯ ಕೈಗೆತ್ತಿಕೊಂಡಿತು.

ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ಯೆಯಲ್ಲಿ ಸಮಾನತೆ ತಂದಿತು. ಶಾಲೆ-ಕಾಲೇಜುಗಳ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಯ ತುಟ್ಟಿಭತ್ಯೆಯನ್ನು ಏರಿಸಿತು. ಸರಕಾರಿ ನೌಕರರು ಮತ್ತು ಶಿಕ್ಷಕರಿಗಾಗಿ ವೇತನ ಆಯೋಗವನ್ನು ರಚಿಸಿತು. ಕಲ್ಕತ್ತ ಮಹಾನಗರ ಪಾಲಿಕೆ ಮತ್ತು ಪುರಸಭೆ ಮಂಡಳಿಗಳ ನೌಕರರಿಗೆ ಸರಕಾರ ಸಹಾಯಹಸ್ತಚಾಚಿತು.

ಕಾರ್ಮಿಕ ಕಾನೂನುಗಳನ್ನು ಪುನರ್ರಚಿಸುವ ಉದ್ದೇಶದಿಂದ ಹೊಸ ಮಸೂದೆಯ ಶಿಫಾರಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿತು. ಕೊಳಗೇರಿ ವಾಸಿಗಳ ತೆರಿಗೆ ಹೊರೆ ಇಳಿಸಲು ಕೂಡ ಸಂಯುಕ್ತ ರಂಗ ಸರಕಾರ ಕ್ರಮಕೈಗೊಂಡಿತು.

ಆಡಳಿತಕ್ಕೆ ನೆರವಾಗುವ ಉದ್ದೇಶದಿಂದ ಸರಕಾರ ಅನೇಕ ಸಮಿತಿಗಳನ್ನು ರಚಿಸಿತು. ಆಹಾರ ಮತ್ತು ಪರಿಹಾರ ಸಮಿತಿ ಅದರಲ್ಲಿ ಅತ್ಯಂತ ಪ್ರಮುಖವಾದುದು. ಜಿಲ್ಲೆಯಿಂದ ಬ್ಲಾಕ್ ಮಟ್ಟದವರೆಗೆ ಇದ್ದ ಈ ಸಮಿತಿಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳು ಮತ್ತು ಸ್ಥಳೀಯ ಆಡಳಿತದ ಪ್ರತಿನಿಧಿಗಳು ಇದ್ದರು.

ಅಭೂತಪೂರ್ವ

ಸ್ಥಾಪಿತ ಹಿತಾಸಕ್ತಿಗಳ ಸಂಚುಗಳು, ಹಣಕಾಸಿನ ಕೊರತೆ, ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಹಾಗೂ ತಾರತಮ್ಯ - ಇವೆಲ್ಲ ಇದ್ದರೂ ಒಂಬತ್ತು ತಿಂಗಳ ಸಂಕ್ಷಿಪ್ತ ಆಡಳಿತ ಅವಧಿಯಲ್ಲಿ ಸಂಯುಕ್ತ ರಂಗ ಸರಕಾರ ಜನತೆ ಹಾಗೂ ಒಟ್ಟಾರೆಯಾಗಿ ಪ್ರಜಾಪ್ರಭುತ್ವದ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿತು. ಕಾಂಗ್ರೆಸ್ಸಿನ 20 ವರ್ಷಗಳ ಆಡಳಿತದಲ್ಲಿ ಇಂಥ ಯಾವುದೇ ಕಾರ್ಯಕ್ರಮವನ್ನು ಜನರು ಕಂಡಿರಲಿಲ್ಲ.

ತನ್ನ ಮಿತಿಗಳನ್ನು ಮೀರಿ ಹಾಗೂ ಅನೇಕ ವಿಭಾಗಗಳ ವಿರೋಧವನ್ನು ಲೆಕ್ಕಿಸದೆ, ಸ್ವಾರ್ಥಿ ಹಾಗೂ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಪ್ರಾಮಾಣಿಕತೆಯಿಂದ ಹೋರಾಡುವ ಏಕೈಕ ಸರಕಾರ ಇದೇ ಎಂಬುದನ್ನು ಸಾಬೀತುಪಡಿಸಲು ಸಂಯುಕ್ತ ರಂಗ ಸರಕಾರ ಶ್ರಮಿಸಿತು.

ಕಾರ್ಮಿಕ ವರ್ಗ ಕೂಡ ಸಂಯಕ್ತ ರಂಗ ಸರಕಾರ ಮಾತ್ರವೇ ತನ್ನ ನಿಜವಾದ ಮಿತ್ರ ಎಂಬುದನ್ನು ನಿಧಾನವಾಗಿ ಅರಿಯತೊಡಗಿತ್ತು. ಇದರಿಂದ ಕಾಂಗ್ರೆಸ್‌ನಂಥ ಸ್ಥಾಪಿತ ಹಿತಾಸಕ್ತರ ಎದೆ ನಡುಗಿತು. ಆದರೆ, ಚುನಾವಣೆಯಲ್ಲಿ ಕಾಂಗ್ರೆಸ್ ಸೋತರೂ ಅದರ ಪ್ರಭಾವ ಮತ್ತು ಬಲ ಇನ್ನೂ ಅಸ್ತಿತ್ವದಲ್ಲಿರುವುದು ಗೊತ್ತಾಗುತ್ತಿತ್ತು. ಕೇಂದ್ರದಲ್ಲಿ ತನ್ನ ಸರಕಾರ ಇದ್ದದ್ದರಿಂದ ರಾಜ್ಯದ ಸಂಯುಕ್ತ ರಂಗ ಸರಕಾರವನ್ನು ದಮನಿಸಲು ಈ ಅವಕಾಶವನ್ನು ಕಾಂಗ್ರೆಸ್ ಬಳಸಿಕೊಳ್ಳುತ್ತಿತ್ತು.

ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಒಂದು ಸರಕಾರಕ್ಕೆ ಅನಗತ್ಯ ಕಿರುಕುಳ ಕೊಡುವುದು ಮೂಲಭೂತವಾಗಿ ಜನರಿಗೇ ಅನ್ಯಾಯ ಮಾಡಿದಂತೆ ಎಂಬುದು ದೆಹಲಿ ಮತ್ತು ಕಲ್ಕತ್ತದಲ್ಲಿನ ಕಾಂಗ್ರೆಸ್ ನಾಯಕರ ತಲೆಗೆ ಒಮ್ಮೆಯೂ ಹೊಳೆಯಲಿಲ್ಲ.

ಪದಚ್ಯುತಿಗೆ ಪಿತೂರಿ

ರಾಜ್ಯ ಕಾಂಗ್ರೆಸ್, ಕೇಂದ್ರದಲ್ಲಿನ ಕಾಂಗ್ರೆಸ್, ಸ್ಥಾಪಿತ ಹಿತಾಸಕ್ತರು, ಪೋಲೀಸರು ಮತ್ತು ಅಧಿಕಾರಶಾಹಿಯ ಒಂದು ವಿಭಾಗ - 'ಇವರೆಲ್ಲರೂ ಒಟ್ಟು ಸೇರಿ ನಮ್ಮನ್ನು ಅಧಿಕಾರದಿಂದ ಕಿತ್ತೊಗೆಯಲು ಸಂಚು ಹೂಡಿದರು.

ಹಣಕಾಸು ಮತ್ತು ಬರ ಪರಿಹಾರ ವಿತರಣೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಕೇಂದ್ರ ಸರಕಾರ ಹೆಚ್ಚೆಚ್ಚು ಪಕ್ಷಪಾತ ಮಾಡತೊಡಗಿತು. ಕೆಲವು ಬರಪೀಡಿತ ಜಿಲ್ಲೆಗಳಿಗೆ ಮಂಜೂರಾದ ಆಹಾರ ಪದಾರ್ಥಗಳನ್ನು ಕಳಿಸದಿರಲೂ ಅದು ನಿರ್ಧರಿಸಿತು.

ಪಡಿತರ ವ್ಯವಸ್ಥೆ ಕುಸಿದು ಬೀಳುತ್ತಿತ್ತು. ಅಕ್ಕಿ ಬೆಲೆ ಗಗನಕ್ಕೇರಿತು. ಎಲ್ಲೆಲ್ಲೂ ಆಹಾರ ಬಿಕ್ಕಟ್ಟು ತಾಂಡವವಾಡುತ್ತಿತ್ತು. ಎಲ್ಲ ರಾಜಕೀಯ ಪಕ್ಷಗಳ ನೆರವಿನಿಂದ ಆಹಾರ ಮತ್ತು ಪರಿಹಾರ ಸಮಿತಿಗಳನ್ನು ರಚಿಸಲು ರಾಜ್ಯ ಸರಕಾರ ನಿರ್ಧರಿಸಿತು. ಆದರೆ ಈ ಸಮಿತಿಗಳನ್ನು ಸೇರಲು ಕಾಂಗ್ರೆಸ್ ನಿರಾಕರಿಸಿತು.

ಆಹಾರ ಬಿಕ್ಕಟ್ಟಿಗೆ ಸಂಯುಕ್ತ ರಂಗ ಸರಕಾರದ ಆಹಾರ ಇಲಾಖೆ ಕೂಡ ಭಾಗಶಃ ಹೊಣೆ ಎಂಬುದನ್ನು ಇದೇಹೊತ್ತಿಗೆ ನಾವು ಒಪ್ಪಿಕೊಳ್ಳಬೇಕು. ಕಾಂಗ್ರೆಸ್ಸಿಗರ ಸಕ್ರಿಯ ಬೆಂಬಲದಿಂದ ಕಾಳಸಂತೆಕೋರರು ಅಕ್ರಮ ದಾಸ್ತಾನು ಮಾಡುವುದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಲು ಸರಕಾರ ವಿಫಲವಾಗಿತ್ತು. ಆಗ ಡಾ. ಪ್ರಫುಲ್ಲ ಘೋಷ್ ಆಹಾರ ಸಚಿವರಾಗಿದ್ದರು. ಅವರು ದೊಡ್ಡ ಗಿರಣಿ ಮಾಲಿಕರು ಮತ್ತು ಕಾಳಸಂತೆಕೋರರ ವಿರುದ್ಧ ದೃಢ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ಆಹಾರ ಬಿಕ್ಕಟ್ಟು ಉಲ್ಬಣಿಸಿತು.

ಸಂಯುಕ್ತ ರಂಗ ಸರಕಾರ ವಜಾ!

ಸಿಪಿಐ(ಎಂ) ಕೂಡ ಅಂಗಪಕ್ಷವಾಗಿರುವ ಸಂಯುಕ್ತ ರಂಗ ಅಧಿಕಾರಕ್ಕೆ ಬಂದರೂ ಪಕ್ಷ ತನ್ನ ಜನಪರ ಹೋರಾಟವನ್ನು ಮುಂದುವರಿಸಿತು. ಆಹಾರಧಾನ್ಯಗಳ ಬೆಲೆಗಳನ್ನು ನಿಗದಿಪಡಿಸಬೇಕು ಹಾಗೂ ಅಕ್ಕಿ ಕೆ.ಜಿ.ಗೆ ರೂ. 1.25 ರ ಮಿತಿಯನ್ನು ಹೇರಬೇಕು ಎಂದು ಪಕ್ಷ ಈಗಲೂ ಒತ್ತಾಯಿಸಿತು. ಪಡಿತರ ಪ್ರಮಾಣವನ್ನು ಕಡಿಮೆ ಮಾಡಬಾರದೆಂದೂ ಆಗ್ರಹಪಡಿಸಿತು.

ಕಳ್ಳಸಂತೆ ಖದೀಮರನ್ನು ತಕ್ಷಣವೇ ಬಂಧಿಸಬೇಕು, ಕಾಳಸಂತೆಯ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದೆವು. ಪರಿಹಾರವನ್ನು ಕಳಿಸಿಕೊಡುವಂತೆ ಕೇಂದ್ರದ ಮೇಲೆ ಒತ್ತಡ ಹೇರಲು ಜನರ ಹೋರಾಟವನ್ನು ಸಂಘಟಿಸಬೇಕಿತ್ತು. ಈ ಆಹಾರ ಬಿಕ್ಕಟ್ಟು ಹೇಗೆ ಉಂಟಾಯಿತು ಎಂಬುದನ್ನು ಜನರಿಗೆ ವಿವರಿಸಬೇಕಿತ್ತು. ಇಂಥ ಬೇಡಿಕೆಗಳಿಗೆ ಆಹಾರ ಮಂತ್ರಿ ಕಿಂಚಿತ್ತು ಸ್ಪಂದಿಸಲಿಲ್ಲ. ಅದರ ಬದಲಿಗೆ ಅವರು 'ಮನ ಪರಿವರ್ತನೆ ಮಾಡಿಕೊಳ್ಳಿ' ಎಂದು ಕಾಳಸಂತೆಕೋರರಿಗೆ ಮನವಿ ಮಾಡಿಕೊಂಡರು!

ಕೋಮು ಮತ್ತು ಪ್ರಾಂತ್ಯದ ಆಧಾರದಲ್ಲಿ ಗಲಭೆಗಳನ್ನು ಪ್ರಚೋದಿಸುವ ಹುನ್ನಾರವೂ ನಡೆದಿತ್ತು. ಗಲಭೆ-ದೊಂಬಿಯ ಕೆಲವು ಪ್ರಕರಣಗಳು ವರದಿಯಾದವು. ಆದರೆ ಇವುಗಳನ್ನು ಸಂಯುಕ್ತ ರಂಗ ಸರಕಾರ ಸಮರ್ಥವಾಗಿ ನಿಭಾಯಿಸಿತು. ಜನರ ವಿಶ್ವಾಸವನ್ನು ಗಳಿಸಿತು.

ಸರಕಾರದ ವಿರುದ್ಧದ ಪಿತೂರಿಯಲ್ಲಿ ಕೆಲವು ಪೋಲೀಸರು ಮತ್ತು ಅಧಿಕಾರಶಾಹಿಗಳು ಶಾಮೀಲಾಗಿದ್ದರು ಎನ್ನುವುದನ್ನು ಇಲ್ಲಿ ಹೇಳಲೇಬೇಕು. ಹೌರಾದಲ್ಲಿ ಸಿಪಿಐ(ಎಂ) ಮುಖಂಡ ಮಹಮದ್ ಇಲಿಯಾಸ್ ಮೇಲೆ ಪೋಲೀಸರು ಹಲ್ಲೆ ಮಾಡಿದ ಪ್ರಕರಣ ನನಗೆ ನೆನಪಿದೆ. ತಕ್ಷಣವೇ ಸಂಯುಕ್ತ ರಂಗದ ಮುಖಂಡರು ಮತ್ತು ಜಿಲ್ಲೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು. ಪೋಲೀಸರು ನಾಯಕರು ಹಾಗೂ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪೋಲೀಸರು ಕಲ್ಲು ತೂರಾಟದಲ್ಲಿ ತೊಡಗಿದರು. ಭೂಕಂದಾಯ ಸಚಿವ ಹರೇಕೃಷ್ಣ ಕೊನಾರ್ ಇಂಥ ಒಂದು ಆಕ್ರಮಣಕ್ಕೆ ಗುರಿಯಾದರು. ತಪ್ಪಿತಸ್ಥ ಪೋಲೀಸರ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲಾ ಪೋಲೀಸ್ ಅಧಿಕಾರಿ ನಿರಾಕರಿಸಿದರು.

ನಂತರ ಮುಖ್ಯಮಂತ್ರಿ ಕೂಡ ಸ್ಥಳಕ್ಕೆ ಬಂದರು. ಹೌರಾ ಘಟನೆ ಒಂದು ಪ್ರತ್ಯೇಕ ಪ್ರಕರಣವಲ್ಲ. ಇದು ಯೋಜಿತವಾದುದು ಎಂಬುದು ನಮಗೆ ಗೊತ್ತಾಯಿತು. ಉನ್ನತ ಪೋಲೀಸ್ ಅಧಿಕಾರಿಗಳು ಮತ್ತು ಆಡಳಿತದ ಒಂದು ವಿಭಾಗದವರು ಕಾಂಗ್ರೆಸ್ ನಾಯಕರ ಜತೆ ಕೈ ಜೋಡಿಸಿದ್ದರು. ಹೌರಾ ಪ್ರಕರಣವನ್ನು ಸರಾಕರದ ವಿರುದ್ಧದ ರಾಜ್ಯವ್ಯಾಪಿ ಪೋಲೀಸ್ ಬಂಡಾಯವನ್ನಾಗಿ ಪರಿವರ್ತಿಸಬೇಕೆಂಬುದು ಇದರ ಹಿಂದಿದ್ದವರ ಉದ್ದೇಶವಾಗಿತ್ತು.

ಇನ್ನೊಂದು ಪಿತೂರಿಯನ್ನು ಕೂಡ ಬಯಲಿಗೆಳೆಯಲಾಯಿತು. ಡಾರ್ಜಿಲಿಂಗ್‌ನ ನಕ್ಸಲ್‌ಬಾರಿ ಪ್ರದೇಶದಲ್ಲಿ ಸ್ವಲ್ಪ ಸಮಸ್ಯೆಯಿತ್ತು. ಜಮೀನು ವಿತರಣೆ ಕಾನೂನನ್ನು ಪಾಲಿಸಲು ಕೆಲವು ಭೂಮಾಲಿಕರು ನಿರಾಕರಿಸಿದ್ದರಿಂದ ಸಮಸ್ಯೆ ಸೃಷ್ಟಿಯಾಗಿತ್ತು. ಹರೇಕೃಷ್ಣ ಕೊನಾರ್ ಮತ್ತು ನೀರಾವರಿ ಮಂತ್ರಿ ವಿಶ್ವನಾಥ ಮುಖರ್ಜಿ ಮಧ್ಯಪ್ರವೇಶಿಸಿ ಬಿಕ್ಕಟ್ಟನ್ನು ಬಗೆಹರಿಸಿದರು.

ಆದರೆ ಇದ್ದಕ್ಕಿದ್ದಂತೆ ಉನ್ನತ ಪೋಲೀಸ್ ಅಧಿಕಾರಿಗಳು ಸೂತ್ರವನ್ನು ನಿರ್ಲಕ್ಷಿಸಿ ಆ ಪ್ರದೇಶಕ್ಕೆ ಪಡೆಗಳನ್ನು ಕಳಿಸಿದರು. ಪೋಲೀಸರು ಯದ್ವಾತದ್ವಾ ನಡೆಸಿದ ಗೋಲಿಬಾರ್‌ನಲ್ಲಿ ಆರು ರೈತ ಮಹಿಳೆಯರು ಮತ್ತು ಮಕ್ಕಳ ಸಹಿತ ಒಂಬತ್ತು ಜನರು ಬಲಿಯಾದರು. ಈ ಬರ್ಬರ ಕೊಲೆಗಳ ವಿರುದ್ಧ ರಾಜ್ಯದಾದ್ಯಂತ ಅತೃಪ್ತಿಯೆದ್ದಿತು. ಪ್ರಕರಣದ ನ್ಯಾಯಾಂಗ ತನಿಖೆ ನಡೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸಿತು.

ಬಯಲಿಗೆ ಬಂದ ಪಿತೂರಿ

ಸರಕಾರವನ್ನು ಉರುಳಿಸಬೇಕೆಂದು ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬರುವ ಐದು ದಿನಗಳ ಹಿಂದೆಯೇ ಒಂದು ಪಿತೂರಿಯನ್ನು ಹೆಣೆಯಲಾಗಿತ್ತು ಎಂಬ ಮಾಹಿತಿ ಕೂಡ ನಮಗೆ ಸಿಕ್ಕಿತು. ಡಿಜಿಐ, ಡಿಸಿ ಮತ್ತು ಎಸ್‌ಪಿ ಮಟ್ಟದ ಅಧಿಕಾರಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೆಲವು ಉನ್ನತ ಅಧಿಕಾರಿಗಳ ಜತೆ ಕೈ ಜೋಡಿಸಿ ಈ ಪಿತೂರಿಯನ್ನು ಹೂಡಿದ್ದರು. ಕಾನೂನು ಮತ್ತು ವ್ಯವಸ್ಥೆ ಸಮಸ್ಯೆಯನ್ನು ಸೃಷ್ಟಿಸಿ ರಾಷ್ಟ್ರಪತಿ ಆಡಳಿತವನ್ನು ಹೇರುವುದು ಅಥವಾ ಎಂದಿನಂತೆ ಹಣದ ಥೈಲಿಗಳನ್ನು ಬಳಸಿ ಸಂಯುಕ್ತ ರಂಗವನ್ನು ಒಡೆಯುವುದು ಪಿತೂರಿ ಹೂಡಿದವರ ಲೆಕ್ಕಾಚಾರವಾಗಿತ್ತು.

ಪರಿಸ್ಥಿತಿ ನಿಧಾನವಾಗಿ ಸ್ಪಷ್ಟವಾಗತೊಡಗಿತ್ತು. ಸರಕಾರ ಜಾರಿಗೆ ತಂದ ಹೊಸ ಭೂಸುಧಾರಣೆ ಕ್ರಮಗಳಿಂದ ಸಂಯುಕ್ತ ರಂಗದ ಅನೇಕ ಗುಂಪುಗಳ ಹಿತಗಳಿಗೆ ಪೆಟ್ಟು ಬಿದ್ದಿತು. ಅವರು 'ನಿರಾಶರಾಗ ತೊಡಗಿದರು'. ಇಷ್ಟು ಮಾತ್ರವಲ್ಲದೆ ಅವರಿಗೆ ಕೆಲವು ಶಕ್ತಿಗಳಿಂದ ಬಂದ ಆಮಿಷದ ಆಕರ್ಷಣೆಯೂ ಇತ್ತು.

ರಾಜ್ಯದ ವಿಧಾನಪರಿಷತ್ ಚುನಾವಣೆ ವೇಳೆ ಸಮಸ್ಯೆಗಳು ಮೇಲೆದ್ದವು. ಸ್ವತಃ ತಮ್ಮದೇ ಪಕ್ಷದ 19 ಶಾಸಕರ ವಿಶ್ವಾಸದ್ರೋಹದಿಂದಾಗಿ ಸಂಯುಕ್ತ ರಂಗದ ಅಭ್ಯರ್ಥಿ ಸುಧಿನ್ ಕುಮಾರ್ ಪರಿಷತ್ ಚುನಾವಣೆಯಲ್ಲಿ ಸೋತರು.

1967 ರ ಆಗಸ್ಟ್‌ನಲ್ಲಿ ಬಿಕ್ಕಟ್ಟು ಬಿಗಡಾಯಿಸಿತು. ಆಹಾರ ಬಿಕ್ಕಟ್ಟು ಮತ್ತು ಬೆಲೆಯೇರಿಕೆಯಿಂದಾಗಿ ಜನರಲ್ಲಿ ಉಂಟಾದ ಅತೃಪ್ತಿಯ ಲಾಭ ಪಡೆದ ಕಾಂಗ್ರೆಸ್ಸಿಗರು ಪ್ರತಿದಿನ ರೈಲುಗಳ ಓಡಾಟ ಸಹಿತ ಸಾರಿಗೆ ಸೇವೆಗಳನ್ನು ಅಸ್ತವ್ಯಸ್ತಗೊಳಿಸಿದರು. ಇಂಥ ಪಿತೂರಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಇದು ಸಕಾಲ ಎಂದು ನಾವು ನಿರ್ಧರಿಸಿದೆವು. 1967 ಆಗಸ್ಟ್ 24 ರಂದು ಸಂಯುಕ್ತ ರಂಗ ಪಶ್ಚಿಮ ಬಂಗಾಳದಲ್ಲಿ ಸಾರ್ವತ್ರಿಕ ಮುಷ್ಕರವನ್ನು ಸಂಘಟಿಸಿತು.

ಜನ ವಿರೋಧಿ ಮಂತ್ರಿ ರಾಜಿನಾಮೆ

ಆಹಾರ ಸಚಿವ ಪ್ರಫುಲ್ಲ ಘೋಷ್ ಹಠಾತ್ತನೆ ರಾಜಿನಾಮೆ ನೀಡಿದರು. ನಿಯಮದಂತೆ ಅವರು ಮುಖ್ಯಮಂತ್ರಿಗೆ ರಾಜಿನಾಮೆ ಪತ್ರ ಸಲ್ಲಿಸಬೇಕಿತ್ತು. ಆದರೆ ಘೋಷ್ ಹಾಗೆ ಮಾಡದೆ ನೇರವಾಗಿ ಅಂದಿನ ರಾಜ್ಯಪಾಲ ಧರ್ಮವೀರರಲ್ಲಿಗೆ ತೆರಳಿ ರಾಜಿನಾಮೆ ಸಲ್ಲಿಸಿದರು.

ಆಹಾರ ಬಿಕ್ಕಟ್ಟಿನ ನಿವಾರಣೆಗೆ ಸಚಿವ ಘೋಷ್ ಯಾವುದೇ ಅನುಕೂಲಕರ ಕ್ರಮ ಕೈಗೊಂಡಿರಲಿಲ್ಲ. ಪರಿಸ್ಥಿತಿ ಹದಗೆಡಲು ಅವಕಾಶ ಕಲ್ಪಿಸಿದರೆಂದೇ ಹೇಳಬೇಕು. ಈ ಆಹಾರ ಬಿಕ್ಕಟ್ಟನ್ನು ಸೃಷ್ಟಿಸಿದ ಕಾಳಸಂತೆಕೋರರು ಮತ್ತು ಅಕ್ರಮ ದಾಸ್ತಾನುಗಾರರ ವಿರುದ್ಧ ಕನಿಷ್ಟ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಿಲ್ಲ. ನಾವು ಅವರನ್ನು ಹಲವು ಬಾರಿ ಎಚ್ಚರಿಸಿದ್ದೆವು. ಆದರೆ ಅವರು ಅದನ್ನು ಕಿವಿಗೆ ಹಾಕಿಕೊಂಡಿರಲಿಲ್ಲ. ಕೊನೆಗೆ ಅವರು, ರಾಜ್ಯ ಸರಕಾರವನ್ನು ಉರುಳಿಸಲು ಕೆಲ ಸಮಯದಿಂದ ಸಕ್ರಿಯರಾಗಿದ್ದ ಪ್ರತಿಗಾಮಿ ಶಕ್ತಿಗಳ ಜತೆ ಕೈಜೋಡಿಸಿದರು.

ರಾಜಿನಾಮೆ ಸುದ್ದಿಯನ್ನು ನವೆಂಬರ್ ನಾಲ್ಕರಂದು ಬಹಿರಂಗ ಪಡಿಸಲಾಯಿತು. ತಮ್ಮದೇ ಸರಕಾರದ ಪದಚ್ಯುತಿಗೆ ಮುಖ್ಯಮಂತ್ರಿ ಅಜಯ್ ಮುಖರ್ಜಿ ದೆಹಲಿಯಲ್ಲಿನ ಕಾಂಗ್ರೆಸ್ ನಾಯಕರ ಜತೆ ಸೇರಿ ಪಿತೂರಿ ರೂಪಿಸಿದ್ದರು ಎಂದು ಮುಖರ್ಜಿ ವಿರುದ್ಧ ಆರೋಪವನ್ನು ಮಾಡಲಾಯಿತು. ಮರುದಿನವೇ ಸಿಪಿಐ(ಎಂ) ಬೃಹತ್ ರ್ಯಾಲಿಯನ್ನು ನಡೆಸಿತು. ಪ್ರಜಾಪ್ರಭುತ್ವದ ವಿರುದ್ಧ ಕೆಲಸ ಮಾಡುವ ಶಕ್ತಿಗಳ ವಿರುದ್ಧ ಹೋರಾಡುವಂತೆ ಹಾಗೂ ಸರಕಾರವನ್ನು ಉಳಿಸಿಕೊಳ್ಳುವಂತೆ ಬ್ರಿಗೇಡ್ ಪರೆಡ್ ಮೈದಾನದಲ್ಲಿ ನಡೆದ ರ್ಯಾಲಿ ಜನತೆಗೆ ಕರೆ ಕೊಟ್ಟಿತು.

ವಿಶ್ವಾಸದ್ರೋಹಿ ಶಾಸಕರು ಜನತೆಯ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ ವಿಧಾನಸಭೆಯ ಒಳಗೆ ಮತ ಚಲಾಯಿಸುವ ಹಕ್ಕು ಅವರಿಗೆ ಇಲ್ಲ ಎಂದೂ ಬೃಹತ್ ರ್ಯಾಲಿ ಘೋಷಿಸಿತು. ರಾಜಿನಾಮೆ ನೀಡಿ ಪುನಃ ಚುನಾವಣೆ ಎದುರಿಸುವುದೊಂದೇ ಅವರಿಗುಳಿದ ಮಾರ್ಗವಾಗಿತ್ತು.

(ಮುಂದುವರಿಯುವುದು)

ಕರ್ನಾಟಕದಲ್ಲಿ ವಿರೋಧಪಕ್ಷಗಳೆಲ್ಲಿ? ಎಲ್ಲಿ?

ಜಿ.ಎನ್.ನಾಗರಾಜ್

ಹಾಸನದಲ್ಲಿ ಆಲೂಗಡ್ಡೆ ಬೆಲೆ ಕುಸಿದು ರೈತರು ಸಿಟ್ಟಿಗೆದ್ದು ರಸ್ತೆ ರೋಕೋ ಮಾಡಿದರು. ಹೊಸದುರ್ಗದಲ್ಲಿ ತೆಂಗಿನಕಾಯಿಯನ್ನು ರಸ್ತೆಯ ಮೇಲೆ ಸುರಿದು ಒಡೆದು ಹಾಕಿದರು. ಈರುಳ್ಳಿಯನ್ನು ಬೀದಿಯ ಮೇಲೆ ಸುರಿದರು. ಕಬ್ಬು ಬೆಳೆಗಾರರು ಬೆಂಗಳೂರಿಗೆ ಬರುವ ದಾರಿಯಲ್ಲಿ ವಾಹನಗಳಿಂದ ಇಳಿಸಲಾಯಿತು. ಅವರು ಅಲ್ಲಿಂದಲೇ ನಡೆದೇ ಬೆಂಗಳೂರಿಗೆ ಬರಲು ಹೊರಟರು. ಗುಲ್ಬರ್ಗದಲ್ಲಿ ತೊಗರಿಬೆಳೆಗಾರರು, ತೊಗರಿ ಮಿಲ್ ಮಾಲೀಕರು, ಇತರ ವ್ಯಾಪಾರಗಾರರು ಸೇರಿತೊಗರಿ ಬೆಲೆ ಕುಸಿತದ ಬಗ್ಗೆ ವಿಚಾರಸಂಕಿರಣ ಮಾಡಿದರು. ಗಂಗಾವತಿಯಲ್ಲಿ ಭತ್ತದ ಬೆಳೆಗಾರರು ಎಪಿಎಂಸಿ ಕಛೇರಿಗೆ ಮುತ್ತಿಗೆ ಹಾಕಿದರು. ಅವರ ಮೇಲೆ ಅಶ್ರುವಾಯು ಸಿಡಿಸಲಾಯಿತು. ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯಲ್ಲಿ ಬಂದ್ ಆಚರಿಸಲಾಯಿತು. ಹೀಗೆ ಇನ್ನೂ ಎಷ್ಟೋ! ಪ್ರತಿದಿನವೂ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ.

ಅದೇ ರೀತಿ ನೀರಾವರ್ ಪಂಪ್‌ಸೆಟ್ ವಿದ್ಯುತ್ ಬಳಕೆದಾರರು ರಾಜ್ಯದೆಲ್ಲೆಡೆಯಲ್ಲಿ ಬಿಲ್‌ಗಳನ್ನು ವಿರೋಧಿಸುತ್ತಿದ್ದಾರೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಸೂಚಿಸಿದ ದರ ಏರಿಕೆಗಳನ್ನು ವಿರೋಧಿಸುತ್ತಿದ್ದಾರೆ. ಈ ಹೋರಾಟದಲ್ಲಿ ಕಾಂಗ್ರೆಸ್, ಜನತಾದಳ(ಎಸ್), ಜನತಾದಳ(ಯು) ಎನ್ನುವ ಬೇಧವಿಲ್ಲದೆ ಬಳಕೆದಾರರೆಲ್ಲರ, ಹೋರಾಟಕ್ಕೆ ಸೇರಿದ್ದಾರೆ. ರಾಜ್ಯದ ರಾಜಧಾನಿಗೆ ಎಲ್ಲ ಜಿಲ್ಲೆಗಳಿಂದ ಧಾವಿಸಿ ವಾರಗಟ್ಟಲೆ ಧರಣಿ ಸತ್ಯಾಗ್ರಹ [illegible]ದ್ದಾರೆ.

[illegible], ಟೀ, ಪ್ಲಾಂಟೇಷನ್‌ಗಳನ್ನು ಉಳಿಸ[illegible]ಕೆಂದು ಮಾಲಿಕರು ಹಾಗೂ ಕಾರ್ಮಿಕರು ಒಪ್ಪಿ ವಿಚಾರಸಂಕಿರಣಗಳನ್ನು ನಡೆಸಿದ್ದಾರೆ. ಹಾಗೆಯೇ ಸಣ್ಣ ಕೈಗಾರಿಕೆಗಳ ಮಾಲೀಕರ ಸಂಘ ಹಾಗ ಕಾರ್ಮಿಕ ಸಂಘ ಸೇರಿ ತಮ್ಮೆಲ್ಲರ ಉಳಿವಿನ ಬಗ್ಗೆ ವಿಚಾರಸಂಕಿರಣ ನಡೆಸಿದ್ದಾರೆ.

ವಿದ್ಯಾರ್ಥಿ-ಯುವಜನರು ಮಹಿಳೆಯರು ಬೆಂಗಳೂರಿನಲ್ಲಿ ರ್‍ಯಾಲಿ ನಡೆಸಿ ತಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕರ್ನಾಟಕದ ಜನಸಮುದಾಯ ತಮ್ಮ ಹಲವು ಸಂಕಷ್ಟಗಳನ್ನು ಹಲವು ರೀತಿಯಲ್ಲಿ ತೋಡಿಕೊಳ್ಳುತ್ತಿದ್ದಾರೆ.

ಈ ಎಲ್ಲಾ ಸಮಸ್ಯೆಗಳ ನಡುವೆಯೇ ವಿಧಾನಮಂಡಲ ಅಧಿವೇಶನ ನಡೆದುಹೋಯಿತು.

ವಿಧಾನಮಂಡಲದ ಅಧಿವೇಶನಕ್ಕೆ ಮೊದಲು ವಿಧಾನಸಭಾ ಸದಸ್ಯರು ಅದರಲ್ಲಿಯೂ ರಾಜಕೀಯ ಪಕ್ಷಗಳು ಸಂಕಷ್ಟದಲ್ಲಿರುವ, ಹೋರಾಟದಲ್ಲಿರುವ ರೈತರನಿನು, ಅಶ್ರುವಾಯು ಗುಂಡೇಟಿನಿಂದ ಪೆಟ್ಟು ತಿಂದ ರೈತರನ್ನು ಭೇಟಿ ಮಾಡಲು ಅವರ ಸಂಕಟಗಳನ್ನು ಅರಿಯಲು, ಅವರೆಡೆಗೆ ಧಾವಿಸಲಿಲ್ಲ. ಬೆಲೆಗಳು ಕುಸಿಯುತ್ತಿರುವ ಬಗ್ಗೆ ಪತ್ರಿಕಾ ಹೇಳಿಕೆಗಳನ್ನು ನೀಡುವ ಕನಿಷ್ಟ ಪ್ರಯತ್ನ ಮಾಡಲಿಲ್ಲ.

ವಿಧಾನಸಭೆ ಆರಂಭವಾಯಿತು. ವಿಧಾನಸಭೆಯಲ್ಲಾದರೂ ಈ ಸಮಸ್ಯೆಗಳನ್ನು ವಿರೋಧ ಪಕ್ಷಗಳು ಎತ್ತುತ್ತಾರೆ, ತೀವ್ರ ಚರ್ಚೆಗಳಾಗಿ ಸ್ವಲ್ಪವಾದರೂ ಪರಿಹಾರ ಸಿಗುತ್ತದೆ, ಈ ಸಮಸ್ಯೆಗಳಿಗೆ ದೆಹಲಿಯಲ್ಲಿ ಆಳುತ್ತಿರುವ ಬಿಜೆಪಿ ಕೂಟವೇ ಪ್ರಧಾನಕಾರಣವಾದರೂ ರಾಜ್ಯ ಸರ್ಕಾರದ ಪಾತ್ರವಾದರೂ ಚರ್ಚೆಗೆ ಬರುತ್ತದೆ, ರಾಜ್ಯ ಸರ್ಕಾರದ ಅಧಿಕಾರ ವಲಯದಲ್ಲಿರುವ ಸಮಸ್ಯೆಗಳ ವಿಷಯದಲ್ಲಿಯಾದರೂ ಪರಿಹಾರ ಸಿಗುತ್ತದೆ ಎಂದು ಆಶಿಸಿದ್ದರು.

ಆದರೇನಾಯಿತು?

ವಿಧಾನಸಭೆ - ಪರಿಷತ್ ಅಧಿವೇಶನ ಆರಂಭವಾಯಿತು ಮತ್ತು ಮುಗಿದೇಹೋಯಿತು. ಹೊರಗಡೆ ಜನಸಮುದಾಯದ ಸಮಸ್ಯೆಗಳನ್ನು ತಣ್ಣಗಿನ ಚರ್ಚೆಯಲ್ಲಿ ತಣ್ಣಗೆ ಮಳುಗಿಸಲಾಯಿತು. ರೈತ ವಿದ್ಯುತ್ ಬಾಕಿಯ ಬ್ಗೆ ಪ್ರಸ್ತಾಪವಾಯಿತು. ನಿಜ ಆದರೆ ಬಾಕಿಯಲ್ಲಿ ಯಾವುದೇ ಪರಿಹಾರವನ್ನು ನೀಡುವುದಿರಲಿ ವಸೂಲಿಯನ್ನು ಕೂಡ ಒಂದೇ ಒಂದು ದಿನ ಮುಂದೂಡಲು ಆಶ್ವಾಸನೆಯನ್ನು ಪಡೆಯಲಾಗಲಿಲ್ಲ.

ನವೆಂಬರ್ ಕೊನೆಯವರೆಗೆ ನೀಡಿದ ಮುಗಿದ ಮೇಲೆ ಬಾಕಿ ವಸೂಲಿಯ ಬಗ್ಗೆ ದೃಢವಾದ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳೇ ಘೋಷಿಸಿದರು. ವಿರೋಧ ಪಕ್ಷಗಳ ಸದಸ್ಯರು ಕೇಳಿಕೊಂಡರು. ಈ ಎಲ್ಲ ಸಮಸ್ಯೆಯ ಮೂಲವಾದಜಾಗತೀಕರಣ, ವಿಶ್ವಬ್ಯಾಂಕ್ ಶರತ್ತುಗಳ ಚರ್ಚೆಗೆ ಬರಲೇ ಇಲ್ಲ. ಬೆಲೆಗಳ ಕುಸಿತದ ಬಗ್ಗ ನೆಪಮಾತ್ರಕ್ಕೆ ಚರ್ಚೆ ನಡೆಯಿತು. ಈ ಸಮಸ್ಯೆಯ ವ್ಯಾಪಾಕತೆ, ಪರಿಣಾಮ, ಮೂಲವನ್ನು ಪರಿಹಾರವನ್ನು ಪಡೆಯುವ ಯಾವ ಪ್ರಯತ್ನವೂ ನಡೆಯಲಿಲ್ಲ. ಸರ್ಕಾರವೇ ಕೇಂದ್ರ ಸರ್ಕಾರದ ಬಳಿ ನಿಯೋಗವನ್ನು ತೆಗೆದುಕೊಂಡು ಹೋಗುವ ನಿರ್ಧಾರ ಸಾರಿತು. ನಿಯೋಗವನ್ನು ತೆಗೆದುಕೊಂಡು ಹೋಗಿದ್ದಾರೆ ಕೂಡ. ಇದರ ಫಲವಾಗಿ ಮುಸುಕಿನ ಜೋಳ, ಭತ್ತ ಖರೀದಿಗಾಗಿ ಕೆಲವು ಕೇಂದ್ರಗಳನ್ನು ತೆರೆಯುವ ಹಾಗೂ ಕೆಲ ಶರತ್ತುಗಳನ್ನು ಸಡಿಲಿಸುವ ಕ್ರಮಗಳ ಬಗ್ಗೆ ಭರವಸೆ ಪಡೆಯಲಾಗಿದೆ. ಆದರೆ ಈ ಸಮಸ್ಯೆಯ ಮೂಲವಾದ ಆಮದು ನೀತಿಯ ಬಗ್ಗೆ ನೈಜವಾದ ಪರಿಹಾರ ಪಡೆಯುವ ಪ್ರಯತ್ನ ಆಗಲಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ವಿಶ್ವಬ್ಯಾಂಕ್ ಅಧ್ಯಕ್ಷರು ಬಂದದ್ದು, ಅವರ ಜೊತೆಗಿನ ಮಾತುಕತೆ, ಅವರು ನೀಡುವ ಸಾಲಗಳ ವಿವರ ಅದರ ಜೊತೆಗಿನ ಶರತ್ತುಗಳು ಇವು ಯಾವುದೂ ವಿಧಾನ ಮಂಡಲಕ್ಕೂ ವಿಶ್ವಬ್ಯಾಂಕ್ ಅಧ್ಯಕ್ಷರ ಭೇಟಿಗೂ ಸಂಬಂಧವೇ ಇಲ್ಲವೇನೋ ಎಂಬಂತಾಯಿತು. ಕರ್ನಾಟಕದ ಜನಕೋಟಿಯ ಸಂಕಟಗಳಿಗೆ ಕಾರಣವಾಗುವ ಈ ಪ್ರಶ್ನೆಯ ಬಗ್ಗೆ ವಿರೋಧ ವ್ಯಕ್ತವಾಗುವುದಿರಲಿ ಕರ್ನಾಟಕದ ಜನತೆಗೆ ಒಂದಕ್ಷರದ ಹೆಚ್ಚಿನ ಮಾಹಿತಿ ಸಿಗಲಿಲ್ಲ.

ನಿರಾವರಿ ಸಹಕಾರ ಸಂಘಗಳ ಮಸೂದೆ ಸಹಕಾರ ಸಂಘಗಳ ವಿಶ್ವವಿದ್ಯಾಲಯ ಮಸೂದೆ ಮೊದಲಾದ ಅನೇಕ ಮಸೂದೆಗಳನ್ನು ಸರ್ಕಾರ ವಿಧಾನಸಭೆಯ ಮುಂದೆ ಮಂಡಿಸಿತು. ವಿಶ್ವವಿದ್ಯಾಲಯ ಮಸೂದೆ ಜಂಟಿ ಪರಿಶೀಲನ ಸಮಿತಿಗೆ ಸಲ್ಲಿಸಿದ್ದನ್ನು ಬಿಟ್ಟರೆ ಉಳಿದ ಮಸೂದೆಗಳು ಯಾವ ತಿದ್ದುಪಡಿ ಇಲ್ಲದೆಯೇ ಸರ್ವಾನುಮತದಿಂದ ಅಂಗೀಕಾರವಾದವು.

ಇವೆಲ್ಲವುಗಳಿಂದಾಗಿ ಎಲ್ಲಿ ವಿರೋಧ ಪಕ್ಷಗಳು ಎಂದು ಕೇಳುವ ಪರಿಸ್ಥಿತಿ ಒದಗಿದೆ. ಇಂದು ಕರ್ನಾಟಕದ ಪ್ರಥಮ ವಿರೋಧ ಪಕ್ಷ ಬಿಜೆಪಿ ದೆಹಲಿಯಲ್ಲಿ ಅದೇ ಆಳುವ ಪಕ್ಷ ಮತ್ತು ಆ ಸರ್ಕಾರದ ನೀತಿಯಿಂದಲೇ ಇಂದಿನ ಎಲ್ಲ ಸಮಸ್ಯೆಗಳು ಉದ್ಭವಿಸಿರುವುದರಿಂದಲೇ ಆ ಪಕ್ಷಕ್ಕೆ ಯಾವ ಪ್ರಶ್ನೆ ಮಾಡಲು ನಾಲಗೆಯೇ ಏಳುತ್ತಿಲ್ಲ. ಎಲ್ಲಿ ನಮಗೆ ಅದು ತಿರುಗು ಬಾಣವಾದೀತೋ ಎಂಬ ಭಯ. ಇನ್ನು ಎರಡನೇಯ ಪಕ್ಷ-ದೆಹಲಿಯ ಬಿಜೆಪಿ ಕೂಟದಲ್ಲಿಯೇ ಉಳಿದಿರುವ ಜನತಾದಳ(ಯು) ತಾನೆಲ್ಲಿದ್ದೇನೆಂಬ ಬಗ್ಗೆಯೇ ಹುಡುಕಾಟ ನಡೆಸಿದೆ. ಹಿಂದೆ ವಿಧಾನಸಭೆಯಲ್ಲಿ ಜನರ ಪ್ರಶ್ನೆಗಳನ್ನು, ರೈತರ ಪ್ರಶ್ನೆಗಳನ್ನು ಎತ್ತುತ್ತಿದ್ದ ಸಿಪಿಐ(ಎಂ), ಕರ್ನಾಟಕ ರಾಜ್ಯ ರೈತ ಸಂಘಗಳು ವಿಧಾನಸಭೆಯಲ್ಲಿ ಇಂದು ಪ್ರಾತಿನಿಧ್ಯವಿಲ್ಲ. ಇಂತಹಪರಿಸ್ಥಿತಿಯಲ್ಲಿ ವಿಧಾನಸಭೆಯ ಹೊರಗಡೆಯೇ ಜನರ ಚಳುವಳಿಗಳ ಮೂಲಕವೇ ನಿಜವಾದ ವಿರೋಧ ವ್ಯಕ್ತವಾಗಬೇಕಿದೆ.

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ.ಗುರುಶಾಂತ್

ದೆಹಲಿಗೆ ನಿಯೋಗ: ಕಣ್ಣಿಗೆ ಮಣ್ಣೆರೆಚುವ ಯತ್ನ

ಭತ್ತ, ಮೆಕ್ಕಜೋಳ, ತೊಗರಿ, ತೆಂಗು, ಅಡಿಕೆ, ಈರುಳ್ಳಿ ಮುಂತಾದ ಬೆಲೆಗಳು ವಿಪರೀತ ಕುಸಿದು ರೈತರು ಕಂಗಾಲಾಗಿ ಪ್ರತಿಭಟನೆಗೆ ಇಳಿದು ನಂತರ ರಾಜ್ಯ ಸರ್ಕಾರ 'ಸರ್ವಪಕ್ಷ'ಗಳ ನಿಯೋಗವನ್ನು ದೆಹಲಿಗೆ ಕರೆದುಕೊಂಡುಹೋಗಿ ಕೇಂದ್ರ ಸಚಿವರನ್ನು ಕಂಡು ಬಂದಿದೆ. ಈ 'ಸರ್ವಪಕ್ಷ'ಗಳೆಂಬ ನಿಯೋಗದಲ್ಲಿ ರೈತರ ಸಮಸ್ಯೆಗಳು ಪರಿಹಾರಕ್ಕೆ ನಿರ್ದಿಷ್ಟ ಬೇಡಿಕೆ ಇಟ್ಟು ಹೋರಾಡುತ್ತಿರುವ ಸಿಪಿಐ(ಎಂ) ಇಲ್ಲ. ಸಿಪಿಐ(ಎಂ), ಸಿಪಿಐ ಪಕ್ಷಗಳು ರಾಜಕೀಯ ಪಕ್ಷಗಳಲ್ಲವೇ? ಈ ಪಕ್ಷಗಳನ್ನು ಹೊರಗಿಟ್ಟು ದೆಹಲಿಯಾತ್ರೆ ನಡೆಸಿದ್ದು ಕೇವಲ ಜನರ ಕಣ್ಣಿಗೆ ಮಣ್ಣೆರಚುವ ನಾಟಕವಷ್ಟೆ. ಮೇಲಾಗಿ ಕಾಂಗ್ರೆಸ್, ಬಿಜೆಪಿ ಜೆಡಿ(ಎಸ್) ಒಳಗೊಂಡು ಹೋಗಿಬಂದ ಈ ಪಕ್ಷಗಳು ವಿಧಾನಸಭೆಯಲ್ಲಿ ಜ್ವಲಂತ ಪ್ರಶ್ನೆಗಳ ಬಗ್ಗೆ ಅಷ್ಟಾಗಿ ಚರ್ಚಿಸದೇ ಹೋದವು. ಅದಕ್ಕಿಂತಲೂ ಈ ಎಲ್ಲಾ ಪಕ್ಷಗಳು ಸಹ ಕೃಷಿರಂಗದ ಇಂದಿನ ದಿವಾಳಿಗೆ ಕಾರಣವಾದ ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಆಮದು-ರಫ್ತು ನೀತಿಗಳನ್ನು ಒಂದಿಲ್ಲೊಂದು ವಿಧದಲ್ಲಿ ಸಮರ್ಥಿಸಿದವರೇ, ಜಾರಿಗೊಳಿಸಿದವರೆ. ಹೀಗಾಗಿ ಕೇಂದ್ರ ಸರ್ಕಾರವೇ ಹೊಸ ಆಮದು-ರಫ್ತು ನೀತಿಯನ್ನು ಕೈ ಬಿಡದೆ ರೈತರ ಹಿತ ಕಾಪಾಡಲು ಸಾಧ್ಯವೇ ಇಲ್ಲ. ರಾಜ್ಯದಲ್ಲಿಯೂ ರೈತರ ಹಿತ ಕಾಯಲು ಏನೆಂದೂ ಮಹತ್ವದ ನೀತಿ ತಳೆಯದೇ, ಪ್ರಕಟಿಸಿದ ಖರೀದಿ ಕೇಂದ್ರಗಳು, 100 ಕೋಟಿ ಆವರ್ತ ನಿಧಿ ಎಂಬುದು ಕೇವಲ ಬೂಟಾಟಿಕೆಯದ್ದಾಗಿದೆ. ಹೀಗೆ ಎಸ್.ಎಂ.ಕೃಷ್ಣರ ವರಸೆ. ನಿಜವಾದ ಪರಿಹಾರ ನೀಡದೇ ನಿಷ್ಫಲಕಾರಿ ಮಾತ್ರವಲ್ಲ. ತಮ್ಮ ಹೊಣೆಯನ್ನು ಕೇಂದ್ರ ಸರ್ಕಾರದ ಮೇಲೆ ಹಾಕಿ ಕಣ್ಣು ಮುಚ್ಚಲಷ್ಟೇ ಸಹಾಯಕವಾದೀತು. ಆದರೆ ಬವಣೆಯಲ್ಲಿ ಬೇಯುತ್ತಿರುವ ರೈತರಿಗೆ ಪರಿಹಾರ ತರಲಾರದು.

ವೀರಪ್ಪನ್ ವಿರುದ್ಧ ಒಮ್ಮತದ ಕಾರ್ಯಾಚರಣೆ



ರಾಜ್ ಹಾಗೂ ಸಹಚರರು ಬಿಡುಗಡೆಯಾಗಿ ಹಲವು ವಾರಗಳು ಕಳೆದರೂ ಒಟ್ಟು ಅಪರಹಣದ ಪ್ರಕರಣದ ಬಗೆಗೆ ಹಲವಾರು ವದಂತಿಗಳು, ಉಹಾಪೋಹ, ತಿಕ್ಕಾಟಗಳು ನಡೆದೇ ಇವೆ. ಬಿಡುಗಡೆಯಲ್ಲಿ ಭಾಗಿದಾರರು, ಸೂತ್ರಧಾರಿಗಳಾರು, ಅವರ ಹಿನ್ನೆಲೆಗಳು ಪ್ರಶ್ನಾರ್ಹವಾಗಿ, ಇಲ್ಲವೇ ಕಥೆಗಳಾಗಿ ಹಬ್ಬಿವೆ. ಬಿಡುಗಡೆಯಲ್ಲಿ ಪಾತ್ರವಹಿಸಿದ ನೆಡುಮಾರನ್, ಡಾ. ಬಾನು, ಕುಖ್ಯಾತ ಎಲ್‌ಟಿಟಿಇ ಸಂಬಂಧ ಹೊಂದಿರುವುದನ್ನು ಗುರುತಿಸಲಾಗಿದೆ. ಗ್ರಾನೈಟ್ ಲಾಬಿಯೂ ಪಾತ್ರವೂ ಕಂಡಿದೆ. ಇವೆಲ್ಲವುಗಳೂ ಸ್ಪಷ್ಟವಾಗಬೇಕಿದೆ.

ಅಂತೂ ವಿಳಂಬವಾದರೂ ವೀರಪ್ಪನ್-ತಂಡದ ವಿರುದ್ಧ ಕರ್ನಾಟಕ, ತಮಿಳುನಾಡು ಸರ್ಕಾರಗಳು ಜಂಟಿಯಾಗಿ 'ಸ್ಪೆಷಲ್ ಟಾಸ್ಕ್ ಫೋರ್ಸ್ (STF) ಮೂಲಕ ಕಾರ್ಯಾಚರಣೆಗೆ ನಿರ್ಧರಿಸಿರುವುದು ಸ್ವಾಗತಾರ್ಹ. ಕೇಂದ್ರ ಸರ್ಕಾರವೂ ತನ್ನ ಭದ್ರತಾ ಪಡೆಗಳನ್ನು ಕಳುಹಿಸಿ ಸಹಕರಿಸುವುದಾಗಿ ಹೇಳಿಕೆ ಬಂದಿದೆ. ವೀರಪ್ಪನ್ ವಿರುದ್ಧದ ಈ ಕಾರ್ಯಾಚರಣೆಯಲ್ಲಿ ಎರಡು ಸರ್ಕಾರಗಳೂ ಪೂರ್ಣ ಒಮ್ಮತ ಮನಸ್ಸಿನಿಂದ ಭಾಗಿಯಾಗಬೇಕು. ಒಂದು ಸರ್ಕಾರದ ಯತ್ನಗಳು ಮಾತ್ರ ಯಶಸ್ಸು ತರಲಾರದು ಎಂಬುದು ಅನುಭವದ ಕಹಿ ಮಾತು.

ಈ ನಡುವೆ ರಾಜ್ ಜೊತೆಯೇ ಅಪಹರಿಸಲ್ಪಟ್ಟಿದ್ದು, ನಂತರ ಕಾಡಿನಿಂದ ತಪ್ಪಿಸಿಕೊಂಡುಬಂದ ನಾಗಪ್ಪ ಮಾರಡಗಿ ಹಲವಾರು ವಿವಾದಗಳು, ಅನುಮಾನಗಳ ಕೇಂದ್ರ ಬಿಂದು. ನಾಗಪ್ಪ, ಅಪರಹಣಕ್ಕೊಳಗಾದವರಲ್ಲಿ ರಾಜ್ ಕುಟುಂಬದ ಆಚೆಗಿನ ವ್ಯಕ್ತಿ. ರಾಜ್ ಕುಟುಂಬ ಒಳಗೊಂಡು ಆತನನ್ನು ನಡೆಸಿಕೊಂಡ ರೀತಿ ಹಲವಾರು ಪ್ರಶ್ನೆಗಳನ್ನು ಎತ್ತಿದೆ. ನಾಗಪ್ಪ ಈಗಲೂ ಒಂದೊಂದು ಕಡೆ ಒಂದೊಂದು ಹೇಳಿಕ ನೀಡುವುದನ್ನು ಮುಂದುವರಿಸಿದ್ದಾನೆ. ಒಟ್ಟಾರೆ ಸತ್ಯ ಪೂರ್ಣ ಹೊರಬಿದ್ದಿಲ್ಲ. ಆ 'ಸತ್ಯ' ಏನೆಂಬುದನ್ನು ಸರ್ಕಾರ ಕಂಡುಕೊಂಡು ಸಾರ್ವಜನಿಕ ಮುಂದಿಡಬೇಕಾಗಿದೆ.

ಗ್ರಾಮಾಂತರ ಕೃಪಾಂಕ: ಕಾರ್ಯಸಾಧು ಕ್ರಮ ಬೇಕು

ಗ್ರಾಮಾಂತರ ಅಭ್ಯರ್ಥಿಗಳಿಗೆ ಹಿಂದೆ ನೀಡಲಾಗುತ್ತಿದ್ದ ಕೃಪಾಂಕ ಸೌಲಭ್ಯಗಳನ್ನು ಸುಪ್ರೀಂಕೋರ್ಟ್ ನಿರಾಕರಿಸಿದ್ದ ನಂತರ ರಾಜ್ಯದಲ್ಲಿ ಈ ಬಗ್ಗೆ ಬಿಸಿಬಿಸಿ ಚರ್ಚೆ ಹಾಗೂ ವ್ಯಾಪಕವಾದ ಹೋರಾಟಗಳೂ ನಡೆದಿದ್ದವು. ಹಳೆಯ ಸೂತ್ರವನ್ನು ಜಾರಿಗೊಳಿಸಲು ಏನಾದರೂ ಹೊಸ ಮಾರ್ಗಗಳಿವೆಯೇ ಎಂದು ಪರಿಶೀಲಿಸುತ್ತಲೇ ತಕ್ಷಣದಲ್ಲಿ ಪ್ರಾಯೋಗಿಕವಾದ ಒಂದು ಸೂತ್ರವನ್ನು ರೂಪಿಸಲು ಸರ್ಕಾರಕ್ಕೆ SFI-DYFI ಸಂಘಟನೆಗಳು ಬೃಹತ್ ರ್‍ಯಾಲಿ ನಡೆಸಿ ಒತ್ತಾಯಿಸಿದ್ದವು. ರಾಜ್ಯ ಸರ್ಕಾರವೂ ಸಹ ನ್ಯಾ. ರಾಮಕೃಷ್ಣ ಆಯೋಗವನ್ನು ರಚಿಸಿ ಶೇ 5 ರಷ್ಟು ಹುದ್ದೆಗಳನ್ನು ಮೀಸಲಿಡುವ ಪ್ರಸ್ತಾಪವೂ ಪ್ರಕಟವಾಗಿತ್ತು. ಆದರೆ ಅಗಾಧ ಸಂಖ್ಯೆಯಲ್ಲಿರುವ ಗ್ರಾಮೀಣ ಜನತೆ ಎದುರು, ಇದು ಏನೂ ಸಾಲದು, ಪ್ರಮಾಣವನ್ನು ಹೆಚ್ಚಿಸಬೇಕು ಎಂದೂ ಚರ್ಚೆಯಲ್ಲಿ ಮುಖ್ಯಮಂತ್ರಿಗಳಿಗೆ ಆಗ್ರಹಿಸಲಾಗಿತ್ತು.

ಅಂತಿಮವಾಗಿ ವಿಧಾನಸಭೆಯಲ್ಲಿಯೂ ಚರ್ಚಿಸಿ ಸರ್ಕಾರ ಶೇ 25 ರಷ್ಟು ಮೀಸಲಾತಿ ನೀಡಲು (ಇರುವ ಮೀಸಲಾತಿಯಲ್ಲಿ) ಒಪ್ಪಿದೆ. ಇದು ಸ್ವಾಗತಾರ್ಹ. ಆದರೆ ಇದರ ಜಾರಿಯ ಬಗ್ಗೆ ಸರ್ಕಾರ

ಪುಟ 10 ಕ್ಕೆ

ಆರೋಗ್ಯದ ಬೆಳಕಿಗಾಗಿ ಆಂದೋಲನ

ಆರೋಗ್ಯ ಮತ್ತು ಶಿಕ್ಷಣದ ಕಾಳಜಿಯು ಯಾವುದೇ ಸರಕಾರದ ಆದ್ಯ ಕರ್ತವ್ಯವಾಗಿದೆ. ಅದರಲ್ಲೂ ಆರೋಗ್ಯ ಮುಖ್ಯವಾದದ್ದು. ಜನತೆಯ ಆರೋಗ್ಯವನ್ನು ಕಾಪಾಡಲು ಸರಕಾರವು ಅತ್ಯಂತ ಪ್ರಾಮಾಣಿಕ ಕಳಕಳಿ ಹೊಂದಿರಬೇಕು. ಉತ್ತಮ ಪೌಷ್ಟಿಕ ಆಹಾರ ವಿತರಣೆಗಾಗಿ ಕ್ರಮವಹಿಸಬೇಕು. ಹೀಗಾಗುತ್ತಿದೆಯೇ?

ಡಾ॥ ಪ್ರಕಾಶ್ ಸಿ.ರಾವ್
ನೀಲಾ ಕೆ.

ನಮ್ಮ ಕರ್ನಾಟಕವು ಐದು ಕೋಟಿ ಜನಸಂಖ್ಯೆಗೆ ತನ್ನ ಮಡಿಲೊಳಗೆ ಆಸರೆ ನೀಡಿದೆ. ಉತ್ತರದಿಂದ ದಕ್ಷಿಣಕ್ಕೆ700 ಕಿ.ಮಿ. ಮತ್ತು ಪೂರ್ವದಿಂದ ಪಶ್ಚಿಮಕ್ಕೆ 400 ಕಿ.ಮಿ. ಗಳ ವಿಶಾಲ ವಿಸ್ತೀರ್ಣ ಹೊಂದಿದೆ. ಜನಸಂಖ್ಯೆ ಮತ್ತು ವಿಸ್ತೀರ್ಣದಲ್ಲಿ ಕರ್ನಾಟಕವು 8ನೇ ಸ್ಥಾನ ಪಡೆದಿದೆ. ಶೇಕಡ 35 ಕ್ಕೂ ಹೆಚ್ಚು ಜನ ಬಡತನವನ್ನೇ ಹಾಸಿ ಹೊದ್ದವರಿದ್ದಾರೆ(ಬಿಪಿಎಲ್ ಸರ್ವೆ). ಉತ್ತರ ಕರ್ನಾಟಕದಲ್ಲಿ ಕಡುಬಡತನದ ಪ್ರಮಾಣ ಇನ್ನೂ ಹೆಚ್ಚಿದೆ. ಒಟ್ಟು ಜನತೆಯ ಶೇಕಡ 35 ರಷ್ಟು ಜನರು ವ್ಯವಸಾಯವನ್ನೇ ನಂಬಿಕೊಂಡವರು. 30% ಕ್ಕೂ ಹೆಚ್ಚು ಜನ ರಟ್ಟೆಯ ಕಸುವಿನಿಂದ ಹೊಟ್ಟೆ ತುಂಬಿಸಿಕೊಳ್ಳುವ ಕೃಷಿ ಕಾರ್ಮಿಕರು (ಪಕ್ಕಾ ಭೂಹೀನರು). 20% ಕ್ಕೂ ಹೆಚ್ಚು ಜನ ಕಲ್ಲು ಗಣಿ ಕಾರ್ಮಿಕರು, ಕಟ್ಟಡ ನಿರ್ಮಾಣಕಾರರು, ಇತ್ಯಾದಿ ಕಾರ್ಮಿಕ ಜಗತ್ತಿನವರೇ.

ಇದು ಅತ್ಯಂತ ಸ್ಥೂಲವಾಗಿ ಕಂಡು ಬರುವ ಕರ್ನಾಟಕದ ಚಿತ್ರಣ. ಅಂದರೆ ಈ ಎಲ್ಲ ಸಾಮಾನ್ಯ ಜನತೆಯ ಓಟುಗಳನ್ನು ಪಡೆದೇ ಯಾವುದೇ ಸರಕಾರ ಅಧಿಕಾರದ ಗಾದಿಗೆ ಏರಲು ಸಾಧ್ಯ. ಪರಿಸ್ಥಿತಿ ಹೀಗಿರುವಾಗ ಆಳುವ ಸರಕಾರವು ತನ್ನ ರಾಜ್ಯದ ಜನತೆಯ ಎಲ್ಲಾ ಆಗುಹೋಗುಗಳನ್ನು ಚಿಂತಿಸಬೇಕು. ಎಲ್ಲ ರೀತಿಯ ಅಭಿವೃದ್ಧಿಗಾಗಿ ಶ್ರಮಿಸಬೇಕು. ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣದ ಕಾಳಜಿಯು ಯಾವುದೇ ಸರಕಾರದ ಆದ್ಯ ಕರ್ತವ್ಯವಾಗಿದೆ. ಅದರಲ್ಲೂ ಆರೋಗ್ಯ ಮುಖ್ಯವಾದದ್ದು. ಜನತೆಯ ಆರೋಗ್ಯವನ್ನು ಕಾಪಾಡಲು ಸರಕಾರವು ಅತ್ಯಂತ ಪ್ರಾಮಾಣಿಕ ಕಳಕಳಿ ಹೊಂದಿರಬೇಕು. ಉತ್ತಮ ಪೌಷ್ಟಿಕ ಆಹಾರ ವಿತರಣೆಗಾಗಿ ಕ್ರಮವಹಿಸಬೇಕು. ಹೀಗಾಗುತ್ತಿದೆಯೇ?

ಆದರೆ ವಿಡಂಬನೆ ನೋಡಿ. ನಮ್ಮ ಸರಕಾರವು ಬಡತನ ರೇಖೆಯ ಕೆಳಗಿರುವ ಜನತೆಯ 20% ರಷ್ಟು ಮಾತ್ರ ರೇಷನ್ ಕಾರ್ಡ್ ವಿತರಣೆ ಮಾಡಿದೆ. (ಕೇರಳದಲ್ಲಿ 93% ವಿತರಿಸಲಾಗಿದೆ) ನ್ಯಾಯ ಬೆಲೆ ಅಂಗಡಿಯಲ್ಲಿ ದೊರೆಯುವ ರೇಷನ್ ಗುಣಮಟ್ಟವು ಅತ್ಯಂತ ಕಳಪೆಯಾಗಿದೆ. ಇಂತಹ ಕಳಪೆ ಆಹಾರ

"2000 ದಷ್ಟು ಹೊತ್ತಿಗೆ ವಿಶ್ವದ ಜನತೆಗೆಲ್ಲ ಆರೋಗ್ಯ" ಎಂದು ವಿಶ್ವಸಂಸ್ಥೆ ಘೋಷಿಸಿದ್ದು. ಗೇಣುದ್ದ ಹೊಟ್ಟೆಗೆ ಸರಿಯಾದ ಅನ್ನ ಬಿದ್ದರೇನೆ, ಮಾರುದ್ದ ಮೈ ಮುರಿದು ದುಡಿಯಲು ಸಾಧ್ಯ ಎಂಬ ಕಟು ಸತ್ಯ ಬಲ್ಲ ದುಡಿವ ಜೀವಿಗಳಿಗೆ ಗೊತ್ತಿದೆ. ಆದರೆ ಸರಕಾರವು ಜನರ ಗೇಣುದ್ದ ಹೊಟ್ಟೆ ತುಂಬಲು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಯನ್ನು ಬಲಪಡಿಸುವ ಬದಲಿಗೆ ಅದನ್ನು ನಾಶ ಪಡಿಸಲು ಹೊರಟಿದೆ

ಸೇವನೆಯಿಂದಾಗಿ ಬಹುಸಂಖ್ಯಾತ ಬಡವರು ರಕ್ತಹೀನತೆ ನಿಶ್ಯಕ್ತಿಯಿಂದಾಗಿ ಹಲವು ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಮಾತ್ರವಲ್ಲ, ಈಚಿಗೆ 64 ಲಕ್ಷ ರೇಷನ್ ಕಾರ್ಡ್‌ದಾರರಲ್ಲಿ 20 ಲಕ್ಷ ಜನರನ್ನು ಮಾತ್ರ ಬಡತನ ರೇಖೆಯ ಕೆಳಗೆ ತಂದು ಉಳಿದ ಬಡವರನ್ನು ಕಾಗದಗಳಲ್ಲಿ ಶ್ರೀಮಂತರನ್ನಾಗಿಸಿ ರೇಷನ್ ಕಾರ್ಡ್ ಕಿತ್ತುಕೊಳ್ಳಲು ಸರಕಾರ ಯೋಜಿಸಿದೆ. ಪರಿಸ್ಥಿತಿ ಹೀಗಿರುವಾಗ ಹೊಟ್ಟೆಗೆ ಆಹಾರ ಕೊಡದೆ ವ್ಯಕ್ತಿಯ ಆರೋಗ್ಯ ಕಾಪಾಡುವ ಅಲಾವುದ್ದೀನನ ಮಾಂತ್ರಿಕ ದೀಪವೇನಾದರೂ ಸರಕಾರ ಕಂಡು ಹಿಡಿದಿದೆಯೇ....? ಈ ಪ್ರಶ್ನೆಗೆ ಬಹುಶಃ ಸರಕಾರವು ಉತ್ತರಿಸಲಾರದು.

ಜನತೆಯು ಈಗ ನೆನಪಿಸಿಕೊಳ್ಳುತ್ತಿದ್ದಾರೆ. "2000 ದಷ್ಟು ಹೊತ್ತಿಗೆ ವಿಶ್ವದ ಜನತೆಗೆಲ್ಲ ಆರೋಗ್ಯ" ಎಂದು ವಿಶ್ವಸಂಸ್ಥೆ ಘೋಷಿಸಿದ್ದು. ಗೇಣುದ್ದ ಹೊಟ್ಟೆಗೆ ಸರಿಯಾದ ಅನ್ನ ಬಿದ್ದರೇನೆ, ಮಾರುದ್ದ ಮೈ ಮುರಿದು ದುಡಿಯಲು ಸಾಧ್ಯ ಎಂಬ ಕಟು ಸತ್ಯ ಬಲ್ಲ ದುಡಿವ ಜೀವಿಗಳಿಗೆ ಗೊತ್ತಿದೆ. ಆದರೆ ಸರಕಾರವು ಜನರ ಗೇಣುದ್ದ ಹೊಟ್ಟೆ ತುಂಬಲು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಯನ್ನು ಬಲಪಡಿಸುವ ಬದಲಿಗೆ ಅದನ್ನು ನಾಶ ಪಡಿಸಲು ಹೊರಟಿದೆ ಎಂಬುದೂ ಅಷ್ಟೇ ಕಟು ಸತ್ಯ.

ಆರೋಗ್ಯದ ಭಾಗ್ಯವನ್ನು ಹೆಚ್ಚಿಸಬೇಕಾದ ಆಹಾರ ವಿತರಣೆಯ ಪ್ರಶ್ನೆಯು ಹೀಗಾದರೆ, ಆಹಾರ ಸಂರಕ್ಷಣೆ ಮತ್ತು ಆಹಾರ ಉತ್ಪಾದನೆಯ ಬಗ್ಗೆ ಸರಕಾರದ ನಿಲುವೇನು?


ಆಹಾರ ಉತ್ಪಾದನೆ ಮಾಡುವ ಒಕ್ಕಲಿಗನಿಗೆ ಕೊಡುವ ಎಲ್ಲ ಸೌಲಭ್ಯಗಳನ್ನು ಕಿತ್ತುಕೊಳ್ಳಲಾಗಿದೆ. (ವಿದ್ಯುಚ್ಛಕ್ತಿ ಬೆಲೆ ಹೆಚ್ಚಳ, ರಸಗೊಬ್ಬರ, ಬೀಜ, ಕ್ರಿಮಿನಾಶಕಗಳ ರಿಯಾಯಿತಿ ಕಡಿತ ಇತ್ಯಾದಿ) ಅಲ್ಲದೆ ರೈತನು ಬೆಳೆದ ಬೆಳೆಗೆ ಕನಿಷ್ಟ ಬೆಂಬಲ ಬೆಲೆಯ ನಿಗದಿಸಲು ಸರಕಾರ ಮುಂದೆ ಬರುತ್ತಿಲ್ಲ. ಮಾರುಕಟ್ಟೆಯಲ್ಲಿ ಆಹಾರ ದಾಸ್ತಾನು ಬಂದಾಗ ಬೆಲೆ ನೆಲಕಚ್ಚುತ್ತದೆ. ಹೈರಾಣಾಗಿ ಬಿತ್ತಿ ಬೆಳೆದ ರೈತನು ಕಂಗಾಲಾಗಿ ಮತ್ತೊಮ್ಮೆ ಭೂಮಿ ಕಡೆ ಮುಖ ಮಾಡದೆ ಸಾವಿನ ಮನೆ ಕಡೆಗೆ ಸಾಗಿ ಆತ್ಮಹತ್ಯೆಯ ಹಾದಿ ತುಳಿದ ಉದಾಹರಣೆ ಎಷ್ಟಿಲ್ಲ!

ಇನ್ನು ಹೊಟ್ಟೆಗೆ ಅನ್ನ ಬೆಳೆವ ಭೂಮಿಯನ್ನೆಲ್ಲ ಹೊರದೇಶದ ಕಂಪನಿಗಳಿಗೆ ಮಾರುವ ಪ್ರಕ್ರಿಯೆಯೂ ವೇಗವಾಗಿ ನಡೆದಿದೆ. ವಿದೇಶಕ್ಕೆ ಕಳಿಸುವುದಕ್ಕಾಗಿ ಗುಲಾಬಿ ಹೂ, ಹಣ್ಣು ಬೆಳೆಯಲು ಸರಕಾರದ ಪ್ರೋತ್ಸಾಹ ಇದೆ. ಭತ್ತ, ರಾಗಿ ಬೆಳೆಯಲು ಅಲ್ಲ. ನೋಡಿ ಹೇಗಿದೆ? ಇನ್ನೂ ಈ ಎಲ್ಲ ಸಂಕಷ್ಟಗಳ ನಡುವೆಯೂ ಒಕ್ಕಲಿಗನು (ರೈತ) ಆಹಾರ ಬೆಳೆ ಬೆಳೆದಿರುವುದನ್ನು ಬಡಜನತೆಗೆ ಕಮ್ಮಿ ಬೆಲೆಯಲ್ಲಿ ಕೊಡಲೂ ಸರಕಾರಕ್ಕೆ ಮನಸ್ಸಿಲ್ಲ. ಬೇಕಾದರೆ ಅರಬ್ಬೀ ಸಮುದ್ರಕ್ಕೆ ಎಸೆದಾರು. (ಈಗಾಗಲೇ ಲಕ್ಷಗಟ್ಟಲೆ ಗೋದಿಯನ್ನು ಅಮೆರಿಕ ಮುಂತಾದ ದೇಶಗಳು ಸಮುದ್ರಕ್ಕೆ ಎಸೆದ ಉದಾಹರಣೆಗಳಿವೆ)

ಆಹಾರದ ವಿಷಯ ಹೀಗಾಯಿತು. ರೋಗರುಜಿನ ಬಾರದಂತೆ ಮತ್ತು ಉತ್ತಮ ಆರೋಗ್ಯಕ್ಕಾಗಿ ಶುಚಿಯಾದ ನೀರಿನ ಅವಶ್ಯಕತೆ ಇದ್ದು ಕನಿಷ್ಟ ನೀರನ್ನಾದರೂ ಈ ದೇಶದ ಸರ್ವಜನತೆಗೆ ಒದಗಿಸಲಾಗುತ್ತಿದೆಯೇ? ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿಶಾಲವಾಗಿ ಮತ್ತು ಸಮೃದ್ಧವಾಗಿ ತಲೆ ಎತ್ತಿ ನಿಂತ ಭಾರತದಲ್ಲಿ ಗಂಗೆ ಮೈದುಂಬಿ ಹರಿಯುತ್ತಿದ್ದಾಳೆ. ಮಾತ್ರವಲ್ಲ, ಗೋದಾವರಿ, ಕೃಷ್ಣ, ಕಾವೇರಿ, ತುಂಗೆ, ಯಮುನಾ...ಹೀಗೆ ಜಲಧಾರೆ ಕೇವಲ ಧಾರೆಯಾಗಿ ಅಲ್ಲ ಧುಮ್ಮಿಕ್ಕಿ ಹರಿಯುತ್ತಾಳೆ. ಆದರೆ ಈ ದೇಶದ ನೆಲದ ಮೇಲೆ ವಾಸಿಸುವ ಜನರಿಗೆ ಅದರಲ್ಲೂ ಬಡಜನರಿಗೆ ಮಾತ್ರ ಶುದ್ಧ ನೀರು ಕುಡಿವ ಭಾಗ್ಯವಿಲ್ಲ. ಶೇಕಡ 35 ರಷ್ಟು ಗ್ರಾಮೀಣ ಬಡಜನತೆಯು ಶುದ್ಧ ಕುಡಿವ ನೀರಿನಿಂದ ವಂಚಿತರಾಗಿರುವುದರಿಂದ ಪ್ರತಿವರ್ಷವೆಲ್ಲ ಕಾಲರಾ ರೋಗವು ಉಲ್ಬಣವಾಗುತ್ತಿದೆ. ನಗರಗಳಲ್ಲಿ ಶೇಕಡಾ 20 ಕ್ಕೂ ಹೆಚ್ಚು ಜನತೆಗೆ ಸಮರ್ಪಕ ಶುದ್ಧ ನೀರಿಲ್ಲ. ಗುಲಬರ್ಗ ಜಿಲ್ಲೆಯ ನಗರಗಳಲ್ಲಿ ಶೇಕಡ 60 ರಷ್ಟು ಕಲುಷಿತ ನೀರಿನ ಪೂರೈಕೆ ಇದೆ ಎಂಬುದು ಅಘಾತಕಾರಿ ಸಂಗತಿಯಾಗಿದೆ. ಕರ್ನಾಟಕ ನಗರ

ಯಾವುದೇ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ. ಎಲ್ಲ ರೀತಿಯ ಕಲುಷಿತ ನೀರು, ರೊಜ್ಜು ರಸ್ತೆಯ ಮೇಲೆನಿಂದಲೇ ಹರಿದು ಹೋಗಬೇಕು. ಕನಿಷ್ಟ ಪಕ್ಷ ಮೇಲು ಚರಂಡಿಗಳ ನಿರ್ಮಾಣದ ಬಗ್ಗೆ ಸರಕಾರ ತಲೆಕೆಡಿಸಿಕೊಳ್ಳುವುದಿಲ್ಲ.

ನೀರು ಸರಬರಾಜು ಒಳಚರಂಡಿ ಮಂಡಳಿಯ ಸಮೀಕ್ಷೆಯ ಪ್ರಕಾರ (1997-98) ಒಟ್ಟಾರೆ 205 ನಗರಗಳ ಪೈಕಿ 190 ನಗರಗಳಲ್ಲಿ ಅಸಮರ್ಪಕ ನೀರಿನ ಪೂರೈಕೆ ಇದೆ. ಇದು ಏನನ್ನು ಸೂಚಿಸುತ್ತದೆ? ಮಾನವನ ಶರೀರಕ್ಕೆ ಪ್ರಮುಖ ಜೀವವಸೆಲೆಯಾದ ಜಲ(ನೀರು)ವನ್ನು ಪೂರೈಸುವಲ್ಲಿ ಚುನಾಯಿತ ಪ್ರತಿನಿಧಿಗಳಾಗಲಿ ಸರಕಾರಿ ಯಂತ್ರಗಳಾಗಲಿ



ಪ್ರಾಮಾಣಿಕ ಯೋಜನೆ ಹೊಂದಿಲ್ಲ. ಕುಡಿಯುವ ನೀರೇ ಇಲ್ಲದಾಗ ಇತರೆ ಸ್ವಚ್ಛತೆ ಹೇಗೆ ಸಾಧ್ಯ? ಚಿಂತಿಸಿ.

ಇನ್ನು ಉತ್ತಮ ಆರೋಗ್ಯ ಬೆಳೆಯಲು ಮತ್ತು ಕಾಪಾಡಿಕೊಳ್ಳಲು ಪರಿಸರ ನೈರ್ಮಲ್ಯ ಮುಖ್ಯವಾದದ್ದು. ಕುಟುಂಬ ರಚನೆಗೆ ತಕ್ಕುದಾದ ವಸತಿ ವ್ಯವಸ್ಥೆ, ಶೌಚಾಲಯ, ಒಳಚರಂಡಿ, ರಸ್ತೆ, ಇವುಗಳು ಇದ್ದರೇನೆ ಶುಚಿಯಾದ ವಾತಾವರಣ ಇರಲು ಸಾಧ್ಯವಾಗುತ್ತದೆ. ಆದರೆ ಇನ್ನೂ ನಗರ ಪ್ರದೇಶಗಳಲ್ಲಿ 46% ಜನತೆಗೆ ಸ್ವಂತ ಮನೆಗಳಿಲ್ಲ. ಮತ್ತು ಈಗಾಗಲೇ ಸರಕಾರವೇ ಕಟ್ಟಿಕೊಟ್ಟ ಮನೆಗಳಲ್ಲಿ 50% ಕಳಪೆ ಗುಣಮಟ್ಟದ್ದು. ಏಕಕೊಠಡಿಯಲ್ಲಿ ವಾಸ ಮಾಡುವವರು ಗ್ರಾಮಗಳಲ್ಲಿ ಶೇಕಡ 40.8 ನಗರಗಳಲ್ಲಿ ಶೇ 39.7, ಎರಡು ಕೊಠಡಿ ಹೊಂದಿರುವವರು ಶೇ. 31 ಮತ್ತು ಗೃಹ ನಿರ್ಮಾಣಕ್ಕಾಗಿ ಸರಕಾರವು ಒಟ್ಟು ಬಜೆಟ್‌ನ (ಆದಾಯದ) ಶೇ 1.47 ಮಾತ್ರ ವ್ಯಯ ಮಾಡುತ್ತಿದೆ. ಸರಕಾರದ ಆಶ್ರಯ, ಅಂಬೇಡ್ಕರ್ ಮನೆಗಳು ನಿಜವಾದ ಬಡವರಿಗೆ ಸಿಗಲಿಲ್ಲ ಎಂಬುದು ಗಮನಿಸಬೇಕು.

ಇನ್ನು ಶೌಚಾಲಯದ ಪ್ರಶ್ನೆ ಬಂದಾಗ ಖಂಡಿತ ಶೋಚನೀಯ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಒಟ್ಟು ಕರ್ನಾಟಕದ ಗ್ರಾಮಗಳಲ್ಲಿ ಕೇವಲ ಶೇ. 6.9 ಕುಟುಂಬಗಳು ಮಾತ್ರ ಶೌಚಾಲಯ ಹೊಂದಿವೆ. ಉಳಿದ ಶೇ 94 ಜನರು ಮಲ ವಿಸರ್ಜನೆಗೆ ಬಯಲು ಪ್ರದೇಶವನ್ನೇ ಅವಲಂಬಿಸಬೇಕಾಗಿದೆ (ನಿರ್ಮಲ ಕರ್ನಾಟಕದ ಬಗ್ಗೆ ಭಾಷಣ ಮಾತ್ರ ಆಗಿ ಪ್ರಚಾರ ಗಿಟ್ಟಿಸಿಕೊಳ್ಳಲಾಯಿತಷ್ಟೆ). ಇದರಿಂದ ವಾತಾವರಣ ನೈರ್ಮಲ್ಯ ಸಂಪೂರ್ಣ ಕೆಟ್ಟು ಅನೇಕ ರೋಗ ರುಜಿನಗಳಿಗೆ ರತ್ನಗಂಬಳಿ ಹಾಸಿದಂತೆ. ಮಾತ್ರವಲ್ಲ ಶೌಚಾಲಯವಿಲ್ಲದ ಕಾರಣದಿಂದ ಬಹಿರ್ದೆಸೆಗೆ ಹೋಗುವ ಮಹಿಳೆಯರ ಮೇಲೆ ದೌರ್ಜನ್ಯ-ಬಲತ್ಕಾರಗಳು ನಡೆದಿವೆ. ಇವುಗಳ ಪ್ರಮಾಣ ಒಟ್ಟು ಹಲ್ಲೆ-ಬಲತ್ಕಾರಗಳಲ್ಲಿ 40% ಈ ಸಂಖ್ಯೆ ಎಲ್ಲರನ್ನೂ ಬೆಚ್ಚಿ ಬೀಳಿಸುತ್ತದ.

ಯಾವುದೇ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ. ಎಲ್ಲ ರೀತಿಯ ಕಲುಷಿತ ನೀರು, ರೊಜ್ಜು ರಸ್ತೆಯ ಮೇಲೆನಿಂದಲೇ ಹರಿದು ಹೋಗಬೇಕು. ಕನಿಷ್ಟ ಪಕ್ಷ ಮೇಲು ಚರಂಡಿಗಳ ನಿರ್ಮಾಣದ ಬಗ್ಗೆ ಸರಕಾರ ತಲೆಕೆಡಿಸಿಕೊಳ್ಳುವುದಿಲ್ಲ.

ಹಾಗಾದರೆ ಮಾನವ ಜೀವಿಗಳು ಉತ್ತಮ ಆರೋಗ್ಯವಂತರಾಗಬೇಕೆಂದರೂ ಈ ಮೇಲಿನ ಎಲ್ಲಾ ತೆರದ ನ್ಯೂನ್ಯತೆಗಳಿದ್ದಲ್ಲಿ ಹೇಗೆ ಆರೋಗ್ಯ ಕಾಪಾಡಲು ಸಾಧ್ಯ? Sound Body Sound Mind ಎಂಬ ಗಾದೆ ಮಾತು ಯಾರಿಗೆ ಗೊತ್ತಿಲ್ಲ? ಮೂಲಭೂತ ಸೌಲಭ್ಯಗಳೇ ಇಲ್ಲದೆ ಹೋದಲ್ಲಿ ಎಲ್ಲಿಯ Sound Body Sound Mind?

ಬ್ರಿಟಿಷರು ಈ ದೇಶವನ್ನು ಬಿಟ್ಟುಹೋದ ಮೇಲೆ

ಮುಂದಿನ ಪುಟಕ್ಕೆ

ಅಂತರಾಷ್ಟ್ರೀಯ ಆರೋಗ್ಯ ಸಮ್ಮೇಳನ - ಢಾಕಾದಲ್ಲಿ

ಸರಕಾರದ ಈ ಬೂಟಾಟಿಕೆಯ ಪರದೆ ಸರಿಸಲು 'ಎಲ್ಲರಿಗೂ ಆರೋಗ್ಯ' ಎಲ್ಲರ ಹಕ್ಕನ್ನು ಪಡೆಯಲು ಅನೇಕಾನೇಕ ಸಂಘ ಸಂಸ್ಥೆಗಳು(2500) ಒಗ್ಗಟ್ಟಾಗಿವೆ. ನವೆಂಬರ್ 26,27 ರಂದು ದಾವಣಗೆರೆಯಲ್ಲಿ ಮೇಲಿನ ಪ್ರಶ್ನೆಗಳನ್ನೆತ್ತಿ ಸಮಾವೇಶ ನಡೆದಿದೆ. ಆ ಮೂಲಕ ಸರಕಾರಕ್ಕೆ ಎಚ್ಚರಿಕೆಯ ಗಂಟೆ ಹೊಡೆಯಲಾಗುತ್ತಿದೆ. ಈಗಾಗಲೇ 5 ಪುಸ್ತಕಗಳ ಮಾಲಿಕೆ ಹೊರತರಲಾಗಿದೆ. ತದನಂತರ ರಾಷ್ಟ್ರಮಟ್ಟದ ಸಮ್ಮೇಳನ ನಡೆಸಲು ನವೆಂಬರ್ 27 ರಂದು 'ಆರೋಗ್ಯ ಟ್ರೈನ್' ಮೂಲಕ ಕಲ್ಕತ್ತದತ್ತ ಪಯಣ ಸಾಗುತ್ತದೆ. ಮೊನ್ನೆ ತಾನೆ ಮಂಡಿ ಚಿಕಿತ್ಸೆಪಡೆದು ಬಂದ ಈ ದೇಶದ ಪ್ರಧಾನಿಯವರ ಜವಾಬ್ದಾರಿಯ ಅರಿಗಣ್ಣು ತೆರೆಯಲು ಈ ಸಮ್ಮೇಳನ ನಡೆಯಲಿದೆ.

ಅನಂತರ ಬಾಂಗ್ಲಾ ದೇಶದ ಢಾಕಾದಲ್ಲಿ 'ಡಿಸೆಂಬರ್ 4-8 ರವರೆಗೆ ನಡೆಯುವ ಅಂತರ್ರಾಷ್ಟ್ರ ಮಟ್ಟದ ಆರೋಗ್ಯ ಸಮ್ಮೇಳನದಲ್ಲಿ ಕರ್ನಾಟಕದ 15 ಜನ ಪ್ರತಿನಿಧಿಗಳು ಭಾಗವಹಿಸುವರು. ಪ್ರಪಂಚದ ಅಭಿವೃದ್ಧಿಶೀಲ ಮತ್ತು ಸಣ್ಣ ದೇಶಗಳಿಗೆ ಬ್ರಹ್ಮರಾಕ್ಷಸಗಳಾಗಿ ಕಾಡುತ್ತಿರುವ ಐಎಂಎಫ್, ವಿಶ್ವಸಂಸ್ಥೆ, ವಿಶ್ವಬ್ಯಾಂಕ್‌ಗಳ ದುಷ್ಟತನವನ್ನು ಹಿಮ್ಮೆಟ್ಟಿಸಲು ಈ 'ಜನಾರೋಗ್ಯ ಸಭೆ'ಯು ನಡೆಯಲಿದೆ. ಖಂಡಿತ ಇದೊಂದು ಅಪೂರ್ವವಾದ ದಾಖಲೆಯ ಸಮ್ಮೇಳನವಾಗಲಿದೆ. ಜಾಗತಿಕ ಮಟ್ಟದಲ್ಲಿ ಜನತೆಯ ಪರವಾಗಿ ಜನಾರೋಗ್ಯ ಸನ್ನದನ್ನು ತಯಾರಿಸಿ ವಿಶ್ವ ಆರೋಗ್ಯ ಸಂಸ್ಥೆಯ ಮುಂದಿಡಲಾಗುವುದು. ಹೀಗೆ ಆರೋಗ್ಯಕ್ಕಾಗಿ - ಎಲ್ಲರ ಆರೋಗ್ಯಕ್ಕಾಗಿ - ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದಕ್ಕಾಗಿ ಜನತೆಯ ಜಾಥಾ ಸಿದ್ಧವಾಗಿದೆ. ಪ್ರತಿ ವ್ಯಕ್ತಿಯ 'ಆರೋಗ್ಯವೇ ದೇಶದ ಭಾಗ್ಯ' ಬನ್ನಿ ಈ ಆಂದೋಲನದಲ್ಲಿ ಭಾಗವಹಿಸುವ ಮೂಲಕ ಜನಾಂದೋಲನವಾಗಿಸಿ.

ಬಾಯಲ್ಲಿ ಸಾಮರಸ್ಯ ಕೈಯಲ್ಲಿ ದೊಣ್ಣೆ

ಮುಸ್ಲಿಂ-ಕ್ರಿಶ್ಚಿಯನ್ನರಿಗೆ ತಮ್ಮಲ್ಲಿ ಪೂರ್ಣ ಅವಕಾಶವಿದೆ. ತಮ್ಮೊಂದಿಗೆ ಅವರೆಲ್ಲಾ ಸೇರಬೇಕೆಂದೂ ಆರ್.ಎಸ್.ಎಸ್. ಇತ್ತೀಚಿನ ನಾಗಪುರದಲ್ಲಿ ಕರೆ ನೀಡಿ, ಜಾಗರಣ ನಾಟಕ ಆರಂಭಿಸಿರುವಾಗಲೇ ಇನ್ನೊಂದೆಡೆ ಕ್ರಿಶ್ಚಿಯನ್ನರ ಮೇಲೆ ದೌರ್ಜನ್ಯಗಳನ್ನು ಮುಂದುವರಿಸಿದೆ. ತನ್ನ ಪಾತಕಗಳಿಗೂ ಐಎಸ್ಐ, ದೀನ್‌ದಾರ್ ಕಾರಣವೆಂದೇ ಹೇಳುವ ಅವರು ಕೈಯಲ್ಲಿ ದೊಣ್ಣೆ ಹಿಡಿದು, ಬಾಯಲ್ಲಿ ಸಾಮರಸ್ಯ ಹೇಳುವ ಚೆಡ್ಡಿ ಪರಿವಾರದ ವೈಖರಿಗೆ ಇತ್ತೀಚಿನ ಇನ್ನೊಂದು ಸಾಕ್ಷಿ.

ಮಾಲೂರಿನ ಪಟ್ಟಣದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳ ಮದ್ಯ ಕ್ರೈಸ್ತ ಸಾಹಿತ್ಯವನ್ನು ಹಂಚಿ ಮತಾಂತರಕ್ಕೆ ಕೆಲವು ಕ್ರೈಸ್ತ ಗುಂಪುಗಳು ಪ್ರೇರೇಪಿಸುತ್ತಿವೆ ಎಂದು ಹಸಿ ಹಸಿ ಸುಳ್ಳುಗಳನ್ನು ಹರಿಯಬಿಟ್ಟಿದಲ್ಲದೆ. ಈ ಹಿನ್ನೆಲೆಯನ್ನೇ ನೆವವಾಗಿಟ್ಟುಕೊಂಡ ಸಂಘ ಪರಿವಾರದ 20-30 ಜನರ ಗುಂಪೊಂದು ಮಾಲೂರು ಪಟ್ಟಣದಲ್ಲಿರುವ ಚರ್ಚ್ ಮೇಲೆ ಧಾಳಿ ನಡೆಸಿದ್ದಲ್ಲದೆ ಕ್ರೈಸ್ತ ಸಾಹಿತ್ಯಕ್ಕೆ ಬೆಂಕಿಯನ್ನಿಟ್ಟ ಘಟನೆಯು ನವೆಂಬರ್ 26 ರಂದು ನಡೆದಿದೆ.

ಘಟನೆಯ ಹಿನ್ನೆಲೆ: ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಕಲ್ವರಿ ಎ.ಜಿ. ಚರ್ಚ್ 1993 ರಲ್ಲಿ ಬಸ್‌ನಿಲ್ದಾಣದ ಹತ್ತಿರ ಪ್ರಾರಂಭಗೊಂಡಿತ್ತು. ಇದರಲ್ಲಿ ಜನವಿಭಾಗದವರು ಮತ್ತು ಎಲ್ಲಾ ಜಾತಿಯ ಜನರೂ ಪ್ರತಿಶುಕ್ರವಾರ ಮತ್ತು ಭಾನುವಾರಗಳಂದು ಪ್ರಾರ್ಥನೆಗಾಗಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲ್ಲಿ ಪ್ರಾರ್ಥಿಸಿದರೆ ಮನಸ್ಸಿಗೆ ಶಾಂತಿ ಸಿಗುತ್ತದೆ ಹಾಗೂ ರೋಗಗಳು ವಾಸಿಯಾಗುತ್ತವೆ ಎಂಬುದು ಜನರ ನಂಬಿಕೆ. ಆದರೆ ಇವರಾರೂ ಕ್ರೈಸ್ತ ಧರ್ಮಕ್ಕೆ ಸೇರಿಲ್ಲ. ಆದರೆ ಇದರಿಂದ ಕ್ರೋದಗೊಂಡ ಆರ್.ಎಸ್.ಎಸ್. ಕಾರ್ಯಕರ್ತರು ಆ ಸಂದರ್ಭದಲ್ಲಿ ಗಲಾಟೆಯನ್ನು ಪ್ರಾರಂಭಿಸಿದ್ದರಿಂದ ಪ್ರಾರ್ಥನಾ ಸ್ಥಳವನ್ನು ಊರಿನ ಹೊರಗಡೆ, ರೇಲ್ವೆ ಸ್ಟೇಷನ್ ಸಮೀಪವಿರುವ ಆದರ್ಶನಗರಕ್ಕೆ ಸ್ಥಳಾಂತರಿಸಲಾಯಿತು.

ಆದರೆ ಇದರಿಂದಲೂ ಸಮಾಧಾನಗೊಳ್ಳದ ಹಿಂದೂ ಧರ್ಮದ ಗುತ್ತಿಗೆದಾರರರಾಗಿರುವ ಸಂಘ ಪರಿವಾರವು ಕೆಲವು ದಿನಗಳ ನಂತರ ಅಂದರೆ 7.10.2000 ರಂದು ಸ್ಥಳಾಂತರಗೊಂಡಿದ್ದ ಹೊಸ ಕಲ್ವರಿ ಚರ್ಚ್ ಹತ್ತಿರ - ನೀವು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುತ್ತೀದ್ದೀರೆಂದು ಅನಾವಶ್ಯಕ ಮತ್ತು ವಿನಾ ಕಾರಣದ ಜಗಳ ತೆಗೆದಾಗ -

ಮಾಲೂರಿನ ಚರ್ಚ್ ಮೇಲೆ ದಾಳಿ

ಸಂಬಂಧಿಸಿದ ಚರ್ಚ್‌ನ ಪ್ರಮುಖರು ಇವರ ಪ್ರವೃತ್ತಿಯ ವಿರುದ್ಧ ಮತ್ತು ಸೂಕ್ತ ರಕ್ಷಣೆಗಾಗಿ ಪೋಲೀಸ್ ಠಾಣೆಯಲ್ಲಿ ದೂರನ್ನು ಸಹ ದಾಖಲಿಸಿದ್ದಾರೆ. ಈ ಸಂಬಂಧವಾಗಿ ಠಾಣೆಯ ಪಿಎಸ್ಐ ವೇಣುಗೋಪಾಲರವರು ಆರ್‌ಎಸ್‌ಎಸ್ ಮತ್ತು ಚರ್ಚ್ ಪ್ರಮುಖರನ್ನು ಕರೆಸಿ - ಸಂಧಾನ ನಡೆಸಿ, ಆ ಘಟನೆಯು ಅಲ್ಲಿಗೆ ಮುಕ್ತಾಯಗೊಳಿಸಿದ್ದಾರೆ. ಮತ್ತು ನಂತರದ ದಿನಗಳಲ್ಲಿ ಯಾವೊಂದು ಘಟನೆಗಳು ನಡೆಯದೆ ಶಾಂತಿಯುತ ವಾತಾವರಣ ಈ ಪ್ರದೇಶದಲ್ಲಿತ್ತು. ಇದೇ ಸಂದರ್ಭದಲ್ಲಿ ಡಿಸೆಂಬರ್ 24, ಶುಕ್ರವಾರದಂದು ಕೋಲಾರದ ಇಟಿಸಿಎಂ ಆಸ್ಪತ್ರೆಯ ಸಿಬ್ಬಂದಿ, ವೈದ್ಯರುಗಳ ತಂಡವೊಂದು ಮಾಲೂರಿನ ಶಾಲಾ-ಕಾಲೇಜುಗಳಲ್ಲಿ 'ಹೊಸ ಒಡಂಬಡಿಕೆ' ಯೇಸು ಸುವಾರ್ತೆ ಪುಸ್ತಕಗಳನ್ನು ಹಂಚಿದ್ದರು. ಇದೇ ಸಮಯವನ್ನು ಕಾಯುತ್ತಿದ್ದ ಮಾಲೂರಿನ ಆರ್‌ಎಸ್‌ಎಸ್-ಬಿಜೆಪಿ ಕಾರ್ಯಕರ್ತರು ಮತಾಂತರಗೊಳಿಸಲಾಗುತ್ತಿದೆಯೆಂದು ಇದನ್ನು ನಡೆಸಿದವರು 'ಎ.ಜಿ. ಕಲ್ವರಿ' ಚರ್ಚಿನವರೇ ಎಂದು ಅಪಪ್ರಚಾರವನ್ನು ನಡೆಸಿದ್ದಲ್ಲದೆ ಸುಮಾರು 25-30 ಜನರ ತಂಡವನ್ನು ಮಾಡಿ ಶಾಲಾ ಕಾಲೇಜುಗಳಲ್ಲಿ ಹಂಚಲಾಗಿದ್ದ ಕ್ರೈಸ್ತ ಸಾಹಿತ್ಯವನ್ನು ಕೂಡಿಹಾಕಿ ಶಾಲಾ ಕಾಲೇಜು ಆವರಣದಲ್ಲಿ ಮತ್ತು ನಗರದ ವೃತ್ತವೊಂದರಲ್ಲಿ ಬೆಂಕಿ ಹಚ್ಚಿ ತಮ್ಮ ಪ್ಯಾಸಿಸ್ಟ್ ಮನೋಭಾವದ ರಾಕ್ಷಸತನವನ್ನು ಮೆರೆಸಿವರು. ಮಾತ್ರವಲ್ಲ 'ಭಾರತ ಮಾತಾಕೆ ಜೈ - ಆರ್‌ಎಸ್‌ಎಸ್ ಜಿಂದಾಬಾದ್', ಮತಾಂತರ ಗೊಳಿಸಿದವರಿಗೆ ಧಿಕ್ಕಾರ' ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ಮಧ್ಯಾಹ್ನ 12 ಗಂಟೆ ಸುಮಾರಿಗೆ ರೈಲ್ವೆ ಸ್ಟೇಷನ್ ಹತ್ತಿರವಿರುವ ಎ.ಜಿ.ಕಲ್ವರಿ ಚರ್ಚ್ ಮೇಲೆ ಧಾಳಿ ಮಾಡಿ ಬಾಗಿಲಿನ, ಕಿಟಕಿಯ ಗಾಜುಗಳನ್ನು ಒಡೆದು ಒಳನುಗ್ಗಿ ಅಲ್ಲಿದ್ದ ಸಂಗೀತ ಪರಿಕರಗಳನ್ನು, ಪೀಠೋಪಕರಣಗಳನ್ನು ಒಡೆದುಹಾಕಿ ಕ್ರೈಸ್ತ ವಿರೋಧಿ ಘೋಷಣೆಗಳನ್ನು ಕೂಗಿ ಪರಾರಿಯಾಗಿದ್ದಾರೆ.

ಈ ಘಟನೆಯನ್ನು ಅಲ್ಲೇ ಪ್ರಾರ್ಥನೆ ಸಲ್ಲಿಸುತ್ತಿದ್ದ ಕೃಷ್ಣಪ್ಪ ಎಂಬುವರು ಪ್ರತ್ಯಕ್ಷವಾಗಿ ಕಂಡಿದ್ದು ಅವರೆ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದಾರೆ. ಈ ಸಂಬಂಧ ದೂರನ್ನು ದಾಖಲಿಸಿಕೊಂಡಿರುವ ಪೋಲೀಸರು ಕೇವಲ 13ಜನರನ್ನು ಬಂಧಿಸಿ ನ್ಯಾಯಾಲಯದ ಮೂಲಕ ಬಿಡುಗಡೆಗೊಳಿಸಲು ಅವಕಾಶ ನೀಡಿ ಕೈತೊಳೆದುಕೊಂಡಿದ್ದಾರೆ.

ಗಾಂಧಿನಗರ ನಾರಾಯಣಸ್ವಾಮಿ

ಈ ಹಿಂದೆ ಚರ್ಚ್ ಮೇಲೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಾ ಹಲವಾರು ಬಾರಿ ಗಲಭೆಗಳನ್ನು ಸೃಷ್ಟಿಸಲು ಮಾಲೂರಿನ ಆರ್‌ಎಸ್‌ಎಸ್ ಗೂಂಡಾಗಳು ಪ್ರಯತ್ನಿಸಿದ್ದಾಗ್ಯೂ ಪೋಲೀಸ್ ಇಲಾಖೆ, ಗುಪ್ತಚರ ಇಲಾಖೆಗಳು ಕೇವಲ ನಾಮಕಾವಸ್ಥೆ ಮಾತ್ರವೇ ಕಾರ್ಯ ನಿರ್ವಹಿಸಿ ಪರಿಸ್ಥಿತಿ ಬಿಗಡಾಯಿಸಲು ಸಹಕರಿಸುತ್ತಿವೆ.

ಅಲ್ಲದೆ ಈ ಧಾಳಿಯ ನೇತೃತ್ವವನ್ನು ವಹಿಸಿದ್ದ ಬಿಜೆಪಿ-ಆರ್‌ಎಸ್‌ಎಸ್ ನ ರಮೇಶ್, ನರೇಂದ್ರಸಿಂಗ್, ಸೋಮಶೇಖರ್ ಇತರೆ ಜನರ ಕುಲಾಸೆ, ಈ ಹಿಂದೆ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಪ್ರಚಾರ ನಡೆಸುತ್ತಿದ್ದ ಸಂದರ್ಭದಲ್ಲಿ ಗಲಾಟೆ ಮಾಡಿದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಮೆರವಣಿಗೆಯ ನಾಟಕ: ಮಾಲೂರಿನ ಕಲ್ವರಿ ಚರ್ಚ್ ಮೇಲೆ ಧಾಳಿ ಮಾಡಿದ ಸಂಘಪರಿವಾರದ ಗುಂಪು ಈ ಘಟನೆಯಲ್ಲಿ ಸುಳ್ಳು ಕೇಸುಗಳನ್ನು ಹಾಕಲಾಗಿದೆ ಎಂದು ಕೂಗೆಬ್ಬಿಸಿ ನವೆಂಬರ್ 28 ರಂದು ಮೆರವಣಿಗೆ ನಡೆಸಿದೆ.

ಖಂಡನೆ - ಭೇಟಿ: ಕ್ರೈಸ್ತ ಸಾಹಿತ್ಯಕ್ಕೆ ಬೆಂಕಿ ಮತ್ತು ಚರ್ಚ್ ಮೇಲಿನ ಧಾಳಿಯನ್ನು ಹಲವಾರು ಗಣ್ಯ ವ್ಯಕ್ತಿಗಳು ಸಂಘಟನೆಗಳು ಖಂಡಿಸಿವೆ. ಅಲ್ಲದೆ ಘಟನೆಯ ಸ್ಥಳಕ್ಕೆ ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ಸದಸ್ಯ ಗಾಂಧಿನಗರ ನಾರಾಯಣ ಸ್ವಾಮಿ ಮತ್ತಿತರರು ಭೇಟಿ ನೀಡಿದ್ದರು.


ಸಿಪಿಐ(ಎಂ) ರಾಜ್ಯ ಸಮಿತಿ, ಕೋಲಾರ ಜಿಲ್ಲಾ ಸಮಿತಿಯು ಈ ಘಟನೆಯನ್ನು ಬಲವಾಗಿ ಖಂಡಿಸಿ, ಇಂತಹ ಮತೀಯ ಶಕ್ತಿಗಳ ಮೇಲೆ ಸರ್ಕಾರ ಕಠಿಣ ನಿಷ್ಠುರ ಕ್ರಮ ಜರುಗಿಸಬೇಕೆಂದು ಹಾಗೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿದೆ. ಅವರವರ ಧರ್ಮ ಆಚರಣೆ, ಸಾಹಿತ್ಯ ಪ್ರಸಾರ ಪ್ರತಿಯೊಬ್ಬ ಪ್ರಜೆಯ ಪ್ರಜಾಸತ್ತಾತ್ಮಕ ಹಕ್ಕು ಇದನ್ನು ತಡೆಯುವ ಆರ್‌ಎಸ್‌ಎಸ್ ನ ಯತ್ನ ಫ್ಯಾಸಿಸ್ಟ್ ಪ್ರವೃತ್ತಿಯಾಗಿದೆ. ಎಲ್ಲಾ ಧರ್ಮಕ್ಕೆ ಸೇರಿದವರನ್ನು ಸೆಳೆದುಕೊಳ್ಳುವುದಾಗಿ ಹೇಳುವ ಬಿಜೆಪಿ ಕೈಯಲ್ಲಿ ದೊಣ್ಣೆ ಹಿಡಿದು ಸೌಹಾರ್ದತೆ ಹೇಳುವ ದುರುಳತನ ಹೆಚ್ಚಾಗಿದೆ ಎಂದು ಟೀಕಿಸಿದೆ.

ಇಂತಹ ಕೋಮುದ್ದೇಶದ ಕೃತ್ಯಗಳಿಗೆ ಕಡಿವಾಣ ಹಾಕಲು ಹಾಗೂ ಶಾಂತಿ ಕಾಪಾಡಲು ಜನತೆಯಲ್ಲಿ ಮನವಿ ಮಾಡಲಾಗಿದೆ. ○

ಆರೋಗ್ಯದ ಬೆಳಕಿಗಾಗಿ ಆಂದೋಲನ

ಪುಟ 4 ರಿಂದ

ನಮ್ಮವರೇ ಆಳುತ್ತಿದ್ದಾರೆ. ಪ್ರತಿ ಐದು ವರ್ಷಕ್ಕೊಮ್ಮೆ ಸರಕಾರಗಳು ಬಂದು ಹೋಗುತ್ತವೆ. ಆದರೆ ಜನತೆಯ ಆರೋಗ್ಯಕ್ಕಾಗಿ ಯಾವುದೇ ಸರಕಾರ ಚಿಂತಿಸಿದೆಯೇ? ಕರ್ನಾಟಕದ ಸರಕಾರಕ್ಕೆ ಕೇಳಿ. ಆರೋಗ್ಯಕ್ಕಾಗಿ ಒಟ್ಟು ಆದಾಯದ ಕೇವಲ ಶೇ 1.37 ಮಾತ್ರ. ಕನಿಷ್ಟ ಪಕ್ಷ ಎಲ್ಲರ ಆರೋಗ್ಯಕ್ಕಾಗಿ ಶೇ 9-10 ವೆಚ್ಚ ಮಾಡಬೇಕು. ಆದರೆ ರಾಜಕೀಯ ಇಚ್ಛೆ ಇಲ್ಲ. ಆದ್ದರಿಂದಲೇ ರಾಜ್ಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ 'ಖಾಸಗಿಯವರ' ಹಿಡಿತವೇ ಅಧಿಕವಾಗಿದೆ. ಸರಕಾರಿ ಆಸ್ಪತ್ರೆಗಳು, ಪ್ರಾಥಮಿಕ ಕೇಂದ್ರಗಳು, ಅವಶ್ಯಕತೆಗನುಸರಿಸಿ ಇಲ್ಲದ ಕಾರಣ ಮತ್ತು ಯಾವುದೇ ಸೌಲಭ್ಯಗಳು ಇಲ್ಲದ ಕಾರಣ ಜನರು ಅದರಲ್ಲೂ ಬಡಜನರು ಆರೋಗ್ಯ ರಕ್ಷಣೆಯಿಂದ ವಂಚಿತರಾಗುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಸರಕಾರಿ ಆಸ್ಪತ್ರೆಗಳ ಸಂಖ್ಯೆ 2624 ಇದ್ದರೆ ಖಾಸಗಿ ಆಸ್ಪತ್ರೆಗಳು 1709 ಇವೆ ಮತ್ತು ಆಸ್ಪತ್ರೆ ಹಾಸಿಗೆಗಳು ಖಾಸಗಿಯಲ್ಲಿ 40,900 ಇದ್ದರೆ ಸರಕಾರಿಯಲ್ಲಿ 43868 ಮಾತ್ರ. ಶ್ರೀಮಂತ ಮತ್ತು ಮಧ್ಯಮವರ್ಗದ ಜನತೆಯು ಖಾಸಗಿ ಆಸ್ಪತ್ರೆಗಳನ್ನು ಮಾತ್ರ



ಅವಲಂಬಿಸಿದ್ದಾರೆ. ಕಾರಣವೇನೆಂದರೆ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಸೌಲಭ್ಯ, ತಜ್ಞರ ಕೊರತೆ, ಶುಚಿತ್ವದ ಕೊರತೆ, ಅದಕ್ಷತೆ ಹೀಗೆ ನಾನಾ ರೀತಿಯ ಕೊರತೆಗಳು ಕಾರಣವಾಗಿದೆ. ಆದರೆ **ಬಹುಸಂಖ್ಯಾತ ಬಡಜನತೆಯು ಸರಕಾರಿ ಆಸ್ಪತ್ರೆಗಳಲ್ಲಿನ ಔಷಧಿಗಳ ಸವಲತ್ತಿನಿಂದ ವಂಚಿತರಾಗಿದ್ದಾರೆ.** ಹಾಗೆ ನೋಡಿದರೆ 1000 ಜನಕ್ಕೆ ಒಂದು ಹಾಸಿಗೆ ಇರಬೇಕು. ಬಡತನ ರೇಖೆಯ ಕೆಳಗಿನ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆ, ವೈದ್ಯಕೀಯ ನೆರವು, ಔಷಧಿ ಹೀಗೆ ಎಲ್ಲವೂ ಪೂರೈಸಬೇಕು. ಆದರೆ ಸರಕಾರಿ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಕೇಂದ್ರಗಳಲ್ಲಿ ಈ ನೆರವು ಸಿಗುತ್ತಿಲ್ಲ. ಮತ್ತು ಒಟ್ಟು ಸರಕಾರಿ ವೈದ್ಯರುಗಳಲ್ಲಿ ಶೇ 80 ರಷ್ಟು ವೈದ್ಯರು ಖಾಸಗಿ ಪ್ರಾಕ್ಟೀಸ್‌ನಲ್ಲಿ ತೊಡಗಿರುವರು. ಈ ಎಲ್ಲದರ ಕಾರಣದಿಂದ ಇದರ ನೇರ ದುಷ್ಪರಿಣಾಮ ರಾಜ್ಯ ಬಡಜನತೆಯ ಮೇಲಾಗುತ್ತಿದೆ. 4 ವರ್ಷ ಕೆಳಗಿನ ವಯಸ್ಸಿನ ಮಕ್ಕಳಲ್ಲಿ ಶೇ 54 ಮಂದಿ ಕಡಿಮೆ ತೂಕ ಹೊಂದಿದ್ದಾರೆ. ಶೇ 22 ಜನನದ ಸಂದರ್ಭದಲ್ಲಿಯೇ ಕಮ್ಮಿ ತೂಕ. ಇದು ತಾಯಂದಿರಲ್ಲಿನ ಹೀನಾಯ ಪೌಷ್ಠಿಕಾಂಶ ಸ್ಥಿತಿಯನ್ನು ಬಿಂಬಿಸುತ್ತದೆ.

ದೇಶ	ಶೇಕಡವಾರು ಸರಕಾರದ ಪಾಲು	ಶೇಕಡವಾರು ಖಾಸಗಿ ಪಾಲು
ಕೆನಡಾ	74.8	25.3
ಸ್ವೀಡನ್	89.2	10.7
ಇಂಗ್ಲೆಂಡ್	85.2	14.8
ಭಾರತ	21.7	78.3
ಫಿಲಿಫೈನ್ಸ್	50	50
ಬಾಂಗ್ಲಾದೇಶ	43.8	56.2
ಇಂಡೋನೇಶಿಯಾ	35	65

'ಎಲ್ಲರಿಗೂ ಆರೋಗ್ಯ' ಎಂದು ಘೋಷಿಸಿದ ಮೇಲೆಯೇ ಎಲ್ಲರಿಗೂ ಕನಿಷ್ಟ ಆರೋಗ್ಯ ಕೊಡಲು ಸಾಧ್ಯವಾಗದ್ದಕ್ಕೆ ಕಾರಣಗಳೇನು? ಈ ಮೇಲಿನ ಪ್ರಶ್ನೆಗೆ ಉತ್ತರ

> **ಇನ್ನು ಉತ್ತಮ ಆರೋಗ್ಯ ಬೆಳೆಯಲು ಮತ್ತು ಕಾಪಾಡಿಕೊಳ್ಳಲು ಪರಿಸರ ನೈರ್ಮಲ್ಯ ಮುಖ್ಯವಾದದ್ದು. ಕುಟುಂಬ ರಚನೆಗೆ ತಕ್ಕುದಾದ ವಸತಿ ವ್ಯವಸ್ಥೆ, ಶೌಚಾಲಯ, ಒಳಚರಂಡಿ, ರಸ್ತೆ, ಇವುಗಳು ಇದ್ದರೇನೆ ಶುಚಿಯಾದ ವಾತಾವರಣ ಇರಲು ಸಾಧ್ಯವಾಗುತ್ತದೆ**

ಕನ್ನಡಿಯಷ್ಟೇ ನಿಚ್ಚಳವಾಗಿದೆ.

- ಪ್ರಾಥಮಿಕ ಆರೋಗ್ಯ ರಕ್ಷಣೆಯನ್ನು ಅನುಷ್ಠಾನಗೊಳಿಸಲು ಸರಕಾರಕ್ಕೆ ಮನಸ್ಸಿಲ್ಲ. (ಅದಕ್ಕಾಗಿಯೇ ಆದಾಯದ ಕೇವಲ 1.27% ಮಾತ್ರ ಹಣ ಇಟ್ಟಿರುವರು)
- ಆರೋಗ್ಯ ಕಾರ್ಯಕ್ರಮದಲ್ಲಿ ಜನರನ್ನು ತೊಡಗಿಸುವ ಯಾವ ಪ್ರಯತ್ನಗಳೂ ಆಗದಿರುವುದು.
- ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣವನ್ನು ಯಥಾವತ್ತಾಗಿ ಜಾರಿ ಮಾಡುತ್ತಿರುವುದರಿಂದ(ವೈದ್ಯಕೀಯ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಿ ಹಣವಿದ್ದವರಿಗೆ ಆರೋಗ್ಯವನ್ನಾಗಿ ಮಾಡಿರುವುದರಿಂದ) ಆರೋಗ್ಯ ಕ್ಷೇತ್ರ ವ್ಯಾಪಾರೀಕರಣಕ್ಕೆ ತೆರೆದಿರುವುದು.
- ಆರೋಗ್ಯ ಸುಧಾರಣೆಗೆ ಬೇಕಾದ ಜೀವನದ ಕನಿಷ್ಟ ಅಗತ್ಯತೆಗಳನ್ನು ಪೂರೈಸದಿರುವುದು.(ನೀರು, ವಸತಿ, ರೇಷನ್, ಉದ್ಯೋಗ.....)
- ಔಷಧಿ ಉದ್ಯಮ ಮತ್ತು ಸಂಶೋಧನಾ ಸೌಲಭ್ಯಗಳು ಬಹುರಾಷ್ಟ್ರೀಯ ಹಿಡಿತದಲ್ಲಿದ್ದು, ಪೇಟೆಂಟ್‌ಗೊಳಿಸಿದ ಕಾರಣ ಔಷಧಿಗಳು ಸಾಮಾನ್ಯ ಜನತೆಯ ಕೈಗೆಟುಕುವುದಿಲ್ಲ.
- ನಮ್ಮ ದೇಶಕ್ಕೆ ಸಾಲಕೊಟ್ಟ ವಿಶ್ವಬ್ಯಾಂಕ್, ಐಎಂಎಫ್ ಗಳು ನಮ್ಮ ಆರ್ಥಿಕ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿರುವುದರಿಂದ
- ದೇಶದ ಜನತೆಯ ಆರೋಗ್ಯ ಕಾಪಾಡುವ ಮತ್ತು ಉತ್ತಮ ಆರೋಗ್ಯ ಕಲ್ಪಿಸುವ ಹೊಣೆ ತನ್ನದೇ ಎಂದು ಸರಕಾರ ಹೊಣೆ ಹೊರದೆ ಜಾರಿ ಕೊಳ್ಳುತ್ತಿರುವುದರಿಂದ ಜನಾರೋಗ್ಯಕ್ಕಾಗಿ ಒಂದು ಸ್ಪಷ್ಟ ಯೋಜನೆ ಹೊಂದಿಲ್ಲದಿರುವುದು.
- ಸರಕಾರಿ ವೈದ್ಯರು ಪ್ರಾಕ್ಟೀಸ್ ತಪ್ಪಿಸಲಿಕ್ಕಾಗಿ ಕಾಯ್ದೆ ಮಾಡದಿರುವುದು.

ಇಂಥ ಅನೇಕಾನೇಕ ಕಾರಣಗಳ ಜೊತೆಗೆ ಸಂಪತ್ತಿನ ಕ್ರೋಢೀಕರಣವೂ ಒಂದು ಪ್ರಮುಖ ಕಾರಣವಿದೆ. ಬಡವರು ಬಡವರೇ ಆಗುವಂತಹ ಉಳ್ಳವರು ಶ್ರೀಮಂತರೇ ಆಗುವಂತಹ ಸರಕಾರದ ಜನವಿರೋಧಿ ನೀತಿಯಿಂದಾಗಿ ಸಾಮಾನ್ಯ ಜನತೆಯು ಆರೋಗ್ಯದಿಂದ ವಂಚಿತರಾಗುತ್ತಿದ್ದಾರೆ. ○



ದುಡಿಯುವ ಪ್ರದೇಶದಲ್ಲಿ ಲೈ

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ 'ಲೈಂಗಿಕ ಕಿರುಕುಳದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಬಗ್ಗೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಡಿಯಲ್ಲಿ ನವೆಂಬರ್ 12 ರಂದು ಒಂದು ಸಂವಾದವನ್ನು ಏರ್ಪಡಿಸಲಾಗಿತ್ತು. ಈ ಕುರಿತು ಒಂದು ವರದಿ

ಸರ್ವೋಚ್ಚ ನ್ಯಾಯಾಲಯದ ತೀರ್ಪು - ಒಂದು ಸಂವಾದ

ಎಸ್. ವರಲಕ್ಷ್ಮಿ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವ ರಮಾದೇವಿ ಹಿರಿಯ ಸಹಾಯಕಿಯಾಗಿ ಕೆಲಸಮಾಡುತ್ತಿದ್ದಾರೆ. ಇವರಿಗೆ ಮೂವರು ಪುರುಷ ಕಂಡಕ್ಟರುಗಳ ಯೂನಿಯನ್ ಲೀಡರುಗಳು ಹಣ ಹಾಗೂ ರಾಜಕೀಯ ಬೆಂಬಲವಿದೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು, ಬೆದರಿಕೆ ಹಾಕಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರಿಗಳಿಗೂ ಸಚಿವರಿಗೂ ಮನವಿ, ದೂರು ಕೊಟ್ಟರೂ ನ್ಯಾಯ ಸಿಕ್ಕಿಲ್ಲ. ವಿಚಾರಣೆಯ ಸಮಯದಲ್ಲಿ ದೂರು ಕೊಟ್ಟವರನ್ನೇ ಬೇರೆಡೆ ವರ್ಗಾವಣೆ ಮಾಡಿದ್ದಾರೆ.

ಭಾರತೀಯಳಾಗಿ ಶಾಂತವಾತಾವರಣದಲ್ಲಿ ಕೆಲಸ ನಿರ್ವಹಿಸಬೇಕೆಂದೂ ಸರೋಜಮ್ಮರವರು ಕುವೈತ್‌ನಿಂದ ಬಂದು ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿ ಚುಂಚನಗಿರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಎದುರಿಸುತ್ತಿರುವ ಸಮಸ್ಯೆಗಳು ಅಗಾಧ. ಅಲ್ಲಿ ಪುಟ್ಟುಸ್ವಾಮಿ ಎಂಬ ವ್ಯವಸ್ಥಾಪಕ ಕೆಲಸದ ಸಮಯದಲ್ಲಿ ಕುಡಿದು ಬಂದು ಅನಗತ್ಯವಾಗಿ ಕೆಲಸದ ಗ್ರೇಡ್ ವ್ಯತ್ಯಾಸವಿಲ್ಲದೆ ಎಲ್ಲಾ ಕೆಲಸವನ್ನು ಮಾಡಿ ಎನ್ನುವುದು, ಮಾಡದಿದ್ದರೆ ಬರೀ ಅವಾಚ್ಯ ಶಬ್ದಗಳಿಂದ ನಿಂದಿಸುವುದಲ್ಲದೆ ಹೊಡೆಯುವುದು ಕೂಡಾ. ಅದೂ ಆದಿ ಚುಂಚನಗಿರಿ ಆಸ್ಪತ್ರೆಯಲ್ಲಿ!

ಜನರಲ್ ಪೋಸ್ಟಲ್ ಕಚೇರಿಯಲ್ಲಿ ಅಸಿಸ್ಟೆಂಟ್ ಸೂಪರಿಡೆಂಟ್‌ಆಗಿ ಕೆಲಸ ನಿರ್ವಹಿಸುತ್ತಿರುವ ರಾಜೇಶ್ವರಿ ಎಂಬುವರು ಕಛೇರಿ ದಾಖಲೆಗಳಿಡುವ ಫೈಲ್ ತುಂಬಿ ಹೊಸ ಫೈಲ್‌ನ್ನು ತೆರೆದಾಗ ಸೂಪರಿಡೆಂಟ್ ಆಗಿರುವ ವಾಸುದೇವ ನಾಯರ್‌ರವರು ಹೇಳಿದ್ದು 'ನೀವು ಗರ್ಭಿಣಿಯಾದಾಗ ನಿಮ್ಮ ಗಂಡನನ್ನು ಸೇರುವುದಿಲ್ಲವೇ- ಹಾಗೆ ಆ ಫೈಲನ್ನು ಅಡ್ಜೆಸ್ಟ್ ಮಾಡಿ" ಎಂದು. ಇದಕ್ಕೆ ಸಂಬಂಧಿಸಿದಂತೆ ದೂರು ಕೊಟ್ಟು ಆತನನ್ನು ಬೇರೆ ರಾಜ್ಯಕ್ಕೆ ವರ್ಗಾವಣೆ ಮಾಡಿಸಲು ಪ್ರಯತ್ನ ನಡೆಯುತ್ತಿದೆ. ಆದರೆ ಆತ ರಾಜೇಶ್ವರಿಯವರಿಗೆ ಡೆಫರ್‌ಮೆಶೆನ್ ಕೇಸ್ ಹಾಕ್ತೀನಿ, ನನ್ನ ಮರ್ಯಾದೆ ಕಳೆದಿದ್ದೀರಿ. ನನಗೆ ಅವಮಾನ ಆಗಿರುವುದರಿಂದ 4 ಲಕ್ಷ ರೂ.ಗಳ ಪರಿಹಾರ ಕೊಡಬೇಕಾಗುತ್ತದೆ' ಎಂದು ವೈಯಕ್ತಿಕವಾಗಿ ನೋಟಿಸನ್ನು ಕೊಟ್ಟಿದ್ದಾನೆ.

ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳಾಗಿ ಕೆಲಸ ಮಾಡುವವರು ಹೆಚ್ಚು ಮಹಿಳೆಯರೇ. ರಾತ್ರಿಯಲ್ಲದೆ ಹಗಲು ಕೂಡಾ ಲೈಂಗಿಕ ಕಿರುಕುಳಕ್ಕೆ ಒಳಗಾಗಬೇಕಾಗಿದೆ.

ಇನ್ನು ಅಸಂಘಟಿತ ಕ್ಷೇತ್ರದಲ್ಲಿ ಖಾಸಗಿ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಪರ್‌ಫೆಕ್ಟ್ ಅಫರೆಲ್ಸ್ ಎಂಬ ಗಾರ್ಮೆಂಟ್‌ನಲ್ಲಿ ಯೂನಿಯನ್ ಸೆಕ್ರೆಟರಿ ಮಹಿಳೆ ಎಂಬ ಕಾರಣಕ್ಕಾಗಿ ಹಣ ಪ್ರಯೋಗದಿಂದ ಆಕೆಯನ್ನು ನಾಯಕತ್ವದಿಂದ ಬಿಡಿಸಲಾಗದೆ ಮಾಡಿದ ಉಪಾಯ - ಸಸ್ಪೆಂಡ್ ಆಗಿ ಕಾರ್ಖಾನೆ ಆವರಣದಲ್ಲಿ ಕುಳಿತ ಈ ಮಹಿಳೆಯ ಮೇಲೆ ಕಾರ್ಖಾನೆಗೆ ಸಂಬಂಧಪಡದ 3ನೇ ವ್ಯಕ್ತಿಯನ್ನು ಕಳುಹಿಸಿ ಬಹುಶಃ (ಲಿಖಿತ ರೂಪದಲ್ಲಿ ಬರೆಯಲಾಗದ) ಅವಾಚ್ಯ ಶಬ್ದಗಳಿಂದ ಬಯ್ದು ಹಲ್ಲೆ ಮಾಡಲು ಪ್ರಯತ್ನಿಸಿದ್ದು.

ಬಿಪಿಎಲ್ ಕಾರ್ಖಾನೆಯಲ್ಲಿ ಮಹಿಳೆಯರನ್ನು ರಾತ್ರಿ ಪಾಳೆಯಗಳಲ್ಲಿ ದುಡಿಸಿ ರಾತ್ರಿ 10 ಗಂಟೆಯ ಮೇಲೆ ಕೆಲವು ನಿಗದಿತ ಪ್ರದೇಶಗಳಲ್ಲಿ ಬಿಟ್ಟಾಗ ಅವರು ಮನೆ ಸೇರುವವರೆಗಿನ ಸಮಸ್ಯೆಗಳು ಹೇಳತೀರವು.

ಇನ್ನೂ ಬೀಡಿ, ಅಂಗನವಾಡಿ, ಪ್ಲಾಂಟೇಷಶನ್, ಶಾಪ್, ಹೋಟೆಲ್, ಟೈಪಿಸ್ಟ್‌ಗಳು, ಕೃಷಿಕೂಲಿಕಾರ ಮಹಿಳೆಯರು ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಹೀಗೆ ಮನಬಿಚ್ಚಿ ಬಹುಶಃ ಹೆಸರು, ಸಂಸ್ಥೆಯ ಹೆಸರು ಹೇಳಿದರೆ ತಮಗೆಲ್ಲಾ ಅಪಾಯ ಒದಗವುದೋ ಎಂಬ ಭೀತಿ ಮನಸ್ಸಿನಲ್ಲಿದ್ದರೂ ತೋರ್ಪಡಿಸದೇ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದುದ್ದು ನವೆಂಬರ್ 12 ರಂದು ಬೆಂಗಳೂರಿನಲ್ಲಿ ನಡೆದ 'ಲೈಂಗಿಕ ಕಿರುಕುಳದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಬಗ್ಗೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಡಿಯಲ್ಲಿ ಒಂದು ಸಂವಾದವನ್ನು ಏರ್ಪಡಿಸಲಾಗಿತ್ತು.

ಈ ಸಂವಾದವನ್ನು ಕರ್ನಾಟಕ ರಾಜ್ಯದ ಪ್ರಥಮ ಮಹಿಳಾ ನ್ಯಾಯಾಧೀಶರಾದ ಮಂಜುಳಾ ಚೆಲ್ಲೂರ್‌ರವರು ಉದ್ಘಾಟಿಸಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಲು ಕಾನೂನುಗಳನ್ನು ಜಾರಿಗೆ ತರುವಲ್ಲಿ ಆಗುತ್ತಿರುವ ವಿಳಂಬವೇ ಕಾರಣ ಎಂದು ಅಭಿಪ್ರಾಯ ಪಟ್ಟರು. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಹಲವಾರು ಕಾನೂನುಗಳಿದ್ದರೂ ಕಾನೂನು ಜಾರಿಯಲ್ಲಿ ಬದ್ಧತೆ ಇಲ್ಲದಿರುವುದೇ ದೌರ್ಜನ್ಯ ಹೆಚ್ಚಾಗಲು ಕಾರಣ ಎಂದವರು ನುಡಿದರು. ದುಡಿಯುವ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳ ತಪ್ಪಿಸುವ ಜವಾಬ್ದಾರಿ ಸಂಸ್ಥೆಯ ಮಾಲೀಕನದ್ದಾಗಿರುತ್ತದೆ ಎಂದು ಸುಪ್ರೀಕೋರ್ಟ್ ತೀರ್ಪು ನೀಡಿದೆ. ಮಹಿಳೆಯರು ಕಿರುಕುಳವನ್ನು ಸಹಿಸಿಕೊಂಡು ಸುಮ್ಮನಿರುವ ಬದಲು ಸಂಬಂಧಪಟ್ಟವರಿಗೆ ದೂರು ನೀಡಬೇಕು. ತಮ್ಮ ಹಕ್ಕುಗಳಿಗಾಗಿ ಹೋರಾಡಲು ಮುಂದಾಗಬೇಕು ಎಂದ ಅವರು ಕಿರುಕುಳಕ್ಕೆ ಒಳಗಾದ ಮಹಿಳೆ ತಕ್ಷಣದಲ್ಲಿಯೇ ಈ ಕೆಳಕಂಡಂತೆ ಪ್ರತಿಕ್ರಿಯಿಸಬೇಕೆಂದೂ ಸಲಹೆ ಮಾಡಿದರು.

- ನೀನು ಮಾಡುತ್ತಿರುವ ಕೆಲಸ ನನಗಿಷ್ಟವಿಲ್ಲ, ತಕ್ಷಣವೇ ನಿಲ್ಲಿಸಬೇಕು.
- ಎದುರುಗಡೆ ವ್ಯಕ್ತಿಗೆ ಇದು ತಪ್ಪು ಎಂಬುದನ್ನು ಹೇಳಬೇಕು.
- ದೂರು ಕೊಡಲು ಹೋದಾಗ ಬೇರೆಯವರು ಯಾರೂ ವಿರೋಧಿಸದಿರುವಾಗ ನಿಂಗ್ಯಾಕೆ ಎಂಬ ಪ್ರಶ್ನೆ ಉದ್ಭವಿಸಿದರೂ ದೂರು ಸಮಿತಿಗೆ ದೂರು ನೀಡುವುದು.
- ನಿಮ್ಮ ಸಂಸ್ಥೆಗಳಲ್ಲಿ ನ್ಯಾಯ ಸಿಗಲಿಲ್ಲವೆಂದರೆ ಎನ್‌ಜಿಓ ಬಳಿ, ಸಹ ಕಾರ್ಮಿಕರ ಬಳಿ ಹೋಗಬೇಕು.
- ಧೈರ್ಯವಾಗಿ ಎದುರಿಸಬೇಕು.

ಕಾರ್ಮಿಕ ಆಯುಕ್ತರಾದ ಇ.ವೆಂಕಟಯ್ಯನವರು ಮುಖ್ಯ ಅತಿಥಿಯಾಗಿ ಪ್ರತಿ ದುಡಿಯುವ ಪ್ರದೇಶದಲ್ಲಿಯೂ ಒಂದು ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ರಚಿಸಿ ಅದರ ಮೂಲಕ ದುಡಿಯುವ ಮಹಿಳೆಯರು ತಮ್ಮ ಮೇಲಾಗುವ ಕಿರುಕುಳದ ವಿರುದ್ಧ ಹೋರಾಟಕ್ಕೆ ಮುಂದಾಗಬೇಕು ಎಂದರು.

ಅಸಂಘಟಿತ ಕಾರ್ಮಿಕ ವಲಯದಲ್ಲಿ ಸಮನ್ವಯ ಸಮಿತಿಗಳನ್ನು ಭೌಗೋಳಿಕ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿಗಳನ್ನು ರಚಿಸಬಹುದಾಗಿದೆ ಎಂದವರು ನುಡಿದರು.



ವೇದಿಕೆಯಲ್ಲಿ ಎಸ್.ವರಲಕ್ಷ್ಮಿ, ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ವಿಜೆಕೆ ನಾಯರ್ ಮತ್ತು ಇ.ವೆಂಕಟಯ್ಯನವರು

ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ದುಡಿಯುವ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳದ ಬಗ್ಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಿದೆ.

ಅನುಚಿತ ಲೈಂಗಿಕ ಮನೋಭಾವದ ವರ್ತನೆಗಳಾದ

- ದೈಹಿಕವಾಗಿ ಸಂಪರ್ಕ ಅಥವಾ ಹಾಗೆ ಪ್ರವರ್ತಿಸಲು ಮುಂದಾಗುವುದು.
- ಲೈಂಗಿಕ ಸಹಕಾರಕ್ಕೆ ಒತ್ತಾಯ ಅಥವಾ ವಿನಂತಿಸುವುದು.
- ಲೈಂಗಿಕ ಚಿತ್ರಣದ ರೀತಿ ಸಂಜ್ಞೆ ಮಾಡುವುದು.
- ಅಶ್ಲೀಲ ವಿಷಯ ವರ್ಣನೆ ಮಾಡುವುದು.
- ಲೈಂಗಿಕ ಸ್ವರೂಪದ ಯಾವುದೇ ಇತರೆ ಅನುಚಿತ, ದೈಹಿಕವಾದ ಮಾತಿನ ರೂಪದ ಅಥವಾ ಹಾವಭಾವದ ನಡತೆ ಇತ್ಯಾದಿಗಳು ಲೈಂಗಿಕ ಕಿರುಕುಳದ ಅರ್ಥವ್ಯಾಪ್ತಿಗೆ ಬರುತ್ತವೆ.

ಮಾಲೀಕ ಅಥವಾ ಮಾಲೀಕನಿಗೆ ಜವಾಬ್ದಾರನಾದ ವ್ಯಕ್ತಿಯ ಕೆಲಸದ ಜಾಗಗಳಲ್ಲಿ ಮಹಿಳಾ ಉದ್ಯೋಗಿಗಳ ಲೈಂಗಿಕ ಕಿರುಕುಳಗಳಿಗೆ ಒಳಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿವುಳ್ಳವನಾಗಿರುತ್ತಾನೆ ಮತ್ತು ಅಂತಹ ದೂರುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ವಿಧಾನಗಳನ್ನು ನಿಗದಿ ಪಡಿಸಬೇಕಾಗುತ್ತದೆ. ನಿಯಮಿತ ಸಂಬಳ ಪಡೆಯುವ, ಗೌರವ ಧನ ಸ್ವೀಕರಿಸುವ ಅಥವಾ ಸರಕಾರದ ಇಲಾಖೆಗಳಲ್ಲಿ ಸ್ವಯಂ ಸೇವಾ ಭಾವದಿಂದ ಕೆಲಸಮಾಡುವ, ಖಾಸಗಿ ವಲಯವಾಗಲಿ, ಅಸಂಘಟಿತ ವಲಯದಲ್ಲಾಗಲಿ ದುಡಿಯುವ ಎಲ್ಲ ಮಹಿಳೆಯರು ಸರ್ವೋಚ್ಚ ನ್ಯಾಯಾಲಯದ ಮರ್ಗಸೂಚಿಯ ವ್ಯಾಪ್ತಿಗೆ ಒಳಪಡುತ್ತಾರೆ.

ಖಾಸಗಿ ವಲಯದ ಮಾಲೀಕರು, ಸಾರ್ವಜನಿಕ ಕ್ಷೇತ್ರದ ಜವಾಬ್ದಾರಿಯುತ ಅಧಿಕಾರಿಗಳು ಈ ಕೆಳಕುಂಡಂತೆ ಲೈಂಗಿಕ ಕಿರುಕುಳದ ತಡೆಗೆ ಮುಂಜಾಗರೂಕತೆ ಕ್ರಮಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು.

. ಲೈಂಗಿಕ ಕಿರುಕುಳದ ನಿಷೇಧದ ಕುರಿತು ಪ್ರಕಟಿಸಬೇಕು. ಮತ್ತು ಅಂತಹ ಪ್ರಕಟಣೆಗಳನ್ನು ವ್ಯಾಪಕವಾಗಿ ವಿವರಿಸಬೇಕು.

. ಸರಕಾರ ಮತ್ತು ಸಾರ್ವಜನಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಸೇವಾ ನಿಯಮಗಳಿಗೆ ಮತ್ತು ನಿಬಂಧನೆಗಳಲ್ಲಿ ಲೈಂಗಿಕ ಕಿರುಕುಳದ ನಿಷೇಧವನ್ನು ಸೇರಿಸಬೇಕು.

. ಖಾಸಗಿ ವಲಯದ ಮಾಲೀಕರು ತಮ್ಮ ಸಂಸ್ಥೆಯ ಸ್ಥಾಯಿ ಆದೇಶ ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ ಕಾಯಿದೆ 1946 ರ ಅಡಿಯಲ್ಲಿ ದೃಢೀಕೃತವಾದ ಸ್ಟ್ಯಾಂಡಿಂಗ್ ಆರ್ಡರ್‌ಗಳಲ್ಲಿ ಲೈಂಗಿಕ ಕಿರುಕುಳದ ನಿಷೇಧವನ್ನು ಸೇರಿಸಬೇಕು.

. ಮಹಿಳೆಯರಿಗೆ ತಮ್ಮ ಕೆಲಸದ ಜಾಗಗಳಲ್ಲಿ ತಮಗೆ ಪ್ರತಿಕೂಲ ವಾತಾವರಣವಿದೆ ಎಂಬ ಭಾವನೆ ಬರದಂತೆ ನೋಡಿಕೊಳ್ಳಲು ವಿಶ್ರಾಂತಿ, ಆರೋಗ್ಯ, ಸ್ವಚ್ಛತೆಗಳಿಂದ ಕೂಡಿದ ಸೂಕ್ತ ಕೆಲಸದ ಪರಿಸ್ಥಿತಿಯನ್ನುಂಟು ಮಾಡಬೇಕು. ಯಾವುದೇ ಮಹಿಳೆ ತನ್ನ ಕೆಲಸಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿ ಪ್ರತಿಕೂಲ ಸ್ಥಿತಿಯಲ್ಲಿರುವ ಭಾವನೆಗೆ ಒಳಗಾಗುವಂತೆ ಇರಬಾರದು.

...ಕ ಕಿರುಕುಳ – ತಡೆಯುವುದೆಂತು?

...ುವ ಪ್ರದೇಶದಲ್ಲಿ ಮಹಿಳೆಯರಿಗೆ ಕಿರುಕುಳ ...ದು ಯೋಗ್ಯವಲ್ಲದ ಕಾರ್ಮಿಕ ನಡವಳಿಕೆ ... ಕಾನೂನಿನಲ್ಲಿ ಸೇರ್ಪಡೆಗೊಳಿಸಬೇಕಾದ ...ತೆ ಇದೆ. ಇದರಿಂದಾಗಿ ತಮ್ಮ ಇಲಾಖೆಗೆ ... ಚುರುಕಾಗಿ ಕೆಲಸ ಮಾಡಲು ಸಾಧ್ಯವಿದೆ ... ಅವರು ವಿವರಿಸಿದರು.

...ದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ...ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ



ಕಾರ್ಯದರ್ಶಿ ವಿಜೆಕೆ ನಾಯರ್ ಲೈಂಗಿಕ ಕಿರುಕುಳದ ವಿರದ್ಧ ಕಾರ್ಮಿಕ ಸಂಘಟನೆಗಳ ಕೆಳಹಂತದ ಮುಖಂಡರು ರಕ್ಷಣೆ ನೀಡಬೇಕು. ಜಿಲ್ಲಾ ಮಟ್ಟದಲ್ಲಿ ಕಾವಲು ಸಮಿತಿಗಳನ್ನು ರಚಿಸಬೇಕೆಂದೂ ಸಲಹೆ ನೀಡಿದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಮೋಟಮ್ಮನವರು ಮಾತನಾಡಿ ಈ ಸಮಸ್ಯೆಗಳ ವಿರುದ್ಧ ಆತ್ಮಾಭಿಮಾನದಿಂದ ಸಂಘಟನೆಯ ಮುಖಾಂತರ ಮಹಿಳೆಯರು ಹೋರಾಡಬೇಕೆಂದರು. ಇದರ ಅಧ್ಯಕ್ಷತೆ ವಹಿಸಿದ್ದ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ.ಎಸ್.ವಿಮಲಾರವರು ಈ ತೀರ್ಪನ್ನು ಸರ್ಕಾರಗಳು ಸರಿಯಾಗಿ ಅನುಷ್ಠಾನಗೊಳಿಸಬೇಕೆಂದರು.

ಈ ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕಿನ ಹಿರಿಯ ವ್ಯವಸ್ಥಾಪಕಿ ಪದ್ಮಿನಿ ಮಯ್ಯನವರು ಭಾಗವಹಿಸಿದ್ದರು.

ಕಾರ್ಯಕ್ರಮವು ಈ ಕೆಳಗಿನಂತೆ ಸರ್ಕಾರಕ್ಕೆ ಸೂಚನೆಗಳನ್ನು ನೀಡಿತು.

- ★ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಬಗ್ಗೆ ಪ್ರಾದೇಶಿಕ ಭಾಷೆಯಲ್ಲಿ ಭಾಷಾಂತರಿಸಿ ಫ್ರೇಮ್ ಒಳಗೊಂಡ ನೋಟಿಸ್ ಬೋರ್ಡ್‌ನಲ್ಲಿ ಮಹಿಳೆಯರು ದುಡಿಯುವ ಸಂಸ್ಥೆ-ಕಚೇರಿಗಳಲ್ಲಿ ಹಾಕಿಸಬೇಕು.
- ★ ಪ್ರಾದೇಶಿಕ ಭಾಷೆಯಲ್ಲಿ ಈ ತೀರ್ಪಿನ ಬಗ್ಗೆ ಸಣ್ಣ ಪುಸ್ತಕಗಳನ್ನು ಹೊರತರುವುದು.
- ★ ಈಗಾಗಲೇ ಕೆಲವೆಡೆ ಸಮಿತಿಗಳ ರಚನೆಯಾಗಿದೆ. ಈ ಸಮಿತಿಗಳು ಇಲಾಖೆಗಳ ಎಲ್ಲಾ ಕೆಳಹಂತದ ಘಟಕಗಳಲ್ಲೂ ರಚನೆಯಾಗಬೇಕು.
- ★ ಶೇ 96 ರಷ್ಟು ಮಹಿಳೆಯರು ದುಡಿಯುವ ಅಸಂಘಟಿತ ಕ್ಷೇತ್ರದ, ಸರ್ಕಾರದ ಯೋಜನೆಗಳಲ್ಲಿ, ಸಣ್ಣಪುಟ್ಟ ವಾಣಿಜ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ತಾಲ್ಲೂಕು ಮಟ್ಟ-ಜಿಲ್ಲಾ ಮಟ್ಟದಲ್ಲಿ ದೂರು ಸಮಿತಿಗಳನ್ನು ರಚಿಸಬೇಕು. ಈ ಸಮಿತಿಯಲ್ಲಿ ಸರ್ಕಾರ, ಮಹಿಳಾ ಸಂಘಟನೆ ಮತ್ತು ಟ್ರೇಡ್ ಯೂನಿಯನ್‌ನ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಬೇಕು ಮತ್ತು ಪ್ರಚಾರಪಡಿಸಬೇಕು.
- ★ ಸ್ಟ್ಯಾಂಡಿಂಗ್ ಆರ್ಡರನಲ್ಲಿ ಈ ಕಿರುಕುಳ ನಿಷೇಧವನ್ನು ಸೇರಿಸಬೇಕು.
- ★ ಕೋಡ್ ಆಫ್ ಕಂಡಕ್ಟ್‌ನಲ್ಲಿ ಈ ನಿರ್ಬಂಧವನ್ನು ಸೇರಿಸಬೇಕು.
- ★ ಈ ತೀರ್ಪಿನ ಬಗ್ಗೆ ಪ್ರಜ್ಞೆಯನ್ನು ಎತ್ತರಿಸಲು ಕಾರ್ಯಕ್ರಮಗಳನ್ನು ರೂಪಿಸಬೇಕು.

ಕರ್ನಾಟಕ ಪೋಸ್ಟಲ್ ಎಂಪ್ಲಾಯೀಸ್ ಯೂನಿಯನ್, ಬ್ಯಾಂಕ್ ಫೆಡರೇಷನ್ ಆಫ್ ಇಂಡಿಯಾ, ಎಲ್‌ಐಸಿ ಮಹಿಳಾ ಉಪಸಮಿತಿ, ಕರ್ನಾಟಕ ರಾಜ್ಯ ಶಿಕ್ಷಕಿಯರ ಸಂಘ, ರಾಜ್ಯ ಸರ್ಕಾರಿ ನೌಕರರ ಸಂಘದ ಮಹಿಳಾ ಉಪಸಮಿತಿ, ಎಂಎಸ್‌ಐಎಲ್ ಮಹಿಳಾ ಉಪಸಮಿತಿ, ವುಮೆನ್ಸ್ ನರ್ಸಸ್ ಅಸೋಸಿಯೇಷನ್ ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳು ಈ ಕಾರ್ಯಕ್ರಮವನ್ನು ಜಂಟಿಯಾಗಿ ಆಯೋಜಿಸಿದ್ದವು.

...ದೂರುಗಳ ವಿಚಾರಣೆಗೆ ವಿಧಿವಿಧಾನಗಳು

...ಬ್ಬ ಮಹಿಳೆ ಅಧ್ಯಕ್ಷರಾಗಿರುವ - ...ರ್ಧದಷ್ಟು ಸದಸ್ಯರು ಮಹಿಳೆಯರಿಂದ ...ೂಡಿರುವ ಒಂದು ದೂರುಗಳ ...ಮಿತಿಯನ್ನು ಮಾಲೀಕರು ರಚಿಸಬೇಕು. ...ಂಗಿಕ ಕಿರುಕುಳದ ವಿಷಯಕ್ಕೆ ಸಂಬಂಧಿಸಿ ...ಸ ಮಾಡುವ ಒಂದು ಸ್ವಯಂ ...ೇವಾಸಂಸ್ಥೆ ಅಥವಾ ಇತರ ಸಂಸ್ಥೆ ದೂರು ...ಮಿತಿಯಲ್ಲಿ ಸದಸ್ಯರಾಗಿರಬೇಕು.

...ೂರುಗಳ ವಿಧಾನ ಕ್ರಮಗಳು ಕಾಲ ...ಗದಿತವಾಗಿರಬೇಕು.

...ೂರು ವಿಧಾನದ ಗೌಪ್ಯತೆಯನ್ನು ...ಪಾಡಬೇಕು.

...ೂರು ನೀಡಿದವರು ಸಾಕ್ಷಿಗಳನ್ನು ದೂರಿನ ...ಂಬಂಧ ವಿಚಾರಿಸುವಾಗ ...ಲಿಪಶುವಾಗದಂತೆ ತಾರತಮ್ಯಕ್ಕೆ ...ಳಗಾಗದಂತೆ ರಕ್ಷಣೆ ಒದಗಿಸಬೇಕು.

...ಮಿತಿಯು ಸರಕಾರಕ್ಕೆ ಸಂಬಂಧಪಟ್ಟ ...ಲಾಖೆಗೆ ದೂರುಗಳು ಮತ್ತು ಅವುಗಳ ...ಗ್ಗೆ ತೆಗೆದುಕೊಂಡ ಕ್ರಮಗಳ ಕುರಿತು ...ಾರ್ಷಿಕ ವರದಿ ಸಲ್ಲಿಸಬೇಕು.

...ಯಾವುದೇ ವ್ಯಕ್ತಿ ಇಂತಹ ಅಪರಾಧ ...ರುವುದು ಸೇವಾ ನಿಯಮಗಳ ಪ್ರಕಾರ ...ಡತೆ ಎಂದು ಕಂಡು ಬಂದರೆ ಅಂತಹವರ ...ೆ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕು.

...ರಾಧ ದಂಡ ಸಂಹಿತೆಯ ಪ್ರಕಾರ ...ವದೇ ವ್ಯಕ್ತಿಯಿಂದ ಇಂತಹ ಅಪರಾಧ ...ಟ್ಟಾದರೆ ಮಾಲೀಕರು ಸಂಬಂಧಪಟ್ಟ ...ಾರಿಗಳಿಗೆ ದೂರು ನೀಡುವ ಮೂಲಕ ...ಕ್ತಿಯ ವಿರುದ್ಧ ಕ್ರಮಕ್ಕೆ ಮುಂದಾಗಬೇಕು.

...ಇಂತಹ ಕಿರುಕುಳಕ್ಕೆ ಬಲಿಯಾದವರಿಗೆ ...ಗೆ ತೊಂದರೆ ನೀಡುವವರನ್ನು ...ರ್ಗಾಯಿಸುವಂತೆ ಕೇಳುವ ಅಥವಾ ತಾನೇ ...ರ್ಗಾವಣೆಗೊಳ್ಳುವ ಅವಕಾಶ ನೀಡಬೇಕು.

...ಕಾರ್ಮಿಕರ ಸಭೆಗಳಲ್ಲಿ ಮಾಲೀಕರು ...ರ್ಕ ಪ್ರತಿನಿಧಿಗಳ ಸಭೆಗಳಲ್ಲಿ ಇತರ ಸೂಕ್ತ ...ಕೆಗಳಲ್ಲಿ ಲೈಂಗಿಕ ಕಿರುಕುಳದ ಕುರಿತು ...ವಾಗಿ ಚರ್ಚಿಸಬೇಕು.

...ಮಹಿಳಾ ಉದ್ಯೋಗಿಗಳಿಗೆ ತಮ್ಮ ಹಕ್ಕುಗಳ ... ತಿಳುವಳಿಕೆ ಬರುವಂತೆ ಸರ್ವೋಚ್ಚ ...ಯಾಲಯದ ಮಾರ್ಗಸೂಚಿಗಳನ್ನು ...ಖ ಜಾಗದಲ್ಲಿ ಪ್ರಕಟಿಸಬೇಕು.

...ಹೊರಗಿನವರು ಅಥವಾ ...ರನೆಯವರಿಂದ ಮಹಿಳಾ ಉದ್ಯೋಗಿಗಳು ...ಕ ಕಿರುಕುಳಕ್ಕೊಳಗಾದರೆ ಮಾಲೀಕರು ...ಹವರಿಗೆ ಸೂಕ್ತ ಸಹಾಯ ಒದಗಿಸಬೇಕು.

...ಾಸಗೀ ಮಾಲೀಕರು ತಮ್ಮ ಸಂಸ್ಥೆಗಳಲ್ಲಿ ...ಯಾಲಯದ ಮಾರ್ಗಸೂಚಿಗಳನ್ನು ...ಯವಾಗಿ ಅನುಸರಿಸುವಂತಾಗಲು ಕೇಂದ್ರ ... ರಾಜ್ಯ ಸರಕಾರಗಳು ಸೂಕ್ತ ಶಾಸನಗಳನ್ನು ...ಬೇಕು.

ತೀರ್ಪಿನ ಹಿನ್ನೆಲೆ


ಸುಮಾರು ಒಂದು ದಶಕದ ಹಿಂದೆ ರಾಜಸ್ತಾನ ಸರಕಾರದ ಮಹಿಳಾ ಅಭಿವೃದ್ಧಿ ಇಲಾಖೆಯ ಬಾಲ್ಯವಿವಾಹ ತಡೆ ಯೋಜನೆಯಡಿ ಸಾಥಿನ್ ಆಗಿ ಭಾಂವ್ರಿ ದೇವಿ ಎಂಬ ಯುವತಿ ಕೆಲಸ ಮಾಡುತ್ತಿದ್ದರು. ಆಕೆ ಬಾಲ್ಯ ವಿವಾಹವೊಂದನ್ನು ತಡೆದಳೆಂಬ ಕಾರಣಕ್ಕೆ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತು. ಬಹುಶಃ ಎಲ್ಲ ಜೀವವಿರೋಧಿ ಮಹಿಳಾ ವಿರೋಧಿ ನಿಲುವುಗಳನ್ನು ಗರ್ಭಿಸಿಕೊಂಡಂತಿರುವ ಭಾರತೀಯ ಸಮಾಜದಲ್ಲಿ ಭಾಂವ್ರಿ ದೇವಿಗೆ ನ್ಯಾಯ ಸಿಗಲಿಲ್ಲ. ಪ್ರಭುತ್ವ, ಅಧಿಕಾರಿಗಳು ಎಲ್ಲ ಪ್ರಕರಣಗಳಂತೆ ಇಲ್ಲಿ ಕೂಡಾ ನಿರ್ಲಕ್ಷವನ್ನೇ ತೋರಿದವು. ರಾಜಸ್ಥಾನದ ನ್ಯಾಯಾಲಯ ಕೂಡ ಈ ವಿಚಾರದಲ್ಲಿ ಹಿಂದೆ ಬೀಳಲಿಲ್ಲ. ನ್ಯಾಯ ನೀಡುವಲ್ಲಿ ಅದು ಕೂಡಾ ಪಕ್ಷಪಾತವನ್ನೇ ತೋರಿಸಿತು.

ಇದನ್ನು ಪ್ರಶ್ನಿಸಿ ರಾಜಸ್ತಾನದ ಕೆಲವು ಮಹಿಳಾ ಸಂಘಟನೆಗಳು 1992 ರಲ್ಲಿ ಸರ್ವೋನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದವು. ಈ ಮನವಿಯ ವಿಚಾರಣೆ ನಡೆಸಿದ ನ್ಯಾಯಾಲಯ ದುಡಿಯುವ ಮಹಿಳೆಯರ ಕೆಲಸದ ಪರಿಸರದಲ್ಲಿ, ಅವರಿಗೆ ಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ ದೂರಗಾಮಿ ಪರಿಣಾಮ ಬೀರುವಂಥ ಒಂದು ಮಹತ್ವದ ತೀರ್ಪನ್ನು 1997 ಆಗಸ್ಟ್ 13 ರಂದು ನೀಡಿತು.

ತೀರ್ಪಿನ ಜಾರಿಯ ಕುರಿತು ಅವಲೋಕನ: 1997 ಆಗಸ್ಟ್ 13 ರಂದು ಈ ಐತಿಹಾಸಿಕ ತೀರ್ಪು ಹೊರಬಿದ್ದಿದ್ದರೂ ಪ್ರಾಯೋಗಿಕವಾಗಿ ನೋಡಿದಾಗ ಹಲವಾರು ಸರ್ಕಾರಿ ಇಲಾಖೆಗಳಲ್ಲಿ, ಸಾರ್ವಜನಿಕ ಕೈಗಾರಿಕೆಗಳಲ್ಲಿ, ಹಣಕಾಸಿನ ಸಂಸ್ಥೆಗಳಲ್ಲಿ ಸಮಿತಿಗಳ ರಚನೆಯಾಗದಿರುವುದು, ಕೆಲವೊಂದು ಕಡೆ ಆಗಿರುವ ಸಮಿತಿಗಳಲ್ಲಿ ಯಾವುದೇ ದೂರುಗಳೇ ಬಂದಿಲ್ಲವೆಂದು, ನಮ್ಮ ಸಂಸ್ಥೆಯಲ್ಲಿ ಇಂತಹ ಘಟನೆಗಳೇ ಸಂಭವಿಸುವುದಿಲ್ಲವೆಂದೂ ಹೇಳುವುದು ಸಾಮಾನ್ಯವಾಗಿದೆ.

ಪ್ರತಿಯೊಬ್ಬ ದುಡಿಯುವ ಮಹಿಳೆಯೂ ತನ್ನ ಕೆಲಸದ ಅವಧಿಯಲ್ಲಿ ಒಂದಲ್ಲ ಒಂದು ರೀತಿಯ ಲೈಂಗಿಕ ಕಿರುಕುಳಕ್ಕೆ ಒಮ್ಮೆಯಾದರೂ ಒಳಗಾಗುತ್ತಾಳೆ. ಅದು ಕಛೇರಿ, ಕಾರ್ಖಾನೆ, ಗದ್ದೆ ಹೀಗೆ ಎಲ್ಲಿ ಬೇಕಾದರೂ ಆಗಬಹುದು. ಆಡಲಾರದ, ಅನುಭವಿಸಲಾರದ ಈ ವಿಚಿತ್ರ ಹಿಂಸೆಯನ್ನು ಅತ್ಯಂತ ಸಾಮಾನ್ಯ ಕ್ರಿಯೆ ಎಂದು ಪರಿಗಣಿಸಲಾಗಿದೆ ಮತ್ತು ಮಹಿಳೆ ಇದನ್ನು ಮೌನವಾಗಿ ಸಹಿಸಬೇಕು ಎಂದೇ ನಿರೀಕ್ಷಿಸಲಾಗುತ್ತಿದೆ. ಇತ್ತೀಚೆಗೆ ಐಎಲ್‌ಓ ವರದಿಯ ಪ್ರಕಾರ ದುಡಿಯುವ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ 15% ಗಿಂತಲೂ ಹೆಚ್ಚಾಗಿದೆ ಎಂದೂ ಅಭಿಪ್ರಾಯಪಟ್ಟಿದೆ.

ದುಡಿಯುವ ಸ್ಥಳಗಳಲ್ಲಿ ತಮ್ಮ ಮೇಲಾಗುವ ಅಸಹ್ಯ ಕಿರುಕುಳವನ್ನು ದೂರು ಸಮಿತಿಗೆ ನೀಡುವ ವಾತಾವರಣ ಇಲ್ಲದಿರುವುದು, ಸಮಿತಿಗೆ ದೂರು ಕೊಟ್ಟರೂ ತನ್ನ ಕೆಲಸದ ರಕ್ಷಣೆಯಿರುತ್ತದೆ ಎಂಬ ಭರವಸೆ, ದೂರು ಕೊಟ್ಟರೂ ತನ್ನ ಸಹೋದ್ಯೋಗಿಗಳ ಕೆಂಗಣ್ಣಿಗೆ ಮತ್ತೆ ಗುರಿಯಾಗಬೇಕಾಗುತ್ತದೆ ಎಂಬ ಭೀತಿ, ತನ್ನ ಮೇಲೆ ಅಂತಹ ಕಿರುಕುಳ ನಡೆದಿದೆ ಎಂದು ತಿಳಿದರೆ ತನ್ನ ಮನೆಯವರಿಂದ ಬರುವ ಪ್ರತಿಕ್ರಿಯೆಗಳ ಭಯದಿಂದ ಹಲವಾರು ಮಹಿಳೆಯರು ನೋವುಗಳಲ್ಲೇ ಬಳಲುತ್ತಿರುವುದು ಬಹಿರಂಗ ಸತ್ಯವಾಗಿದೆ.



ಸಮಾರಂಭದಲ್ಲಿ ಸಚಿವ ಮೋಟಮ್ಮ, ವಿಮಲಾ ಕೆ.ಎಸ್.

ಈಗ ಸಿರಿಗೆರೆಯಲ್ಲಿ 35 ರೂ.ಕೊಟ್ಟರೆ ಕೂಲಿ ಇಲ್ಲದಿದ್ದರೆ ಇಲ್ಲ. 12, 15 ರೂ. ಕೂಲಿ ಇದ್ದು 35 ರೂ. ಆಗಿದೆ. ಕೂಲಿ ಕೂಗಿಗೆ ಏನೆಲ್ಲಾ ರಾಜಕೀಯ ನಡೆಯಿತು ಎಂದು ಕೂಲಿಕಾರರು ಮಾತಾಡಿಕೊಳ್ಳುತ್ತಾರೆ.

ಕೂಲಿಯ ಕೂಗಿಗೆ ಭುಗಿಲೆದ್ದ ರಾಜಕೀಯ

ಪಿ.ಆರ್. ವೆಂಕಟೇಶ್

ಕುರುಗೋಡು: "ಢಣ, ಢಣ, ಢಣ" ಢಣಗುಟ್ಟಿತು ಹಲಗೆಯ ಸದ್ದು, ಸಿರಿಗೇರಿಯ ತುಂಬಾ. ಸದ್ದಿಗೆ ಕಿವಿಗೊಟ್ಟ ಜನ 'ಏನದು?' ವಿಸ್ಮಯದಿಂದ ಕಿವಿಕಣ್ಣುಗಳನ್ನು ಜಾಗೃತಗೊಳಿಸಿದರು. "40 ರೂ. ಕೂಲಿಕೊಟ್ಟರೆ ಟ್ರಾಕ್ಟರ್ ಹತ್ತಿರಿ, ಇಲ್ಲದಿದ್ದರೆ ಇಲ್ಲ"! ಕೂಲಿಕಾರ ಸಂಘದ ಉಪಾಧ್ಯಕ್ಷ ಮಾರೆಪ್ಪನ ಅವಾಜ್. "ಕೂಲಿ ಸಂಘದವ್ರು ಬೇಸ್ ಮಾಡ್ಯಾರಪ್ಪ" ಕೂಲಿಕಾರರ ಸ್ಪಂದನ. "ಅಬ್ಬಬ್ಬಾ ಅಷ್ಟೊಂದು ಕೂಲಿ ಕೊಟ್ರೆ ನಾವು ಓಡಿಹೋಗಬೇಕು ಅಷ್ಟೇ" ರೈತರು ಗೊಣಗುಟ್ಟಿದರು. "ಇಷ್ಟುದಿನ ಸಿರಿಗೇರಿ ಶಾಂತವಾಗಿತ್ತು, ಎಲ್ಲರಲ್ಲೂ ಎಲ್ಲದರಲ್ಲೂ ಹೊಂದಾಣಿಕೆ ಇತ್ತು. ಮುಂದೇನೋ" ಮಧ್ಯಮ ವರ್ಗದ ರೈತರ ಹಪಿಹಪಿ. "ನಾವ್ಯಾಕೆ ರೈತಾಪಿ ಮಾಡಬೇಕು ಅವರಕೂಡ ನಾವೂ ಕೂಲಿಗೆ ಹೋಗಾನು, ಕೂಲಿ ಸಂಘದ್ದು ಬಾಳಾ ಆತು. ತಡೆ ಹಾಕಲೇಬೇಕು" ಶ್ರೀಮಂತ ರೈತರ, ಭೂ ಮಾಲಿಕರ ಸಿಟ್ಟು. ಹೀಗೆ ಶುರುವಾಯ್ತು ಕೂಲಿಯ ಕೂಗಿಗೆ ಭುಗಿಲೆದ್ದ ರಾಜಕೀಯ.

ಈ ಗ್ರಾಮದೊಡಲಿನಲ್ಲಿ 12000 ಜನರಿದ್ದಾರೆ. 6 ರಿಂದ 8 ಸಾವಿರದಷ್ಟು ಬೆವರು ಬಸಿದು ಬದುಕುವ ಕೂಲಿ ಮಂದಿ, ಇಲ್ಲೊಂದು ಹಳೇ ಕೆರೆಯಿದೆ ಅದರ ಹೆಸರು ಊರಿನ ಹೆಸರೂ ಒಂದೇ ಸಿರಿಯಗೆರೆ ಅಥವಾ ಸಿರಿಗೇರಿ. ಆಗಾಗ ಹಳೆಯ ತಲೆಗಳು ಕೆರೆಯ ಕಥೆಯನ್ನು ಬಾಯಲ್ಲಿ ತಾಂಬೂಲ ಜಗಿಯುತ್ತಾ ಮೆಲಕು ಹಾಕುತ್ತಾರೆ. ಯಾವಾಗಲೋ ಒಂದು ದಿನ ಈ ಕೆರೆಯಲ್ಲಿ ಸಿರಿಯ ತೆಪ್ಪ ತೇಲಿ ಬಂದಿತ್ತಂತೆ. ತೇಲಿಬಂದ ತೆಪ್ಪ ಊರೊಳಗೆ ಹರಿಯಲಿಲ್ಲ. ಸಿರಿವಂತರ ಕೋಣೆ ಒಳಗೇ ಲಾಕಪ್ ಆಗಿ 6,7 ಭೂಮಾಲಿಕರಿಗೆ, ಬಡ್ಡಿ ದುಡ್ಡಿನ ಸಾಹುಕಾರರಿಗೆ ಜನ್ಮ ನೀಡಿತ್ತಂತೆ. ಈಗ ಈ ಸಿರಿಗೆರೆಯ ಒಣಕೆರೆ ಮಳೆ ಬಂದಾಗ ಹೊಲಸು ನೀರು ತುಂಬಿ ಹೊಲಸು ಗೇರಿಯಾಗಿದೆ. ಅಲ್ಲಲ್ಲಿ ಇತಿಹಾಸದ ಕುರುಹುಗಳನ್ನು ಹೇಳುವ ಹರಕು ಮುರುಕು ದೇವಾಲಯಗಳನ್ನು ಉಳಿಸಿಕೊಂಡಿದೆ. ಈಗ ಇದೇ ಅದರ ಸಿರಿ. ಪ್ರತಿ ಭೂಮಾಲೀಕರ ಪ್ರತಿ ಮನೆಯಲ್ಲಿ 3 ರಿಂದ 6 ಜನ ಸಂಬಳದಾಳುಗಳಿದ್ದಾರೆ. ಸಾಲದ ಬೆಲೆ ಬೀಸಿ 20 ರಿಂದ 25 ಖಾಯಂ ಕೂಲಿ ಆಳುಗಳಿದ್ದಾರೆ. ಅಸಲು ತೀರಿದರೆ ಬಡ್ಡಿ ಉಳಿದು, ಬಡ್ಡಿ ತೀರಿದರೆ ಅಸಲು ಉಳಿದು ಒಟ್ಟಾರೆ ಯಾವುದೋ ಒಂದು ಕೊಕ್ಕೆ ಕತ್ತಿಗೆ ಸಿಕ್ಕು ಅವರು ಕೊಟ್ಟಷ್ಟು ಕೂಲಿಗೆ ದುಡಿಯುವುದೊಂದೇ ಇವರ ಪಾಡು. ಸಿರಿಗೇರಿಯಲ್ಲಿ ಜಾರಿಯಿದ್ದ ಕೂಲಿ ಕೇವಲ 12 ರಿಂದ 15 ರೂ. ಯಾವಾಗಲೋ ಒಮ್ಮೆ ಬರಗಾಲದಲ್ಲಿ ಮಳೆ ಬಂದಂತೆ 20 ರೂ. ಆಗುತ್ತಿತ್ತು. ಇಂತಹ ಧಣಿಗಳ ಸಾಲಿನಲ್ಲಿ ತಾತನವರೆಂದು ಖ್ಯಾತಿಯಾದ ರೇವಣಸಿದ್ಧಯ್ಯನವರು ಪ್ರಮುಖರು. ಮಾಜಿ ಎಂ.ಎಲ್.ಎ.ಗಳು, ಮಾಜಿ ರಾಜ್ಯ ರೈತ-ರೈತ ಕಾರ್ಮಿಕ ಸಂಘದ ಅಧ್ಯಕ್ಷರೂ ಹೌದು. ಎಂ.ಎಲ್.ಎ. ಆದ ಮೇಲೆ ರೈತಸಂಘಕ್ಕೆ ತಿಲಾಂಜಲಿ ನೀಡಿ ಹಣ ಮಾಡುವ ಹೋರಾಟದಲ್ಲಿ ತಲ್ಲೀನರಾಗಿ ನಂತರ ಸೋತು, ಖಾಸಾ ಅಳಿಯರನ್ನು ಪುನಃ ಎಂ.ಎಲ್.ಎ. ಆಗಿಸಿ, ರೈಸ್ ಮಿಲ್‌ಗಳಲ್ಲಿ ಬಂಡವಾಳ ತೊಡಗಿಸಿ ಹಣ ಗಳಿಸುವುದರಲ್ಲೇ ತಲ್ಲೀನರಾಗಿದ್ದಾರೆ. ಕೆಲವು ದಿನ ದಳ(ಯು) ಮತ್ತೆ ಕೆಲವು ದಿನ ಸ್ವತಂತ್ರ ಈಗ ದಳ(ಎಸ್) ಗಳಲ್ಲಿ ಹೊರಳಾಡುತ್ತಿದ್ದಾರೆ.

ಕುರುಗೋಡಿಗೆ ಸಮೀಪವಿರುವ ಸಿರಗುಪ್ಪಾ ತಾಲೂಕಿನ ವ್ಯಾಪ್ತಿಗೆ ಒಳಪಡುವ ಸಿರಿಗೇರಿ ಬಹಳ ಪುರಾತನ ಕಾಲದ್ದು. ಇತ್ತೀಚೆಗಷ್ಟೆ ಪ್ರಾಂತ ಕೃಷಿ ಕೂಲಿಕಾರರ ಸಂಘವು ಕೆಂಬಾವುಟ ಹಾರಿಸುವ ಮೂಲಕ ಉದ್ಘಾಟನೆಗೊಂಡಿತು. ಉದ್ಘಾಟಕರಾಗಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ|| ಚಂದ್ರಪ್ಪ ಹೊಸ್ಕೆರರವರು ಬಂದಿದ್ದರು. ಮುಖ್ಯ ಅತಿಥಿಗಳಾಗಿ ಕಾಂ.ಇ.ಆರ್.ಯಲ್ಲಪ್ಪ, ಕಾಂ ಹೆಚ್.ಎಂ.ವಿಶ್ವನಾಥ ಸ್ವಾಮಿ, ಕಾಂ. ಪಿ.ಆರ್.ವೆಂಕಟೇಶ್ ಭಾಗವಹಿಸಿದ್ದರು. 500 ಜನ ಸೇರಿದ್ದ ಬಹಿರಂಗ ಸಭೆಯಲ್ಲಿ ಕೂಲಿಕಾರರು ಸ್ಫೂರ್ತಿಗೊಂಡರು.

ಮರುದಿನವೇ ಹಲಗೆಯನ್ನು ಢಣ ಢಣಿಸಿ ಕೂಲಿಯ ಕೂಗು ಹಾಕಿದರು. ಕೆಲವರಿಗೆ ಸಿಡಿಲು ಬಡಿದಂತಾಗಿ ಸಂಘದ ಕಾರ್ಯಕರ್ತರ ಮನೆಗೆ ಹೋಗಿ ತಕರಾರು ಎತ್ತಿದರು. ತಕರಾರಿಗೆ ತಕ್ಕ ಉತ್ತರವೂ ಸಿದ್ಧವಾಗಿತ್ತು. "ಇದ್ಯಾವ ಸಂಘ ರೈತರನ್ನು ಹಾಳು ಮಾಡೋದು" ಏನೆಲ್ಲಾ ಮಾತಾಡಿಕೊಂಡರು. ಹಲಗೆ ಸಾರಿದ್ದು, ಪ್ರತಿದಿನ 20ರಿಂದ 25 ಟ್ರಾಕ್ಟರ್‌ಗಳಲ್ಲಿ ತೆರಳುವ ಊರು ಸುತ್ತಲಿನ ಆಂದ್ರಾ ಕ್ಯಾಪ್‌ನಲ್ಲಿ ದುಡಿಯುವ ಕೂಲಿಯ ಬಗ್ಗೆ ಸಿರಿಗೇರಿ ಧಣಿಗಳಿಗೇಕೆ ಸಿಟ್ಟು. ಸುತ್ತಲೂ ಕೂಲಿ ಜಾಸ್ತಿಯಾದರೆ ನಮಗೂ ಬಂದು ಅಪ್ಪಳಿಸುತ್ತದೆ. ಹೆಚ್ಚು ಕೂಲಿ ಕೊಡುವ ಕಡೆ ಕೂಲಿಕಾರರು ಹೋದರೆ ತಮ್ಮ ಹೊಲದ ಗತಿ! ಆಳುಗಳು ಸಿಗುವುದೇ ಕಷ್ಟವಾಗುತ್ತದೆ. ಹೇಗಾದರೂ ಮಾಡಿ ಇದನ್ನು ತಡೆಗಟ್ಟಬೇಕು. ಹೇಗಿದ್ದರೂ ಈಗ ಎಲ್ಲಾ ರೈತರೂ ಸಿಟ್ಟಾಗಿದ್ದಾರೆ. ಈ ಸಿಟ್ಟನ್ನು ಒಟ್ಟು ಮಾಡಿ ಕೂಲಿಕಾರ ಸಂಘದ ಮೇಲೆ ಸಿಡಿಸಬೇಕು. ಸಂಘ ಬಂದ್ ಆಗಬೇಕು.

ಕೂಲಿ ಹೆಚ್ಚು ಕೇಳಲು ಸಹಜ ಸಂದರ್ಭ ಒದಗಿ ಬಂದಿತು. ಈ ಸಮಯದಲ್ಲಿ ಪಟ್ಟು ಹಿಡಿಯದಿದ್ದರೆ ಆಗದು. ಹಿಡಿದ ಪಟ್ಟು ಬಿಡಲೇಬಾರದು. ಈಸಲದ ಕೃಷಿ ತುಂಬಾ ಬಿರುಸಿನಿಂದ ಸಾಗಿದೆ. ಕಾಲುವೆ ನೀರು, ಮಳೆ ಒಟ್ಟಿಗೆ ಶುರುವಾದ್ದರಿಂದ, ನೀರಾವರಿ ಹಾಗೂ ಒಣ ಬೇಸಾಯದ ಕೆಲಸ ಒಟ್ಟಿಗೆ ಪ್ರಾರಂಭವಾದವು. ಹೀಗಾಗಿ ಕೂಲಿಕಾರರಿಗೆ ತುಂಬಾ ಬೇಡಿಕೆ ಬಂತು. ಇದನ್ನರಿತೇ ಕೂಲಿಯ ಕೂಗು ಮೊಳಗಿತು. ಭೂಮಾಲೀಕರಿಗೆ ಹೊಲದ ಕೆಲಸದ ಒತ್ತಡ ಆದ್ದರಿಂದ ಕೂಲಿಕಾರರಿಗೆ ಕೂಲಿ ಹೆಚ್ಚಳದ ಒತ್ತಡ ಎಂದೂ ತಿರುಗಿ ಮಾತನಾಡದಜ ಜನ ಇಂದು ತಮ್ಮ ಮಾತು ಕೇಳಲು ತಯಾರಿಲ್ಲ. ಇದಕ್ಕೆ ಕೂಲಿ ಸಂಘದ ಕುಮ್ಮಕ್ಕು.

ಅವರು ಹೇಳಿದರು "ರೈತರು ಲಾಸಾಗಿ ಆತ್ಮಹತ್ಯೆ ಮಾಡಿ ಕೊಂಡಾರ. ಹಂಗಿರುವಾಗ ಕೂಲಿ ಹೆಚ್ಚ ಕೇಳ್ತಾರ ಈ ಸಂಘದವರಾ", "ಸುಮ್ಮನ ಯಾಕಪ್ಪಾ ನಾವೂ ಕುರ್ಚಿಗೆ ತಗಂಡು ಅವರ ಕೂಡ ಕೂಲಿಗೆ ಹೋಗೋನು ನಡ್ರಿ" "ಈ ದಂದೆ ಒಳಗ ನಮಗಸಿಗದೇ ಕಷ್ಟ. ಇದ್ರಾಗ ಕೂಲಿ ಹೆಚ್ಚು ಮಾಡಿಬಿಟ್ರ ಹೊಲಮನಿ ಮಾರ್‍ಕೊಳ್ಳಬೇಕ" ಒಂದೊಂದಾಗಿ ಬಾಣಗಳು ಸಂಘದ ವಿರುದ್ಧ ಬರತೊಡಗಿದವು.

ಸಂಘವು ಒಂದೊಂದಾಗಿ ಉತ್ತರಿಸುತ್ತಾ ಹೋಯಿತು. ರೈತರ ಆತ್ಮಹತ್ಯೆಯ ಬಗ್ಗೆ ನಮಗೆ ನೋವು ಇದೆ. ಸಮಸ್ಯೆಯ ಪರಿಹಾರ ಆತ್ಮಹತ್ಯೆಯಲ್ಲ. ಮುಖ್ಯವಾಗಿ ರೈತರಷ್ಟೇ ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ. ಕೂಲಿಕಾರರು ಸಹ. ಮೊನ್ನೆ ತಾನೆ ಬಡ ಶಂಕ್ರಮ್ಮ ತನ್ನ ಎಳೆ ಮಕ್ಕಳನ್ನು ಕಟ್ಟಿಕೊಂಡು ಕಾಲುವೆ ಪಾಲಾದಳು. ಏಕೆ? ಹೊಟ್ಟೆ ನೋವು ತಾಳಲಾರದೆ. ತಾನಷ್ಟೇ ಸಾಯಬೇಕಿತ್ತು. ಮಕ್ಕಳನ್ನು ತನ್ನೊಂದಿಗೆ ಕರೆದೊಯ್ದಳೇಕೆ? ಕಿತ್ತು ತಿನ್ನುವ ಬಡತನ, ಕುಡುಕ ಗಂಡನ ಹಿಂಸೆ, ಕೂಲಿಯಿಂದ ಜೀವನ, ದುಗ್ಗಾಣಿ ಕೂಲಿ ಯಾತಕ್ಕೂ ಸಾಲದು. ಇದರ ನಡುವೆ ಅನಾರೋಗ್ಯ, ಕೊಳ್ಳಲಾರದ ಔಷಧಿಗಳು, ಬೆಲೆ ಏರಿಕೆಯ ಬಿಸಿ. ಮುಂದೆ ದಾರಿ ಕಾಣದೆ ಆಕೆಯೇ ಕಂಡುಕೊಂಡ ದಾರಿ ಇದು. ಇಂತಹ ಘಟನೆಗಳು ದಿನನಿತ್ಯ ಪತ್ರಿಕೆಗಳಲ್ಲಿ ಬಂದೇ ಬರುತ್ತವೆ ಯಾವುದೋ ಮೂಲೆಗಳಲ್ಲಿ. ದುರಾದೃಷ್ಟವೆಂದರೆ ಈ ಘಟನೆಗಳನ್ನು ಗಂಭೀರವಾಗಿ ಬಿಂಬಿಸಿಲ್ಲ. ಕೂಲಿ ಹೆಚ್ಚು ಕೊಡುವುದರಿಂದಲೇ ರೈತರಿಗೆ ನಷ್ಟವಾಗುತ್ತದೆ ಎಂಬುದು ಭ್ರಮೆ. ಈಗ ಬೇರೆಡೆ ನಮ್ಮಲ್ಲಿಗಿಂತ ಕೂಲಿ ಹೆಚ್ಚು ಕೊಡುತ್ತಾರೆ. ನಮ್ಮ ಊರಿನ ಸುತ್ತಲ ಹಳ್ಳಿಗಳಲ್ಲಿ ಕೂಲಿ ಹೆಚ್ಚು ಕೊಡಲು ತಯಾರಿದ್ದಾರೆ. ಹಾಗಾದರೆ ಅವರು ನಷ್ಟವಾಗುತ್ತದೆ ಎನ್ನುವುದಾದರೆ ಕೂಲಿ ಹೆಚ್ಚು ಕೊಡಲು ಏಕೆ ತಯಾರಾಗಿರುತ್ತಿದ್ದರು? ರೈತರಿಗೆ ನಷ್ಟವಾಗುತ್ತಿರುವುದು ಸರಕಾರದ ರೈತವಿರೋಧಿ ನೀತಿಗಳಿಂದ, ರೈತನ ಬೆಳೆಗೆ ಯೋಗ್ಯವಾದ ಬೆಂಬಲ ಬೆಲೆ ಇಲ್ಲದೆ ಇರುವುದರಿಂದ, ಬೇಸಾಯಕ್ಕೆ ಹಾಕುವ ಎಲ್ಲಾ ಸಾಮಾನುಗಳ ಬೆಲೆ ಏರಿಸಿದ್ದರಿಂದ, ಗ್ಯಾಟ್ ಒಪ್ಪಂದದಿಂದಾಗಿ ಜಾರಿಗೆ ಬಂದ ಹೊಸ ಆಮದು ನೀತಿಯಿಂದ, ಇವುಗಳ ವಿರುದ್ಧ ರೈತರೂ ಸಂಘಟಿತರಾಗಿ ಹೋರಾಡಬೇಕು. ಹಾಗೆ ಮಾಡದೆ ನಿಮ್ಮೆಲ್ಲಾ ಸಿಟ್ಟನ್ನು ಬಡ ಕೂಲಿಯ ಮೇಲೆ ಹಾಕುವುದು ಎಷ್ಟು ಸರಿ? ಇತ್ತೀಚೆಗೆ ಕರ್ನಾಟಕ ಪ್ರಾಂತ ರೈತ ಸಂಘವು ಮೆಣಸಿನ ಕಾಯಿ ಬೆಳೆ ನಷ್ಟ ಪರಿಹಾರಕ್ಕೆ, ಕಳಪೆ ಕಾರ್ಗಿಲ್ ಜೋಳದ ವಿರುದ್ಧ, ಠಕ್ಕ ವ್ಯಾಪಾರಸ್ಥರು ಕಳಪೆ ಗೊಬ್ಬರ ಮಾರಿ ರೈತರನ್ನು ಸಂಕಟದ ಸ್ಥಿತಿಗೆ ಸಿಲುಕಿಸಿದ್ದು ಅದರ ವಿರುದ್ಧ ಹೋರಾಡಿದೆ. ಅಂತಹ ಹೋರಾಟದಲ್ಲಿ ನಮ್ಮ ಸಂಘವು ಹೋರಾಡಿದೆ. ಖುದ್ದು ನೂರಾರು ಜನ ಕೂಲಿಕಾರರು ಸ್ವಯಂ ಭಾಗವಹಿಸಿದ್ದಾರೆ. ರೈತರ ತೊಂದೆಗಳಿಗೂ ನಾವು ಸ್ಪಂದಿಸಿದ್ದೇವೆ. ಕೂಲಿಗೂ ನಿಮ್ಮ ನಷ್ಟಕ್ಕೂ ಸಂಬಂಧ ಕಲ್ಪಿಸುವಂತೆ ಸರಕಾರದ ಕುತಂತ್ರ ನಡೆದಿದೆ. ಕೃಷಿ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಸರಕಾರ ರೈತರನ್ನು ಕೂಲಿಕಾರರ ವಿರುದ್ಧ ಕೂಲಿಕಾರರನ್ನು ರೈತರ ವಿರುದ್ಧ ಎತ್ತಿ ಕಟ್ಟಿ ಮಜಾ ನೋಡುತ್ತಿದೆ.

ಇವೆಲ್ಲವೂ ಬಹಿರಂಗ ಚರ್ಚೆಗೆ ಒಳಪಟ್ಟವು. ಕೆಲವು ರೈತರು "ನೀವು ಹೇಳೋದು ಸರಿ ಐತೆ. ಕೂಲಿರೇಟು ಸ್ವಲ್ಪ ನೋಡಿ ಫಿಕ್ಸ್ ಮಾಡ್ರೆಪ್ಪ" ಎಂದು ಹೊರಟರು. ಪುನಃ ಮತ್ತೊಂದುವಾದ ಶುರುವಾಯ್ತು. ಧಣಿಗಳು ಹೇಳುತ್ತಾರೆ "ಕೂಲಿ ಮಂದಿಗೆ ಊರು ಅಭಿಮಾನ ಇಲ್ಲ. ನಮ್ಮೂರಾಗ ವಾಸ ಮಾಡಿ ಬೇರೆವೂರಾಗ ದುಡಿಯಲಿಕ್ಕೆ ಹೋಗ್ತಾರ. ನಮ್ಮೂರ ಜನ ನಮ್ಮೂರಾಗ ದುಡಿಬೇಕು. ಆಗ ಊರು ಉದ್ಧಾರ ಆಗತೈತಿ" ಹೇಗಾದರೂ ಮಾಡಿ ಕೂಲಿಕಾರರನ್ನು ಬೇರೆ ಊರಿಗೆ ಹೋಗದಂತೆ ತಡೆದರೆ ಇದ್ದ ಊರಿನಲ್ಲೇ ಕೂಲಿ ಕೆಲಸಕ್ಕೆ ನಿಂತರೆ ಕೂಲಿಕಾರರಲ್ಲಿ ಕೆಲಸಕ್ಕಾಗಿ ಸ್ಪರ್ಧೆಯಾಗುತ್ತದೆ. ಆಗ ತಾವು ಹೇಳಿದ ಕೂಲಿಗೆ ಕೆಲಸ ಮಾಡುತ್ತಾರೆ ಎಂಬ ತಂತ್ರ. ಇದಕ್ಕೂ ಬಗ್ಗದ ಕೂಲಿಕಾರರು ಪ್ರತಿವಾದ ಹೂಡಿದರು. "ನಮ್ಮೂರು ನಮಗೆ ಚಂದ. ಊರು ಬಿಟ್ಟು ಕೂಲಿಗೆ ಹೋಗೋಬದ್ಲು ನಮ್ಮೂರಾಗ ದುಡಿತೀವಿ. ಬೇರೆವೂರಾಗ ಸಿಗೋ ಕೂಲಿ ನಮ್ಮೂರ ಧಣಿಗಳು ಕೊಡ್ಲಿ" ನಾವು ಬೇರೆವೂರಿಗೆ ಹೋದ್ರ ಊರು ಅಭಿಮಾನ ಹಾಳಾತು ಅನ್ನೋದಾದ್ರೆ ಬೇರೆವೂರ ಧಣಿಗಳು ಹೆಚ್ಚು ಕೂಲಿ ಕೊಡ್ತಾರೆ. ನಮ್ಮೂರು ಧಣಿಗಳು ದುಗ್ಗಾಣಿ ಕೂಲಿ ಕೊಡ್ತಾರೆ. ನಮ್ಮೂರಲ್ಲಿ ದುಗ್ಗಾಣಿ ಕೂಲಿ ಕೊಡುವ ಧಣಿಗಳು ಇದ್ದಾರೆ ಎಂದ್ರೆ ಊರು ಅಭಿಮಾನ ಹಾಳು ಆಗೋದಿಲ್ವೆ. ಬೇರೂರಲ್ಲಿ ದುಡಿದು ಬಂದ ಕೂಲಿಯನ್ನು ನಮ್ಮೂರಾಗ ಖರ್ಚು ಮಾಡ್ತೀವಿ. ನಮ್ಮೂರು ಅಂಗಡಿವಳಾಗ ಎಲ್ಲಾ ರೋಖಡಿ ವ್ಯವಹಾರ ಮಾಡ್ತೀವಿ. ಸಾಲದ ಬಾಬತ್ತೇ ಇಲ್ಲ. ಒಂದು ವೇಳೆ ಬೇರೆವೂರಲ್ಲೇ ನಾವು ವ್ಯವಹಾರ ಮಾಡಿದ್ರೆ ನಮ್ಮೂರ ರೇಷನ್ ಅಂಗಡಿ, ಚಾದಂಗಡಿ, ಹೆಂಡದಂಗಡಿಗಳ ಗತಿ ಏನಾಗಬಹುದು? ಎಲ್ಲಾ ಕದ ಮುಚ್ಚಿ ಹೋಗ್ತಾವು. ಕೂಲಿಕಾರರಿಗೆ ಊರು ಅಭಿಮಾನ ಇಲ್ಲ ಅಂತೀರಿ. ಜಾತ್ರೆ ಆದ್ರ ಊರು ತೇರು ಎಳೆಯೋದು ನಾವೇ. ಊರಿಗೆ ಸಂಬಂಧಪಟ್ಟ ಕೆಲಸ ಯಾವುದು ಮಾಡಿಲ್ಲ. ಹಂಗ ಕಂಡೀಷನ್ ಮಾಡೋದಾದ್ರೆ ನಮ್ಮದೂ ಒಂದು ಕಂಡಿಷನ್ ಐತೆ. ಏನಪಾ ಅಂದ್ರೆ ನಾಳೆಯಿಂದ ನಾವು ಬೇರೆವೂರಿಗೆ ಹೋಗಲ್ಲ, ಇಲ್ಲೇ ದುಡಿತೀವಿ. ಆದ್ರ ನಮ್ಮ ಧಣಿಗಳು ತಮ್ಮ ಹೊಲದಾಗ ಅಂದ್ರೆ ಸಿರಿಗೇರಿ ಊರಿಗೆ ಸಂಬಂಧಪಟ್ಟ ಭೂಮಿ ಮೇಲೆ ಇರೋ ತಮ್ಮ ಹೊಲದಾಗ ಬೆಳೆದ ಬೆಳೆ ಬೇರೆವೂರಲ್ಲಿ ಮಾರಬಾರದು. ಎಲ್ಲಾ ಇಲ್ಲಿ ಜನಕ್ಕೆ ಮಾರಬೇಕು. ನೀವು ಹಣ ಗಳಿಸಿದ್ದು ನಮ್ಮೂರಿಂದಲ್ಲೇ ಹಣವನ್ನು ಇಲ್ಲೇ ಖರ್ಚು ಮಾಡಬೇಕು. ಇದು ಸಾಧ್ಯವೇ? ಊರು ಅಭಿಮಾನ, ತಾಲೂಕು ಅಭಿಮಾನ, ಜಿಲ್ಲಾ ಅಭಿಮಾನ ಇರಬೇಕು. ನಮ್ಮೂರಾಗ ದೊಡ್ಡ ದೊಡ್ಡ ಲೀಡ್ರು ಆದಿರಿ. ಪ್ರತಿವರ್ಷ ದೀಪಾವಳಿ ಮುಗುದು ಕೂಡ್ಲೆ 20 ರಿಂದ 25 ಸಾವಿರ ಜನ ಕೂಲಿ ಆಳುವಗಳು ಬಳ್ಳಾರಿಬಿಟ್ಟು ಬೇರೆ ಸೀಮೆಗೆ ದುಡಿಲಕ್ಕೆ ಹೋಗ್ತಾರೆ. 25 ಸಾವಿರ ಶ್ರಮ ಶಕ್ತಿ ನಮ್ಮ ಜಿಲ್ಲೆ ಬಿಟ್ಟು ಹೋದಾಗ ದುಡಿತದ

→



ಭುಗಿಲೇಳುವ ಮುನ್ನ ಒಂದಾದ ಕೂಲಿಕಾರರು

ಸ್ವಯಂ ಸೇವೆ: ಸಂಘ ಪರಿವಾರದ ಪರಿ

ಹಿಂದೂ ಸಂಸ್ಕೃತಿ 'ಆರ್ಹ ಸಂಸ್ಕೃತಿ', 'ಶ್ರೇಷ್ಠ ಸಂಸ್ಕೃತಿ' ಎಂದೆಲ್ಲಾ ಬೊಬ್ಬಿಡುವ ರಾ.ಸ್ವ.ಸೇ. ಸಂಘದವರ ನಿಜ ಸ್ವರೂಪವನ್ನರಿಯಲು ಕೊಡಗಿನ ವಿರಾಜಪೇಟೆ ಸಮೀಪದ ಪೆರುಂಬಾಡಿಯಲ್ಲಿ ಈ ಮಂದಿಯ ವರ್ತನೆ ಗಮನಿಸಿದರೆ ನಿಜ ಮುಖ ತಿಳಿಯುತ್ತದೆ.

ಇಲ್ಲಿಯ ರಾ.ಸ್ವ.ಸೇ.ಸಂಘದ ಮುಖಂಡ ಮತ್ತು ಬೇಟೋಳಿ ಪಂಚಾಯತ್ ಉಪಾಧ್ಯಕ್ಷ ಶ್ರೀ ಗಣೇಶ್ ಎಂಬುವವನ ನೇತೃತ್ವದ ರೌಡಿ ಕೂಟ ಈ ಪ್ರದೇಶದಲ್ಲಿ ಕೀಚಕನಂತೆ ವರ್ತಿಸುತ್ತಿದೆ.

ತಾ. 14.10.2000 ದಂದು ಈ ಪ್ರದೇಶದಲ್ಲಿ ವಾಸಿಸುವ 45 ವರ್ಷದ ಬಿ.ಪಾಪು ಎನ್ನುವವರು ಮಾರಕಾಯುಧಗಳಿಂದ ಹಲ್ಲೆಗಳಿಗೊಳಗಾಗಿ ಗಂಭೀರ ಸ್ಥಿತಿಯಲ್ಲಿ ವಿರಾಜಪೇಟೆ ಆಸ್ಪತ್ರೆಯಲ್ಲಿ ದಾಖಲಾದರು. ಈಕೆಯ ಮೇಲೆ ಹಲ್ಲೆ ನಡೆಸಿದವರು ಮತ್ತು ಕಾರಣ ಆಕೆಯೇ ಇತ್ತ ಹೇಳಿಕೆಯಲ್ಲಿ ಈ ರೀತಿ ಇದೆ.

"ನಾನು ಮೇಲ್ಕಂಡ ವಿಳಾಸದಲ್ಲಿ ನನ್ನ ಮಕ್ಕಳೊಂದಿಗೆ ವಾಸವಾಗಿರುತ್ತೇನೆ. ಸುಮಾರು ಎರಡು ವಾರದ ಹಿಂದೆ ಪೆರುಂಬಾಡಿಯಲ್ಲಿ ವಾಸವಿರುವ ಕಿರಣ್ ಎಂಬುವವರು ನನ್ನ ಜೊತೆಯಲ್ಲಿ ಬೇಡದ ರೀತಿಯಲ್ಲಿ ನಡೆದುಕೊಂಡನು. ಆಗ ನಾನು ಅವನಿಗೆ ನಾನು ನಿನ್ನ ತಾಯಿಗೆ ಸಮಾನ ಎಂದು ಹೇಳಿದ್ದೆ. ನಂತರ ನಾನು ಒಂದು ವಾರ ಕಳೆದು ಈ ವಿಷಯವನ್ನು ಅಲ್ಲಿರುವ ಅಂಗನವಾಡಿ ಟೀಚರ್‌ಗೆ ಹೇಳಿದ್ದೆನು. ಈ ಕಾರಣಕ್ಕಾಗಿ ಈ ದಿವಸ ದಿನಾಂಕ 14.10.2000 ರಂದು ಕಿರಣ್ ಮತ್ತು ಅವನ ಅಣ್ಣ ಸುಮಾರು 5.30 ರ ವೇಳೆಗೆ ನನ್ನ ಮನೆಗೆ ಬಂದು ನನ್ನ ಮನೆಯ ಬಾಗಿಲನ್ನು ತಟ್ಟಿದರು. ನಾನು ಬಾಗಿಲನು ತೆರೆದೆನು. ಅಷ್ಟರಲ್ಲಿ ಕಿರಣ್ ಎಂಬುವನು ತನ್ನ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಏಕಾಏಕಿ ಮನೆ ಒಳಗೆ ಪ್ರವೇಶ ಮಾಡಿ ದೊಣ್ಣೆಯಿಂದ ತಲೆಯ ಹಿಂಭಾಗಕ್ಕೆ, ಎಡಕ್ಕೆ, ಮೇಲ್ಭಾಗದ ಹಸ್ತಕ್ಕೆ ಹೊಡೆದಾಗ ಬೆರಳುಗಳಿಗೆ ಗಾಯವಾಗಿರುತ್ತದೆ. ಅಷ್ಟರಲ್ಲಿ ತಡೆಯಲು ಬಂದ ರಾಬಿಯ ಎಂಬುವವರಿಗೂ ದೊಣ್ಣೆಯಿಂದ ತಲೆಗೆ ಹೊಡೆದು ನೋವು ಮಾಡಿದ. ನಾವು ಬೊಬ್ಬೆ ಹಾಕಿಕೊಂಡಾಗ ಅವನು ದೊಣ್ಣೆಯನ್ನು ಮನೆಯ ಜಗಲಿಯಲ್ಲಿ ಎಸೆದು ಆತನ ಅಣ್ಣ ಉದಯನೊಂದಿಗೆ ಹೊರಟು ಹೋದನು. ಉದಯನು ಮನೆ ಹೊರಗೆ ಬಾಗಿಲ ಬಳಿ ನಿಂತುಕೊಂಡು ಕಿರಣ್ ಅವರಿಗೆ ಚೆನ್ನಾಗಿ ಹೊಡೆ ಎಂದು ಹೇಳುತ್ತಿದ್ದನು. ಅಷ್ಟರಲ್ಲಿ ಅಲ್ಲಿಗೆ ಹಸೆನಾರ್ ಎಂಬುವರು ಬಂದರು. ಅವರಿಗೆ ನಡೆದ ವಿಷಯವನ್ನು ತಿಳಿಸಿದೆ. ನಂತರ ಅಲ್ಲಿಗಾಗಿ ಬರುತ್ತಿದ್ದ ಜೀಪಿನಲ್ಲಿದ್ದ ನಾನು ಮತ್ತು ನನ್ನ ಮಗಳು ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಬಗ್ಗೆ ದಾಖಲಾಗಿರುತ್ತೇನೆ. ನನ್ನ ಮಗಳು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾಳೆ.

ಆದುದರಿಂದ ವಿನಾಕಾರಣ ಮನೆಗೆ ಅಕ್ರಮ ಪ್ರವೇಶ ಮಾಡಿ ದೊಣ್ಣೆಯಿಂದ ನನಗೆ ಮತ್ತು ನನ್ನ ಮಗಳಿಗೆ ಹೊಡೆದು ಗಾಯ ಪಡಿಸಿದ ಕಿರಣ್ ಮತ್ತು ಹೊಡೆಯಲು ಪ್ರಚೋದನೆ ನೀಡಿದ ಉದಯರವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕಾಗಿ ತಮ್ಮಲ್ಲಿ ಈ ಮೂಲಕ ವಿನಂತಿ....

ದೇಶದ ತುಂಬೆಲ್ಲಾ ಸಂಸ್ಕೃತಿ, ದೇಶಪ್ರೇಮ, ಜನಸೇವೆ, ಪರಂಪರೆಯ ಬಗ್ಗೆ ದೊಡ್ಡದಾಗಿ ಬೊಬ್ಬೆ ಹೊಡೆಯುವ ಸಂಘ ಪರಿವಾರದ ನಿಜ ಸಂಸ್ಕೃತಿ ಏನು ಎಂಬ ಬಗ್ಗೆ ಪ್ರಾಯೋಗಿಕ ಅನುಭವ ಇಲ್ಲಿದೆ. ಕೊಡಗಿನಲ್ಲಿ ಬಿಜೆಪಿ-ಸಂಘ ಪರಿವಾರವೂ ಸಹ ಭ್ರಷ್ಟತೆ, ಸಾರಾಯಿ ಲಿಕ್ಕರ್ ವ್ಯವಹಾರದಲ್ಲಿ ಪರ-ವಿರೋಧವಾಗಿ ಒಡೆದಿರುವುದನ್ನು ಮತ್ತೆ ಮತ್ತೆ ಈ ಗುಂಪುಗಳ ನಡುವೆ ಘರ್ಷಣೆಗಳು ಮರುಕಳಿಸುತ್ತಿರುವುದನ್ನು ನೆನಪಿಸಿಕೊಳ್ಳಬಹುದು.

ಈ ಆರೋಪಿಗಳು ಈ ರೌಡಿ ಗಣೇಶನ ಕುಲದವರಾಗಿದ್ದಾರೆ.

2. ಇದೇ ಗ್ರಾಮದ ಇನ್ನೋರ್ವ ಮಹಿಳೆ ಶ್ರೀಮತಿ ಕಬ್ಬಚ್ಚೀರ ಡೈಸಿ ಪೂವಯ್ಯನವರು ಈ ರೀತಿ ಆಪಾದಿಸಿದ್ದಾರೆ.

"ಅರ್ಬಿ ಗ್ರಾಮದ ಪೆರುಂಬಾಡಿ ವಿದ್ಯುತ್ತೀಕರಣಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ವಿದ್ಯುತ್ ಸರಬರಾಜು ಮಂಜೂರಾಗಿದ್ದು, ಇದರ ಗುತ್ತಿಗೆಯನ್ನು ಅಲೆಕ್ಸ್ ಎಂಬ ವಿರಾಜಪೇಟೆಯ ವ್ಯಕ್ತಿಯು ವಹಿಸಿಕೊಂಡಿರುತ್ತಾನೆ. ಈತನು ಸದರಿ ಗುತ್ತಿಗೆಯನ್ನು ಬೇಟೋಳಿ ಮಂಡಲ ಪಂಚಾಯ್ತಿಯ ಹಾಲಿ ಉಪಾಧ್ಯಕ್ಷರಾದ ಶ್ರೀ ಗಣೇಶ ಎಂಬಾತನಿಗೆ ನೀಡಿರುತ್ತಾನೆ. ಪೆರುಂಬಾಡಿಯಲ್ಲಿ 28(ಇಪ್ಪತ್ತೆಂಟು) ಎಕ್ರೆ ಪೈಸಾರಿ ಜಾಗವಿದ್ದು, ಇದನ್ನು ಈ ಹಿಂದೆ ಭಾರತ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮತ್ತು ಕೊಡಗು ಜಿಲ್ಲಾ ಪರಿಷತ್ ಜಂಟಿಯಾಗಿ ಒಂದು ಜಂಗಲ್ ರಿಸಾರ್ಟ್ ಅನ್ನು ಉದ್ಘಾಟನೆ ಮಾಡಲಾಯಿತು. ವಿದ್ಯುತ್ ಸಂಪರ್ಕ ಹೊಂದಿದ್ದ ಜಂಗಲ್ ರಿಸಾರ್ಟ್ ಕಾರಣಾಂತರದಿಂದ 6-7 ತಿಂಗಳಲ್ಲಿ ಮುಚ್ಚಲಾಯ್ತು. ಸದರಿ ಇಲಾಖೆಯವರ ಬೇಜವಾಬ್ದಾರಿಯಿಂದ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್ ಮುಂತಾ



ದವುಗಳನ್ನು ಅಲ್ಲೇ ಬಿಟ್ಟು ಹೋಗಲಾಯಿತು.

ಕರ್ನಾಟಕ ರಾಜ್ಯ ಗ್ರಾಮ ವಿದ್ಯುತ್ತೀಕರಣ ಯೋಜನೆಯಡಿ ಪೆರುಂಬಾಡಿಗೆ ವಿದ್ಯುತ್ ಸರಬರಾಜು ಮಂಜೂರಾದದ್ದನ್ನು ಖಚಿತಪಡಿಸಿದ ಗ್ರಾಮ ಪಂಚಾಯ್ತಿಯ ಹಾಲಿ ಉಪಾಧ್ಯಕ್ಷ ಮತ್ತು ಕಂಟ್ರಾಕ್ಟುದಾರನಾದ ಶ್ರೀ ಗಣೇಶನು ತನಗೆ ಸಾವಿರಾರು ರೂಪಾಯಿಯ ಹಣ ಖರ್ಚು ಆಗಿರುವುದರಿಂದ ಗ್ರಾಮಸ್ಥರಲ್ಲಿ ತನಗೆ ತಗಲುವ ಖರ್ಚಿನ ಒಂದು ದೊಡ್ಡ ಪಟ್ಟಿಯನ್ನೇ ಬಿಡುಗಡೆ ಮಾಡಿದನು. ಅದರಂತೆ

ಜಂಗಲ್ ಕ್ಯಾಂಪಿನಿಂದ ಕಂಬ ಕೀಳಲು	*ರೂ. 250 (ಪ್ರತಿ ಮನೆಯವರು)*
ಕಿತ್ತ ಕಂಬಗಳನ್ನು ಮತ್ತೊಂದು ಜಾಗದಲ್ಲಿ ಸ್ಥಾಪಿಸಲು	*ರೂ 600*
ನೊಂದಣಿ ಮಾಡಲು	*ರೂ. 200*
ವಿದ್ಯುತ್ ಲೈನ್ ಎಳೆಯಲು ಮಾತ್ರ	*ರೂ. 3000*
ಮೀಟರ್ ಅಳವಡಿಸಲು	*ಹೇಳಿಲ್ಲ*
ಸೇವಾ ಶುಲ್ಕ	*ಕೊನೆಗೆಹೇಳಲಾಗುವುದು*

ಪೆರುಂಬಾಡಿ ಗ್ರಾಮ ವಿದ್ಯುತೀಕರಣಕ್ಕೆ ರಾಜ್ಯ ಸರ್ಕಾರದಿಂದ ರೂ. 5,07,309-00 ಬಿಡುಗಡೆಯಾಗಿರುತ್ತದೆ ಎಂಬುದು ಇಲ್ಲಿ ಸ್ಮರಿಸಬೇಕಾಗಿದೆ. ಆರ್ಥಿಕವಾಗಿ ದುರ್ಬಲರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕೆಲ ಗ್ರಾಮಸ್ಥರು ಪ್ರತಿಭಟಿಸಲು ಮುಂದಾದಾಗ ಅಧಿಕಾರದ ಬಲವನ್ನು ಉಪಯೋಗಿಸಿಕೊಂಡು ಗೂಂಡಾಗಿರಿಯಲ್ಲಿ ಊರಿನ ಜನತೆಯನ್ನು ಬಗ್ಗು ಬಡಿಯಲು ಬಂದ ಉದಾಹರಣೆಗಳು ಹಲವಾರು ಇದೆ: ಅದರಲ್ಲಿ ವಿರಾಜಪೇಟೆಯ ಪೀಟರ್ ಲೋಬೋ ಮತ್ತು ಸಂಗಡಿಗರ ಮೇಲೆ ನಡೆಸಿದ ಹಲ್ಲೆ.

ಪೆರುಂಬಾಡಿಯ ಯಾವ ನಿವಾಸಿಯೇ ಆಗಲಿ ಶ್ರೀಯುತರಿಂದಲೇ ಸಂಬಂಧಪಟ್ಟ ಕೆಲಸವನ್ನು ಮಾಡಬೇಕು. ಇದು ಹಾಲಿ ಉಪಾಧ್ಯಕ್ಷರು ವಿಧಿಸಿದ ಮುನ್ನೆಚ್ಚರಿಕೆ. ತನ್ನ ಕಟ್ಟಪ್ಪಣೆಯ ಉಲ್ಲಂಘನೆಯಾದರೆ ತಕ್ಕ ಶಿಕ್ಷೆಯಾಗುತ್ತದೆ. ಅದು ಅನುಭವಿಸಲೇಬೇಕಾಗುತ್ತದೆ. ಈತನು ಜಂಗಲ್ ಕ್ಯಾಂಪ್‌ನಿಂದ ವಿದ್ಯುತ್ ಕಂಬಗಳನ್ನು ಮಾರಾಟ ಮಾಡಿರುವುದಾಗಿ ಕೇಳಿ ಬರುತ್ತಿದೆ.

ಜಾತಿ, ಮತ, ಬೇಧ ಭಾವವಿಲ್ಲದೆ ಪೆರುಂಬಾಡಿಯ ಜನತೆಯು ತನ್ನನ್ನು ತನ್ನ ಪ್ರತಿನಿಧಿಯಾಗಿ ಆಯ್ಕೆ ಮಾಡಿರುತ್ತಾರೆ. ಎಂಬುದನ್ನು ಮರೆತು ಗೂಂಡಾಗಿರಿ ಮತ್ತು ಜಾತಿಯ ವೈಷಮ್ಯವನ್ನು ಭಿತ್ತಿ ಪರಸ್ಪರ ಹೊಡೆದಾಡುವಂತೆ ಪ್ರಚೋದನೆ ಮಾಡುತ್ತಿರುವ ಈ ಸಮಾಜಘಾತುಕನನ್ನು ನಾವು ನಮ್ಮ ಜನ ಪ್ರತಿನಿಧಿಯಾಗಿ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ಎಸಗಿದ ಘೋರ ಅಪರಾಧವಾಗಿದೆ. ಆದರೆ ಇವೆಲ್ಲವೂ ಇಲ್ಲಿನ ಪೋಲೀಸರ ಬೆಂಗಾವಲಿನಿಂದಲೇ ನಡೆಯುವುದು ಎಂದು ತಿಳಿದುಕೊಳ್ಳಬೇಕಾಗಿದೆ.

ಶ್ರೀಮತಿಯವರ ಆಪಾದನೆಯನ್ನು ವಿಚಾರಿಸಲು ಬಂದ 'ವಿದ್ಯುತ್ ಖಾತೆ' ಯ ಮೇಲಧಿಕಾರಿಗಳಿಗೆ ಸಾಕ್ಷಿ ನೀಡಲು ಹೋಗುತ್ತಿದ್ದ ಶ್ರೀಮತಿ ಪೂವಯ್ಯನವರ ಮೇಲೆ ಇದೇ ಗಣೇಶ ಹಲ್ಲೆ ನಡೆಸಿ ಗಾಯಗೊಳಿಸಿದ್ದಾನೆ.

ಈ ಬಗ್ಗೆ ಪುಕಾರು ನೀಡಿದ್ದಲ್ಲದೆ ಪೋಲೀಸ್ ಕಚೇರಿಯೆದುರು ಸಿಪಿಐ(ಎಂ), ಡಿವೈಎಫ್‌ಐ ಪ್ರತಿಭಟನೆ ನಡೆಸಿರುವುದರಿಂದ ಪೋಲೀಸರು ಅನಿವಾರ್ಯವಾಗಿ ಅವರನ್ನು ಬಂಧಿಸ ಬೇಕಾಯಿತು. ಮೊದಮೊದಲು ದೂರನ್ನು ನಿರಾಕರಿಸುತ್ತಿದ್ದ ಎಸ್.ಪಿ. ವಿಚಾರಣೆ ನಂತರ ಒಪ್ಪಬೇಕಾಯಿತು.

ಈವರೆಗೂ ರೌಡಿಗಳಿಗೆ ರಕ್ಷಣೆ ನೀಡಿದ್ದ ಪೋಲೀಸರು ಜನರೋಷದೆದುರು ಬಗ್ಗಬೇಕಾಯಿತು.

ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಾಯಕರ ಸಂಸ್ಕೃತಿಯ ವೈಖರಿ

- ಚಿಂತಾ

→ ಕೂಲಿ ರಾಜಕೀಯ

ಅಷ್ಟೆಲ್ಲ ಈ ಭೂಮಂಡಲದೊಳಗೆ ನಮ್ಮ ಜಿಲ್ಲೆ ಉಕ್ಕು ಉತ್ಪಾದನಾ ಕ್ಷೇತ್ರದೊಳಗೆ ವಿಶಿಷ್ಟ ಸ್ಥಾನ ಪಡುಕೊಂಡಿದೆ. ಪ್ರತಿವರ್ಷ ಕಬ್ಬಿಣದ ಅದಿರು 2.25 ರಿಂದ 4.58 ದಶಲಕ್ಷ ಟನ್ ಮತ್ತು ಮ್ಯಾಂಗನೀಸ್ 13 ರಿಂದ 32 ದ.ಲ ಟನ್ ಉತ್ಪಾದನೆ ಆಗುತ್ತದೆ. ಇದರೊಳಗೆ ಮುಕ್ಕಾಲು ಭಾಗ ಹೊರಗೆ ಹೋಗುತ್ತದೆ. ಜಿಲ್ಲಾ ಅಭಿಮಾನ ಇರುವವರು ಇದನ್ನು ಯಾಕೆ ತಡೆಗಟ್ಟಬಾರದು? ಇದರಲ್ಲಿ ಜಿಲ್ಲಾ ಅಭಿವೃದ್ಧಿ ಅಡಗಿಲ್ಲವೇ? ನಮ್ಮ ಜಿಲ್ಲಾ ಆಡಳಿತ, ಎಂ.ಪಿ., ಎಂ.ಎಲ್.ಎ. ಗಳು ಏನು ಕ್ರಮ ತಗೊಂಡಿದ್ದಾರೆ? ನಮ ಕೂಲಿಗೂ, ನೀವು ಬೆಳೆ ಮಾರೊದಕ್ಕೂ ಊರು ಅಭಿಮಾನಕ್ಕೂ ಏನು ಸಂಬಂಧ ಇಲ್ಲ, ಸುಮ್ಮಸುಮ್ಮನೆ ನಮ್ಮ ದಾರಿಗೆ ಅಡ್ಡ ಯಾಕೆ ಬರ್‍ತೀರಿ? ಕೂಲಿಕಾರರ ಪ್ರತಿವಾದ. ಕೆಲವು ಸಣ್ಣಪುಟ್ಟ ವ್ಯಾಪಾರಸ್ತರು "ಸಂಘದವರು ಹೇಳೋದು ಸರಿ ದುಗ್ಗಾಣಿ ಕೂಲಿ ಕೊಟ್ಬಾಗ ಬಡಜನ ಜೀವನ ಮಾಡೋದು ಕಷ್ಟ" ಎಂದು ನಿಮ್ಮ ಹೋರಾಟಕ್ಕೆ ನಮ್ಮ ಸಪೋರ್ಟು ಇತ್ರಿಪ್ಪ ಎಂದು ಹೇಳಿಹೋದರು. ಸಿಟ್ಟನ್ನು ಒಟ್ಟು ಮಾಡಿದ ಜನಕ್ಕೆ ತಮ್ಮ ಬಲ ಕುಸಿದಂತೇ ಕಂಡು ಕೋಪ ವಿಕೋಪಕ್ಕೆ ತಿರುಗಿತು. ಕೊನೆಗೆ ಪೋಲೀಸರನ್ನು ಛೂ ಬಿಟ್ಟರು.

ಧಣಿಗಳ ರಕ್ಷಣೆಯಲ್ಲೇ ಸುಖ ಕಂಡ ಲಾಠಿ ಬೂಟುಗಳಿಗೆ ಎಲ್ಲಿಲ್ಲದ ಶ್ರದ್ಧೆ ಬಂದು, ಶಿಸ್ತಿನ ಸಿಪಾಯಿಗಳಂತೆ ಬೆಳಿಗ್ಗೆ 6 ಗಂಟೆಗೆ ಠೀಕಾಗಿ ಊರ ಹೆದ್ದಾರಿಗೆ ಬಂದು, ಕೂಲಿಕಾರರನ್ನು ಹೇರಿಕೊಂಡು ಹೋಗುತ್ತಿದ್ದ 20ಟ್ರಾಕ್ಟರುಗಳನ್ನು ತರಬಿ, ಡ್ರೈವರುಗಳನ್ನು ಕೆಳಗಿಳಿಸಿ, ಟ್ರಾಕ್ಟರ್ ಕೀಗಳನ್ನು ಕಸಿದು ಕೊಂಡು, ಡ್ರೈವರ್ ಲೈಸೆನ್ಸ್ ಎಲ್ಲಿ? ಏನೆಲ್ಲಾ ತಕರಾರುಗಳನ್ನು ಹುಡುಕಿ 'ಊರು ಧಣಿಗಳ ಹುಕುಂ ಆಗಿದೆ. ನೀವು ಇನ್ನ ಮೇಲೆ ಟ್ರಾಕ್ಟರ್ ತರಬಾರದು. ಕೂಲಿಕಾರರನ್ನು ಕರೆದೊಯ್ಯಬಾರುದು" ಎಂದು ತಮ್ಮ ಹುಕುಂನ್ನೂ ಚಲಾಯಿಸಿದರು. ಸುಳ್ಳು ಕೇಸುಗಳನ್ನು ದಾಖಲಿಸಲೂ ಮುಂದಾದರು. ಅಷ್ಟರಲ್ಲೇ ಕೂಲಿಕಾರರು ಸಂಘದ ಅಧ್ಯಕ್ಷ ಎನ್.ಕುಮಾರ್‌ರವರಿಗೆ ಸುದ್ದಿ ಕಳಿಸಿದರು. ಸಂಘದ ಅಧ್ಯಕ್ಷರಿಗೂ ಪೋಲೀಸ್‌ನವರಿಗೂ ಮಾತಿನ ಚಕಮಕಿ ನಡೆಯಿತು. ಏನೂ ಫಲಿಸಲಿಲ್ಲ. ಟ್ರಾಕ್ಟರನ್ನ ಕೂತಿದ್ದ ಎಲ್ಲಾ ಕೂಲಿಕಾರರನ್ನು ಕೆಳಗಿಳಿಸಿ ಸಭೆ ನಡೆಸಲಾಯ್ತು. "ಸರಕಾರವೇ 51.70 ರೂ. ಕೃಷಿ ಕೂಲಿಗೆ ತಾರಕಿಗೆ ಕೂಲಿಯನ್ನು ನಿಗದಿಗೊಳಿಸಿದೆ. ಈ ಕಾನೂನನ್ನು ಉಲ್ಲಂಘನೆ ಮಾಡುವವರಿಗೆ ಕಾನೂನು ಕ್ರಮ ಕೈಗೊಳ್ಳಲಿ" "ನಮ್ಮ ಮೇಲೆ ಯಾರು ದೂರು ಕೊಟ್ಟಿದ್ದಾರೋ ಅವರು ಬರಲಿ' ಎಂಬ ಬೇಡಿಕೆಗಳನ್ನಿಟ್ಟು ಪೋಲೀಸ್ ಠಾಣೆಯ ಮುಂದೆ ಧರಣಿ ನಡೆಸಲು ತೀರ್ಮಾನಿಸಲಾಯ್ತು. ಠಾಣೆಯ ಮುಂದೆ ಮುನ್ನೂರಕ್ಕೂ ಹೆಚ್ಚು ಕೂಲಿಕಾರರು ಭಾಗವಹಿಸಿದರು. ಇದೇ ಸಮಯ ನೋಡಿ ಸಿರಿಗೇರಿ ಹಮಾಲಿ ಸಂಘದವರೂ ಬೆಂಬಲಕ್ಕೆ ನಿಂತರು(ಅವರೂ ಹಿಂದೊಮ್ಮೆ ಹಮಾಲಿ ರೇಟಿಗೆ ಹೋರಾಡಲು ಹೋಗಿ ಕೈಸುಟ್ಟುಕೊಂಡಿದ್ದರು. ನಮ್ಮ ಬೆಂಬಲ ನಿಮಗೆ, ನಿಮ್ಮ ಬೆಂಬಲ ನಮಗೆ" ಎಂದು ಲಾರಿಗೆ ಲೋಡು ಮಾಡುವುದನ್ನು ನಿಲ್ಲಿಸಿ ಧರಣಿಯ ಗುಂಪಿನಲ್ಲಿ ಸೇರಿದರು. ಧರಣಿಯು ಕಾವು ಪಡೆಯತೊಡಗಿತು. ಧರಣಿಯಲ್ಲಿ ಕೋಪಗೊಂಡ ದೇವದಾಸಿ ಮಹಿಳೆ ಶಾರದಮ್ಮ ಮಾತಿನ ಸಿಡಿಲನ್ನು ಸಿಡಿಸಿದಳು "ಸಾರು, ಇಲ್ಲಿ ನಮಗ ಕೊಡೊ ಕೂಲಿ ಸಾಲಂಗಿಲ್ಲ. ದುಗ್ಗಾಣಿ ಕೂಲಿ ಕಟ್ಕೊಂಡು ಏನಂತ ಕಾಪ್ರ ಮಾಡಬೇಕು. ಎಲ್ಲೊ ದುಡಕಂಡು ಹಂಗೋ ಜೀವ ಹಿಡಗಂತೀವೀ ಅಂದ್ರ ದುಡಿಯಾಕ ಹೋಗೋದು ಬ್ಯಾಡ ಅಂತೀರಲ್ಲ. ಏನ್ ಕಳ್ಳತನ ಮಾಡಬೇಕಾ. ಕೂಲಿ ಬಂದ್ ಕ್ಲೊಡ್ಲೆ ಮನ್ಯಾಗಿರೋ ಗಣಮಕ್ಕಳು ಕುಡಿಯಾಕ ಕೇಳ್ತಾರ, ಮಕ್ಕಳು ಹೊಟ್ಟಿಗೆ ಹಿಟ್ಟು ಕೇಳ್ತಾರ, ನೀವು ಕೂಲಿಗೆ ಬೇವೂರಿಗೆ ಹೋಗ್ಬಾಡ ಅಂದ್ರೆ ಹೊಟ್ಟೆಗೆ ಏನು ಮಾಡ್ಬೇಕು? ನಿಮ್ಮ ಪೋಲೀಸರಿಗೆ............. ಹಾಸಿ ಬದುಕಬೇಕಾ? ನಿಮಗ ತಾಕತ್ತಿದ್ರೆ ಹೆಂಡದಂಗಡಿ ನಮ್ಮೂರ್ರಾಗೆ ಬರಬಾರದಂತೆ ಮಾಡ್ರಿ. ಕೂಲಿ ಜಾಸ್ತಿ ಕೊಡಿಸಿರಿ...." ತಡತಡ ಗುಂಡು ಹಾರಿಸಿದಳು. ಸಬ್‌ಇನ್ಸ್‌ಪೆಕ್ಟರ್ ಖಾಕಿ ಒದ್ದೆಯಾಗಿ ಮುಖ ಬೆವರು ಒಡೆಯಿತು. ಎಲ್ಲಾ ಕೂಲಿಕಾರರು "ಯಾರ್ ಕಂಪ್ಲೆಂಟ್ ಕೊಟ್ಟಾರ ಅವರನ್ನು ಕರಸ್ರಿ" ಎಂದು ಜೋರು ಬಾಯಿ ಮಾಡಿದ ಮೇಲೆ ಏನೂ ತೋಚದ ಪೋಲೀಸ್ ಅಧಿಕಾರಿ ಡ್ರೈವರ್‌ಗಳಿಗೆ ಕೀ ಕೊಟ್ಟು 'ಹೋಗ್ರಪ್ಪ' ಅಂದ. ಧರಣಿ ಮುಕ್ತಾಯಗೊಂಡಿತು.

ಕನಿಷ್ಟ ವೇತನದಲ್ಲಿ ಕಡಿತ

ಹೋಟೆಲು ಕಾರ್ಮಿಕರ ಹೊಟ್ಟೆಗೆ ಬರೆ

ಹೋಟೆಲ್ ಕಾರ್ಮಿಕರ ಕನಿಷ್ಟ ಕೂಲಿ ಕಳೆದ 7 ವರ್ಷಗಳಿಂದ ಪುನರ್‌ವಿಮರ್ಶೆ ಯಾಗಿರುವುದಿಲ್ಲ. ಕನಿಷ್ಟ ಕೂಲಿ ಕಾಯಿದೆ ಪ್ರಕಾರ 2 ವರ್ಷಕ್ಕೊಮ್ಮೆ ಪುನರ್‌ವಿಮರ್ಶೆಯಾಗಬೇಕಿದ್ದ ಕನಿಷ್ಟ ಕೂಲಿಯನ್ನು ಪುನರ್ ವಿಮರ್ಶೆ ಮಾಡಲು ಸರ್ಕಾರ ಕ್ರಮ ವಹಿಸುತ್ತಿಲ್ಲ. ಮಾನ್ಯ ಸುಪ್ರೀಂಕೋರ್ಟ್‌ನ ಆದೇಶದ ಪ್ರಕಾರ 2 ವರ್ಷಕ್ಕೊಮ್ಮೆ ಎಲ್ಲಾ ಕಾರ್ಮಿಕರ ಕನಿಷ್ಟ ಕೂಲಿಯನ್ನು ಪುನರ್‌ವಿಮರ್ಶೆ ಮಾಡಬೇಕೆಂಬ ಆಜ್ಞೆಯಿದೆ.

1994 ರಲ್ಲಿ ರಾಜ್ಯ ಸರ್ಕಾರ ಹೋಟೆಲ್ ಕಾರ್ಮಿಕರ ಕನಿಷ್ಟ ವೇತನ ಪುನರ್ ವಿಮರ್ಶೆ ಮಾಡಿದಾಗ ಕಾರ್ಮಿಕರಿಗೆ ಊಟದ ಬಾಬ್ತಿಗೆ ಸಂಬಳದ ಶೇಕಡ 15 ರಷ್ಟು ಕಡಿತ ಮಾಡುವ ಸರ್ಕಾರದ ಆದೇಶದಿಂದ ಹಾಲಿ ಬರುವ ವೇತನವೇ ಕಡಿಮೆಯಾಗುವ ಪರಿಸ್ಥಿತಿ ಉಂಟಾಯಿತು. ಊಟದ ಬಾಬ್ತಿಗೆ ಕಾರ್ಮಿಕರ ಸಂಬಳದಲ್ಲೇ ಶೇಕಡವಾರು ಕಡಿತ ಮಾಡುವುದು ತೀರಾ ಅವೈಜ್ಞಾನಿಕ ಕ್ರಮವಾಗಿದೆ. ಹೋಟೆಲ್ ಕಾರ್ಮಿಕರಿಗೆ ಊಟದ ಬಾಬ್ತಿಗೆ ಒಟ್ಟು ಸಂಬಳದಲ್ಲಿ ಶೇಕಡವಾರು ಕಡಿತ ಮಾಡುವ ಅಧಿಸೂಚನೆ ಕರ್ನಾಟಕದಲ್ಲಿ ಬಿಟ್ಟರೆ ಬೇರೆ ಯಾವ ರಾಜ್ಯದಲ್ಲೂ ಇರುವುದಿಲ್ಲ. ಈ ಅಧಿಸೂಚನೆಯಿಂದ ಹಾಲಿ ರೂ. 90 ರೂ. ಕಡಿತ ಮಾಡುವುದರ ಬದಲಾಗಿ ರೂ. 300 ರಿಂದ 400 ರೂ. ವರೆಗೆ ಕಡಿತವಾಗುತ್ತಿದೆ.

ದೇಶದ ಸಂವಿಧಾನದ 43ನೇಕಲಂ ಪ್ರಕಾರ ದೇಶದ ಎಲ್ಲಾ ಪ್ರಜೆಗಳಗೆ ಕನಿಷ್ಟ ವೇತನ ಒದಗಿಸಬೇಕೆಂದು ಸ್ಪಷ್ಟ ನಿರ್ದೇಶನವಿದೆ. ಆದರೆ ರಾಜ್ಯ ಸರ್ಕಾರ ಈ ಹಾಲಿ ಇರುವ ಸಂಬಳವನ್ನು ಕಡಿತ ಮಾಡಲು ಹೊರಟಿದೆ. ಪುನರ್‌ವಿಮರ್ಶೆ ಬಗ್ಗೆ ಹೊಸ ಕರಡು ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಜೂನ್ 1999 ರಲ್ಲಿ ಪ್ರಕಟಿಸಿತು. ಈ ಪ್ರಸ್ತಾವನೆಯನ್ನು ಪ್ರಕಟಿಸಿದ ಎರಡು ತಿಂಗಳ ಒಳಗೆ ಹೋಟೆಲ್ ಕಾರ್ಮಿಕರ ಕನಿಷ್ಟ ವೇತನ ಪುನರ್ ವಿಮರ್ಶೆ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು ಎಂದು ಈ ಕರಡು ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಈ ಕರಡು ಪ್ರಸ್ತಾವನೆಗೆ ಆಕ್ಷೇಪಣೆಯನ್ನು ಹೋಟೆಲ್ ಕಾರ್ಮಿಕರ ಸಂಘ ದಿ. 30.7.1999 ರಂದು ಸರ್ಕಾರಕ್ಕೆ ಸಲ್ಲಿಸಿದೆ. ಈ ಕರಡು ಪ್ರಸ್ತಾವನೆಯಲ್ಲಿ ಹೋಟೆಲ್ ಕಾರ್ಮಿಕರಿಗೆ ಪ್ರಕಟಿಸಿರುವ ಹೊಸ ಕನಿಷ್ಟ ವೇತನ ಕೆಲವು ಹುದ್ದೆಗಳಿಗೆ ಹಾಲಿ ಇರುವ ವೇತನಕ್ಕಿಂತ ತಿಂಗಳಿಗೆ ರೂ. 10 ರಷ್ಟು ಮಾತ್ರ ಹೆಚ್ಚಳವಿದೆ. ಕೆಲವು ಹುದ್ದೆಗಳಿಗೆ ಈ ಪ್ರಸ್ತಾವನೆಯಲ್ಲಿ ಸೂಚಿಸಿರುವ ವೇತನ ಹಾಲಿ ಇರುವ ವೇತನಕ್ಕಿಂತ

ದೇಶದ ಸಂವಿಧಾನದ 43ನೇಕಲಂ ಪ್ರಕಾರ ದೇಶದ ಎಲ್ಲಾ ಪ್ರಜೆಗಳಗೆ ಕನಿಷ್ಟ ವೇತನ ಒದಗಿಸಬೇಕೆಂದು ಸ್ಪಷ್ಟ ನಿರ್ದೇಶನವಿದೆ. ಆದರೆ ರಾಜ್ಯ ಸರ್ಕಾರ ಈ ಹಾಲಿ ಇರುವ ಸಂಬಳವನ್ನು ಕಡಿತ ಮಾಡಲು ಹೊರಟಿದೆ. ಕನಿಷ್ಟ ವೇತನವೆಂಬುದು ನಿಗದಿಯಾಗಿದ್ದರೂ ಅದು ಜಾರಿಯಾಗದೇ ಪುಸ್ತಕಗಳಲ್ಲಿ ಅಚ್ಚುಕಟ್ಟಾಗಿ ಕುಳಿತಿದೆ. ಇಷ್ಟು ಸಾಲದು ಎಂಬಂತೆ ಹೋಟೇಲು ಕೆಲಸಗಾರರು ಹೋಟೆಲ್‌ನಲ್ಲಿ ಊಟ ಮಾಡುತ್ತಾರೆಂದು ಅದಕ್ಕಾಗಿ ವೇತನದಲ್ಲಿ ಶೇ 15 ರಷ್ಟು ಕಡಿತ ಮಾಡಲು ಆದೇಶಿಸಿದೆ. ಅತ್ಯಂತ ಅಸಹನೀಯ ಸ್ಥಿತಿಯಲ್ಲಿ ಅವಿರತವಾಗಿ ದುಡಿಯುವ ಕೆಲಸಗಾರರ ಹೊಟ್ಟೆಗೆ ಎಳೆದ ಬರೆ ಇದು. ಈ ತಾರತಮ್ಯದ ವಿರುದ್ಧದ ಪ್ರತಿಭಟನೆ ಕೂಗು ಎದ್ದಿದೆ.

ಕಡಿಮೆ ಇರುತ್ತದೆ. ಈವರೆಗೂ ಈ ಕರಡು ಪ್ರಸ್ತಾವನೆಯ ಪರಿಶೀಲನೆಗಾಗಿ ಕನಿಷ್ಟ ವೇತನ ಸಲಹಾ ಸಮಿತಿಯ ಮುಂದೆ ಬಂದಿರುವುದಿಲ್ಲ. ಈ ಕರಡು ಪ್ರಸ್ತಾವನೆಯಲ್ಲೂ ಸಹಾ ಕಾರ್ಮಿಕರ ಊಟದ ಬಾಬ್ತಿಗೆ ಒಟ್ಟು ಸಂಬಳದಲ್ಲಿ ಶೇ 15 ರಷ್ಟು ಕಡಿತ ಮಾಡುವ ಸೂಚನೆ ಇರುತ್ತದೆ.

ರಾಜ್ಯ ಸರ್ಕಾರ ಹೋಟೆಲ್ ಕಾರ್ಮಿಕರಿಗೆ ನಿಗದಿ ಪಡಿಸಿರುವ ಕನಿಷ್ಟ ವೇತನ ಬಹುಪಾಲು ಹೋಟೆಲ್‌ಗಳಲ್ಲಿ ಜಾರಿಯಲ್ಲಿ ಇರುವುದಿಲ್ಲ. ಸರ್ಕಾರದ ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು ಕನಿಷ್ಟ ವೇತನ ಜಾರಿಗಾಗಿ ಸೂಕ್ತ ಕ್ರಮ ತೆಗದುಕೊಳ್ಳುತ್ತಿಲ್ಲ. ಸರ್ಕಾರವೇ ನಿಗದಿ ಪಡಿಸಿದ ಕನಿಷ್ಟ ವೇತನವನ್ನು ಜಾರಿ ಮಾಡಿಸುವಲ್ಲಿ ಸರ್ಕಾರದ ಅಧಿಕಾರಿಗಳೇ ವಿಫಲರಾಗಿರುತ್ತಾರೆ.

ಸರ್ಕಾರದ 1994 ರ ಆದೇಶದ ಪ್ರಕಾರ ಊಟದ ಬಾಬ್ತಿಗೆ ಶೇಕಡ 15 ರಷ್ಟು ಕಡಿತ ಮಾಡುವ ವಿರುದ್ಧ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ ಮಾನ್ಯ ಕರ್ನಾಟಕ ಹೈಕೋರ್ಟ್‌ನಿಂದ ಸ್ಟೇ ತಂದಿದೆ. 5 ವರ್ಷ ಕಾಲ ಸ್ಟೇ ಮುಂದುವರೆದು ಇತ್ತೀಚೆಗೆ ಸರ್ಕಾರದ ವಕೀಲರು ಮತ್ತು ಹೋಟೆಲ್ ಮಾಲೀಕರ ವಕೀಲರು ಸೇರಿ ತಡೆಯನ್ನು ತೆರವು ಮಾಡಿದರು. ಇದರ ವಿರುದ್ಧ ಹೋಟೆಲ್ ಕಾರ್ಮಿಕ ಸಂಘ ಹೈ ಕೋರ್ಟ್ ಡಿವಿಜನಲ್ ಬೆಂಚ್‌ಗೆ ಅರ್ಜಿ ಹಾಕಿತು. ಅರ್ಜಿಯು ವಿಚಾರಣೆ ಬಂದಾಗ ನ್ಯಾಯಾಲಯದ ಡಿವಿಜನಲ್ ಬೆಂಚ್ ಹೋಟೆಲ್ ಕಾರ್ಮಿಕರ ಕಳೆದ 7 ವರ್ಷದಿಂದ ಕನಿಷ್ಟ ಕೂಲಿ ಪುನರ್ ವಿಮರ್ಶೆ ಮಾಡದಿರುವ ಬಗ್ಗೆ ಸರ್ಕಾರವನ್ನು ಟೀಕಿಸಿದರು. ಕೂಡಲೇ ಹೋಟೆಲ್ ಕಾರ್ಮಿಕರ ಕನಿಷ್ಟ ಕೂಲಿ ಪುನರ್ ವಿಮರ್ಶೆ ಮಾಡಬೇಕೆಂದು ಸರ್ಕಾರಕ್ಕೆ ಆದೇಶ ನೀಡಿದ್ದಾರೆ. ಈ ಆದೇಶವನ್ನು ಕೂಡಲೇ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹೋಟೆಲ್ ಕಾರ್ಮಿಕರ ಧರಣಿ ನಡೆಯಿತು.

ಧರಣಿಯನ್ನು ಸಿಐಟಿಯು ಕಾರ್ಯದರ್ಶಿ ಇ.ಕೆ.ಎನ್.ರಾಜನ್ ಉದ್ಘಾಟಿಸಿದರು.

ರಾಜ್ಯದಲ್ಲಿ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗದವರು ಭೇಟಿ ಮಾಡುವ ದಿವಸ ಬೆಳಿಗ್ಗೆ 10.30 ಗಂಟೆಗೆ ರಾಜ್ಯ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ನಡೆದ ಕನಿಷ್ಟ ಕೂಲಿ ಹೋರಾಟವು ಅಧಿಕಾರಿಗಳಿಗೆ ಗಾಬರಿ ಉಂಟು ಮಾಡಿತು. ಧರಣಿ ಪ್ರಾರಂಭಿಸಿದ ಅರ್ಧ ಗಂಟೆ ಒಳಗೆ ರಾಜ್ಯ ಕಾರ್ಮಿಕ ಆಯುಕ್ತರು, ಉಪ ಕಾರ್ಮಿಕರ ಆಯುಕ್ತರುಗಳು ಮತ್ತು ಲೇಬರ್ ಅಧಿಕಾರಿಗಳು ನಮ್ಮ ಸತ್ಯಾಗ್ರಹ ಸ್ಥಳಕ್ಕೆ ಓಡಿ ಬಂದು ಈ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು. ನಂತರ ರಾಜ್ಯ ಸಿಐಟಿಯು ಅಧ್ಯಕ್ಷರಾದ ಸೂರ್ಯನಾರಾಯಣ ರಾವ್, ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಸಂಘದ ಅಧ್ಯಕ್ಷರಾದ ಇ.ಕೆ.ಎನ್.ರಾಜನ್, ಪ್ರಧಾನ ಕಾರ್ಯದರ್ಶಿ ಮೆಲ್ಕಿಯೋರ್ ಅವರುಗಳು ರಾಜ್ಯ ಲೇಬರ್ ಕಮಿಷನರ್ ಹತ್ತಿರ ಚರ್ಚೆ ಮಾಡಿದರು. ರಾಜ್ಯ ಕಾರ್ಮಿಕ ಆಯುಕ್ತರು ಹೋಟೆಲ್ ಕಾರ್ಮಿಕರ ಬೇಡಿಕೆಯಲ್ಲಿ ನ್ಯಾಯವಿದೆ, ಕೂಡಲೇ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಆದರೆ ಹೋಟೆಲ್ ಕಾರ್ಮಿಕರು ಧರಣಿಯನ್ನು ನಿಲ್ಲಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಹಾಗಾಗಿ 28ನೇ ತಾರೀಖಿಗೆ ಧರಣಿಯನ್ನು ಮುಂದೂಡಿದರು. ನಂತರ ಉಪ ಕಾರ್ಮಿಕಾಯುಕ್ತರಾದ ಉತ್ತಪ್ಪನವರು ಸತ್ಯಾಗ್ರಹದ ಸ್ಥಳಕ್ಕೆ ಧಾವಿಸಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿ ಸರ್ಕಾರದ ತೀರ್ಮಾನವನ್ನು ಸ್ಪಷ್ಟಪಡಿಸಿದ ನಂತರ ಕಾರ್ಮಿಕರು ಹೋರಾಟವನ್ನು ಹಿಂತೆಗೆದರು.

- ಇ.ಕೆ.ಎನ್



ಕರ್ನಾಟಕ ಈ ವಾರ

ಕಾನೂನು-ತೀರ್ಪುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕಾರ್ಯಸಾಧುವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಎಸ್‌ಎಸ್‌ಎಲ್‌ಸಿ ವರೆಗೂ ಹಳ್ಳಿಯಲ್ಲೇ 'ಗ್ರಾಮಾಂತರ' ಎಂದು ಪರಿಗಣಿಸಬೇಕು ಎಂಬ ಬಗ್ಗೆ ವಿಮರ್ಶೆ ಅಗತ್ಯವಿದೆ. ಎಲ್ಲಾ ಹಳ್ಳಿಗಳಲ್ಲಿಯೂ ಹೈಸ್ಕೂಲುಗಳು ಇಲ್ಲವೆಂಬುದನ್ನು ಗಮನಿಸಬೇಕು.

ಚುನಾವಣಾ ಪ್ರಣಾಳಿಕೆ ಅನುಷ್ಠಾನ ಆಗಿದೆಯೇ?

ಚುನಾವಣಾ ಪ್ರಣಾಳಿಕೆಯ ಅನುಷ್ಠಾನ ಹೇಗೆ ನಡೆದಿದೆ ಎಂದು ಪರಿಶೀಲಿಸುವ ಹೆಸರಿನಲ್ಲಿ ಕಾಂಗ್ರೆಸ್ ನಾಯಕರು ಸಚಿವರುಗಳ 'ಪರೇಡ್ ಪರೀಕ್ಷೆ' ಏರ್ಪಡಿಸಿದ್ದು ಹಾಸ್ಯಾಸ್ಪದ ಪ್ರಸಂಗ. ಇಂತಹ ವಿಮರ್ಶೆಗಳು 'ಕಾಂಗ್ರೆಸ್ ಸಂಸ್ಕೃತಿ'ಗೆ ಭಿನ್ನವೆಂದು ಕಂಡುಬಂದರೂ ನಿಜ ಅರ್ಥದಲ್ಲಿ ಅದಕ್ಕೆ ಅನುಗುಣವಾಗಿಯೇ ಇದೆ. ತನ್ನ ಪಕ್ಷದ ಸರ್ಕಾರದ ಕಾರ್ಯವೈಖರಿ ಬಗ್ಗೆ ವಿಮರ್ಶಿಸುವ ಎಲ್ಲಾ ಹಕ್ಕು ಆ ಪಕ್ಷಕ್ಕೆ ಇದೆ. ಆದರೆ ಈ ರೀತಿಯೇ ಎಂಬುದು ಪ್ರಶ್ನೆ ಉದ್ಭವಿಸಿದೆ. ಕಾಂಗ್ರೆಸ್ ಪಕ್ಷದಲ್ಲಿ ಹಿಂದೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸೋತ ಬಗ್ಗೆ ವಿಮರ್ಶಾವರದಿ ಸಿದ್ಧಪಡಿಸಿದರು. ಆದರೆ ಸೋಲಿಗೆ ಕಾರಣವಾದ ದಿವಾಳಿಕೋರ ಆರ್ಥಿಕ ನೀತಿಗಳ ಬೆಂಬಲ, ಅನುಷ್ಠಾನ ಕೈಬಿಡಲಿಲ್ಲ. ಇಂತಹ ಹಲವು ವರದಿಗಳು ಧೂಳು ಹಿಡಿದು ಕೂತೇ ಇವೆ. ಇರಲಿ, ಪ್ರಣಾಳಿಕೆಯಲ್ಲಿ ಇದ್ದದ್ದು, ಈಗ ಅದರ ಜಾರಿಯಾಗಿದ್ದು ಹೇಗೆ ಎಂದು ಬಹಿರಂಗ ಪಡಿಸಿದ್ದರೆ ಒಳ್ಳೆಯದಿತ್ತು. ಅಂತೂ ಕೊನೆಗೆ ಕೃಷ್ಣರ ಸರ್ಕಾರಕ್ಕೆ ಮಂತ್ರಿಗಳಿಗೆ ಶಹಬ್ಬಾಸ್ ಕೊಟ್ಟ ಗುಲಾಂನಬಿ ಅಜಾದ್, ಅಂಟೋಣಿ ಮುಂತಾದವರು ವಾಪಾಸಾಗಿದ್ದಾರೆ.



ಇಲ್ಲಿ ಮುಖ್ಯಪ್ರಶ್ನೆಯೆಂದರೆ ಪರೀಶೀಲನೆ ಎಂಬ ಹೆಸರಿನಲ್ಲಿ ಏನೇನು ನಡೆದಿದೆ? ಹಣದ ಮಾಮೂಲಿ ಮರುನಿಗದಿ, ಕುದುರಿಸಲ್ಪಟ್ಟ ಹೊಸ ವ್ಯವಹಾರಗಳು, ಸಚಿವರ ಲಾಬಿಗಳು - ನಡೆದಿವೆ ಎಂದು ವದಂತಿಗಳಿವೆ. ಆದರೆ ಈ ಪರಿಶೀಲನೆಯಲ್ಲಿ [illegible] ಬಗೆಗಾಗಲೀ, ಈಗ ಅನುಸರಿಸುತ್ತಿರುವ ದಿವಾಳಿಕೋರ, ಜನಪೀಡಕ ಆರ್ಥಿಕ ನೀತಿಗಳ ಬಗೆಗಾಗಲಿ ಜನ ಅನುಭವಿಸುತ್ತಿರುವ ಸಂಕಷ್ಟಗಳು - ಅದಕ್ಕೆ ಸರ್ಕಾರದ ಸ್ಪಂದನ ವಿಮರ್ಶೆಗೆ ಬರಲೇ ಇಲ್ಲ. ಹೀಗಾಗಿ ಕೇಂದ್ರ ನಾಯಕರುಗಳುಳ್ಳ ಪರಿಶೀಲನೆ ಕೃಷ್ಣ ಸರ್ಕಾರಕ್ಕೆ ನೀಡಿದ್ದು ಕೇವಲ 'ಖೋಟಾ' ಸರ್ಟಿಫಿಕೇಟ್ ಅಷ್ಟೆ.

ಬಾಬಾಬುಡನ್‌ಗಿರಿಯತ್ತ ನಡೆಯುತ್ತಿರುವ ಕೊಳ್ಳಿಗಳು

ಮತ್ತೆ ಬಾಬಾಬುಡನ್ ಗಿರಿಯಲ್ಲಿ ಪ್ರಕ್ಷುಬ್ಧತೆ ಸೃಷ್ಟಿಸಿ, ಇನ್ನೊಂದು ಬಾಬ್ರಿ ಮಸೀದಿಯನ್ನಾಗಿಸಲು ಸಂಘ ಪರಿವಾರ ಚುರುಕಾಗಿದೆ. ದತ್ತ ಜಯಂತಿ ಹೆಸರಿನಲ್ಲಿ ಪಾದುಕೆ, ರಥಯಾತ್ರೆ ಮುಂತಾಗಿ ವಿಷ ಪ್ರಚಾರ ಆರಂಭಿಸಿದೆ. ಹಿಂದಿನ ಕಹಿ ಅನುಭವಗಳನ್ನು ಗಮನದಲ್ಲಿರಿಸಿ ಸರ್ಕಾರ ಎಲ್ಲ ಕಟ್ಟುನಿಟ್ಟು ರಕ್ಷಣೆ, ಎಚ್ಚರಿಕೆ ವಹಿಸಬೇಕು. ಜನತೆಯೂ ಈ ಹುನ್ನಾರಗಳನ್ನು ತಿರಸ್ಕರಿಸಬೇಕು. ಬಾಬಾಬುಡನ್‌ಗಿರಿ ಹಾಗೂ ಕರ್ನಾಟಕ ಕೋಮುವಾದಿಗಳ ನೆಲೆಯಾಗದಂತೆ ತಿರಸ್ಕರಿಸಬೇಕಿದೆ. ಪರಂಪರಾನುಗತ ಶಾಂತಿ-ಕೋಮು ಸೌಹಾರ್ದತೆ ಕಾಪಾಡಬೇಕಿದೆ.

ತಳ ಕಳೆದುಕೊಳ್ಳುತ್ತಿರುವ ಹೆಗಡೆ

ರಾಂವಿಲಾಸ್ ಪಾಸ್ವಾನ್ ಹೊಸ ಪಕ್ಷವನ್ನು ಘೋಷಿಸಿದ್ದಾರೆ. ಪಾಸ್ವಾನ್ ಪಕ್ಷದ ಬಿಡಾರದಲ್ಲಿ ಕರ್ನಾಟಕದ ಮಾಜಿ ಸಚಿವ ಹಾಲಿ ಎಂ.ಪಿ. [illegible] ಅರ್ಥಾತ್ ರಾಮಕೃಷ್ಣ ಹೆಗಡೆಯವರ ಪಾಳೆಯದಲ್ಲಿ ಮತ್ತೊಂದು ಬಿರುಕು ಕಾಣಿಸಿಕೊಂಡಿದೆ. ಬಲ ಕುಸಿದಿದೆ. ಅವರ ಬೆಂಬಲಿಗಲೇ ಎಂದಿದ್ದ ಜಿಗಜಿಣಗಿಯವರ 'ಹಾರಿಕೆ'ಯಿಂದ ಇನ್ನೂ ನಿಶಕ್ತಿ ಹೆಚ್ಚಿದೆ.

ಹಿಂದೆ ಹೆಗಡೆಯವರು ಕೇಂದ್ರದಲ್ಲಿ ಮಂತ್ರಿ ಪದವಿ ಸಿಗದೇ ಪರಿತಪಿಸುತ್ತಿದ್ದಾಗ ಹೆಗಡೆ ವೈರಿ ಜಾರ್ಜ್‌ರವರ ಸಮತಾಪಕ್ಷ ಶ್ರೀನಿವಾಸ ಪ್ರಸಾದ್ ಸೇರಿ ಮಂತ್ರಿ ಪದವಿ ಗಿಟ್ಟಿಸಿ, ಹೆಗಡೆಯವರ ಹೊಟ್ಟೆ ಉರಿಸಿ, ಸಂವಿಧಾನ ಪರಾಮರ್ಶೆಯೆಂಬ ಕರಸೇವೆಗೆ ದಲಿತರನ್ನು ಓಲೈಸುವ ಮಹಾನ್ ಕಾಯಕವನ್ನು ನಿಷ್ಠೆಯಿಂದ ಮಾಡತೊಡಗಿದರು. ಹೀಗೆ ತನ್ನ ಬಂಟರು ತನ್ನನ್ನು ತೊರೆಯುವುದು ಪಟ್ಟ ಗಿಟ್ಟಿಸಿ ಹಂಗಿಸುವುದು ಹೆಗಡೆಗೆ ನುಂಗಲಾರದ ತುತ್ತಾಗಿದೆ. ಅಂದೊಮ್ಮೆ ಅಪ್ಪಿಕೊಂಡಿದ್ದ ವಾಜಪೇಯಿ, ಅಡ್ವಾಣಿ ದೂರ ತಳ್ಳುತ್ತಿದ್ದರೂ, ಸರ್ಕಾರ ಸಮರ್ಥಿಸುತ್ತಿರುವುದನ್ನು ನಿಷ್ಠೆಯಿಂದಲೇ ಹೆಗಡೆ ಮುಂದುವರಿಸಿದ್ದಾರೆ. ಮೂರನೇ ಶಕ್ತಿಯ ಬಗ್ಗೆ ಉಡಾಫೆ ಮಾಡಿ ಮಾತನಾಡಿ, ಜನತಾದಳ ಬಣಗಳು ಒಗ್ಗೂಡುವಿಕೆಗೆ ಅಡ್ಡಿಯಾಗಿ, ಕೇಂದ್ರದ ಜೆಡಿಎಗಳನ್ನೇ ಅನಿವಾರ್ಯವೆಂದು ನಂಬಿ, ನಂಬಿಸುತ್ತಿರುವ ಹೆಗಡೆಯವರು ತಮ್ಮ ಬಣ ಪೂರ್ಣ ವಿಘಟನೆ ಆಗುವುದನ್ನು ಕಾಯುತ್ತಿರುವಂತಿದೆ.

ತಳ ಕುಸಿಯುತ್ತಿರುವ ಮುತ್ಸದ್ದಿ ಹೆಗಡೆಯವರೀಗ ಆತ್ಮಹತ್ಯಾದಳದ ನಾಯಕರು ಎಂಬುದನ್ನು ಅವರ ಬೆಂಬಲಿಗರು ಅರಿಯಬೇಕಿದೆ.




ದೇಶ-ಭಾಷೆ ಯಾವುದಾದರೇನು? ಆತನನ್ನು ಅರಿಯುವುದು ಅಷ್ಟೊಂದು ಸುಲಭವಾಗಿತ್ತು. ನೋಡಿದವರೆಲ್ಲರ ಮೈ-ಮನಗಳನ್ನೆಲ್ಲಾ ಆವರಿಸಿ, ಗಾಢವಾಗಿ ತಟ್ಟಿ, ಸದಾ ವಿಜೃಂಭಿಸಬಲ್ಲ ಮಾಂತ್ರಿಕ, ಸೃಜನಶೀಲತೆಯ ಅತ್ಯುಚ್ಛ ಪರ್ವತವಾಗಿದ್ದಾತನೇ ಚಾರ್ಲಿಚಾಪ್ಲಿನ್...

ಚಾಪ್ಲಿನ್ ದುಗುಡಗಳ ಗಂಟು ಬಿಚ್ಚಿ ಮುದುಡಿದ ಮನಸ್ಸನ್ನು ಅರಳಿಸಬಲ್ಲ, ನಗಿಸಬಲ್ಲ, ಒಡನೆಯೇ ಬದುಕಿನ-ಸಮಾಜದ ಕ್ರೂರ ಸತ್ಯಗಳನ್ನು ಅನಾವರಣಗೊಳಿಸುತ್ತಾ, ವಿಷಾದದತ್ತ ಒಯ್ದು ಚಿಂತನೆಗೆ ಹಚ್ಚಿಬಿಡುವ ದಾರ್ಶನಿಕ. ಬತ್ತಿಹೋದ ಕಣ್ಣುಗಳಲ್ಲೇ ಅದ್ಭುತ ಕನಸು ಸೃಷ್ಟಿಸಬಲ್ಲವ. ಆತ ಲೇಖಕ, ಸಂಗೀತಗಾರ, ಅದ್ವಿತೀಯ ನಟ, ನಿರ್ದೇಶಕ, ಶ್ರೇಷ್ಠ ಕಲಾವಿದ, ಯುದ್ಧವಿರೋಧಿ, ಶಾಂತಿ ರಾಯಭಾರಿ, ಮಹಾ ಮಾನವತಾವಾದಿ, ವಿಶ್ವಮಾನವ....

ಅಂತೆಯೇ ಸಾಮ್ರಾಜ್ಯಶಾಹಿ ಅಮೇರಿಕಾದ ಗುಹೆಯೊಳಗೇ ಜನಮನ ಸೂರೆಗೊಂಡು ಯುದ್ಧ ವಿರೋಧಿ-ಶಾಂತಿಪರ ಅಲೆಗಳನ್ನೇ ಎಬ್ಬಿಸಿದಾತ. 1940 ರಲ್ಲೇ 'ದಿ ಗ್ರೇಟ್ ಡಿಕ್ಟೇಟರ್' ಸಿನಿಮಾದಲ್ಲಿ ಹಿಟ್ಲರ್‌ನ ನಾಜಿ ವಾದವನ್ನು ಅದರ ನಾಶವನ್ನು ಸಾರಿದ. ಆತನ ಶಾಂತಿಪರ ನಿಲುವು, ಜಗತ್ತನ್ನು ಬೆಸೆಯುವ ಗೆಳೆತನದಿಂದ ಕೆಂಡಮಂಡಲವಾದ ಡಾಲರ್ ಗಿಡುಗಗಳು, ಮತಾಂಧರು ಆತನನ್ನು ದೇಶದ್ರೋಹಿ ಎಂದರು. ವಿಧವಿಧವಾಗಿ ಪೀಡಿಸಿದರು. ಆದರೆ ಎಲ್ಲೂ ತಲೆಬಾಗಲಿಲ್ಲ, ರಾಜಿಯಾಗಲಿಲ್ಲ. ಎಲ್ಲವನ್ನೂ ಎದುರಿಸಿದವ, ತಿರಸ್ಕರಿಸಿದವ, ಕೊನೆಗೆ ಅಮೆರಿಕಾದ ಆಳರಸರಿಗೆ ಧಿಕ್ಕಾರ ಹೇಳಿ ಹೊರಟೇ ಬಿಟ್ಟವ.

ಆದರೆ ಈತನ ಬಾಲ್ಯ ಬದುಕು-ಧಾರುಣ. ಒಂದು ತುತ್ತಿಗೂ ಗತಿಯಿಲ್ಲದೇ ಪಡಬಾರದ ಕಷ್ಟಗಳಲ್ಲೇ ಬೆಳೆದವನು. ಕಂದಮ್ಮಗಳ ಹೊಟ್ಟೆ ತುಂಬಲು ಸದಾ ಸೆಣಸಿದವಳು ತಾಯಿ. ಆಕೆ ರಂಗಭೂಮಿ ಕಲಾವಿದೆ. ನಾಲ್ಕಾರು ಕಾಸು ಸಂಪಾದನೆಗೂ ಸಂಚಕಾರ ತಂದಿದ್ದು ಆವರಿಸುತ್ತಿದ್ದ ಮುಪ್ಪು, ಕೀರಲಾದ ಗಂಟಲು..... ಅಂತಹ ಬದುಕಿನ ದಬಾವಣೆಯೇ ಚಾಪ್ಲಿನ್‌ನಲ್ಲಿದ್ದ ಪ್ರತಿಭೆಯನ್ನು ಹೊರ ತಳ್ಳಿತು. ಹೀಗೆ ಜೀವನದುದ್ದಕ್ಕೂ ನೋವು, ನರಳಿಕೆ, ವಿಷಾದ, ನಗುವಿನ ಸಂಘರ್ಷದಲಲ್ಲಿ ಮೂಡಿಬಂದದ್ದು ಚಾಪ್ಲಿನ್ ಎಂಬ ಮಹಾ ಪ್ರತಿಭೆ.



ಕುಂ.ವೀ. ಅವರ 'ಚಾಪ್ಲಿನ್' ಎಂಬ ಪುಸ್ತಕದಿಂದ ಕೆಲವು ತುಣುಕುಗಳನ್ನು ನಮ್ಮ ಓದುಗರಿಗಾಗಿ ನೀಡುತ್ತಿದ್ದೇವೆ.

ಚಾರ್ಲಿಚಾಪ್ಲಿನ್

ಬಡತನದ ಬೇಗೆಯಲ್ಲಿ ಅರಳಿದ ಮಹಾ ಪ್ರತಿಭೆ

ಎಷ್ಟು ಧೈರ್ಯವಿದ್ದರೂ ಆ ಅಬಲೆ ಒಂಟಿಯಾಗಿ ದುಃಖಿಸುತ್ತಿದ್ದಳು. ಕಷ್ಟಕೋಟಲೆಯನ್ನು ಸಮರ್ಥವಾಗಿ ಎದುರಿಸುತ್ತಲೇ ಹನ್ನಾ ರಂಗಭೂಮಿಯೊಂದಿಗೆ ನಿರಂತರ ಸಂಬಂಧವಿರಿಸಿ ಕೊಂಡಿದ್ದಳು. ಬಿಡುವಿಲ್ಲದಂತೆ ನರ್ತಿಸಿದರೂ, ನಟಿಸಿದರೂ, ಹಾಡಿದರೂ ವಾರಕ್ಕೆ ಇಪ್ಪತ್ತೈದು ಪೌಂಡುಗಳಿಗಿಂತ ಹೆಚ್ಚಿ ಹಣ ಸಂಭಾವನೆ ರೂಪದಲ್ಲಿ ಸಿಗುತ್ತಿರಲಿಲ್ಲ. ಅಷ್ಟರಲ್ಲಿ ಸಂಸಾರ ತೂಗಿಸುವುದು ಸುಲಭ ಸಂಗತಿಯಾಗಿರಲಿಲ್ಲ. ಮಕ್ಕಳನ್ನು ತನ್ನೊಂದಿಗೆ ಥೇಟರುಗಳ ಕಡೆ ಕರೆದೊಯ್ಯುತ್ತಿದ್ದಳು.

ಪುಟ್ಟ ಸ್ಪೆನ್ಸರ್ ಚಾಪ್ಲಿನ್ ಲಂಡನ್ ಬ್ರಿಡ್ಜ್‌ಗುಂಟ ನಡೆಯುತ್ತ ಗಗನಚುಂಬಿ ಕೆಂಪು ಕಟ್ಟಡಗಳನ್ನು, ರಸ್ತೆ ಎರಡೂ ಕಡೆ ದಟ್ಟವಾಗಿ ಬೆಳೆದಿದ್ದ ಜೋಪಡಿಗಳನ್ನು, ನಿರ್ಗತಿಕರ, ದೀನ ದಲಿತರ ಆಕ್ರಂದನಗಳನ್ನು, ಒಂದು ಹಿಡಿ ಬದುಕಿಗಾಗಿ ಹೋರಾಡುತ್ತಿದ್ದ ನಿರಾಶ್ರಿತರನ್ನು ದಿಗ್ಭ್ರಮೆಯಿಂದ ನೋಡುತ್ತಿದ್ದ. ತಾನು ದಿಗ್ಭ್ರಮಿಸಿದ ಎಷ್ಟೋ ಸಂಗತಿಗಳನ್ನು ಆತ ಮುಂದೆ ತನ್ನ ಚಿತ್ರಗಳ ಫ್ರೇಮುಗಳಲ್ಲಿ ಅಳವಡಿಸಿಕೊಂಡು ಜನಸ್ತೋಮದ ಅಂತಃಕರಣವನ್ನು ಸೂರೆಗೊಂಡ.

ಈ ಬಗ್ಗೆ ಮುಂದೆ ಚರ್ಚಿಸೋಣ.

ತನ್ನ ತಾಯಿ ರಂಗಭೂಮಿಯ ಮೇಲೆ ನಟಿಸುತ್ತಿದ್ದಾಗ, ಇಂಪಾಗಿ ಹಾಡುತ್ತಿದ್ದಾಗ ಸ್ಪೆನ್ಸರ್ ಚಾಪ್ಲಿನ್ ಸೈಡ್‌ವಿಂಗ್‌ನಲ್ಲಿದ್ದು ಕಲಿಯುತ್ತಿದ್ದ. ಹನ್ನಾ ದೊರಕಿದ ಗೌರವಧನವನ್ನು ಮುಷ್ಟಿಯಲ್ಲಿ ಹಿಡಿದುಕೊಂಡು ಮನೆಗೆ ನಡೆಯುತ್ತಿದ್ದ ಸಮಯದಲ್ಲಿ ನೂರಾರು ವಿಷಯಗಳ ಬಗ್ಗೆ ಮುಗ್ಧ ಪ್ರಶ್ನೆಗಳನ್ನು ಹಾಕುತ್ತಿದ್ದ. ಅವಕ್ಕೆಲ್ಲ ಹನ್ನಾ ಬೇಸರಿಸದೆ ಉತ್ತರಿಸುತ್ತಿದ್ದಳು. ಹಾಗೆಯೇ ಆ ಮಗುವಿನ ತಂದೆಕುರಿತು ಸಹ, ಆತನನ್ನು ನೆಪೋಲಿಯನ್‌ಗೆ ಹೋಲಿಸುತ್ತಿದ್ದಳು. ಜೊತೆಗೆ ನಗರದ ವೈವಿಧ್ಯಮಯ ದೃಶ್ಯಗಳನ್ನು ಆಕೆ ತನ್ನ ಮಗನಿಗೆ ತೋರಿಸದೆ ಇರುತ್ತಿರಲಿಲ್ಲ. ನಗರದ ದಾರಿದ್ರ್ಯದ ಕೊಂಪೆಗಳನ್ನು, ವಿಲಾಸಮಯ ಶ್ರೀಮಂತರ ಸಾಲು ಸಾಲು ನಿವಾಸಗಳನ್ನು ಏಕಕಾಲಕ್ಕೆ ನೋಡುತ್ತ ವಿಸ್ಮಯಗೊಳ್ಳುತ್ತಿದ್ದ ಪುಟ್ಟ ಸ್ಪೆನ್ಸರ್ ಚಾಪ್ಲಿನ್.

ತಂದೆ ಹಿಲ್ಸನ ಮನೆಯಲ್ಲಿ ಕಡು ಬಡತನದಿಂದಾಗಿ ಉಸಿರುಗಟ್ಟಿಸುವಂಥ ವಾತಾವರಣ. ಸದಾ ಸಂಧಿವಾತ, ಕೀಲುನೋವಿನಿಂದ ನರಳುತ್ತಿದ್ದ ತನ್ನ ಐರಿಷ್ ಮೂಲದ ತಂದೆ ಎಷ್ಟು ದುಡಿದರೂ ಸಂಸಾರದ ಕನಿಷ್ಠ ಅಗತ್ಯಗಳನ್ನು ಪೂರೈಸುವುದಾಗುತ್ತಿರಲಿಲ್ಲ. ಹೆಚ್ಚು ಅಂತರ್ಮುಖಿಯಾಗಿರುತ್ತಿದ್ದ, ದಿನದಿಂದ ದಿನಕ್ಕೆ ದೈಹಿಕ ಉತ್ಸಾಹ ಕಳೆದುಕೊಳ್ಳುತ್ತಿದ್ದ ಹನ್ನಾ ವಾರಕ್ಕೆ ಇಪ್ಪತ್ತೈದು ಪೌಂಡುಗಳಿಗಿಂತ ಹೆಚ್ಚು ಸಂಪಾದಿಸುವುದಾಗುತ್ತಿರಲಿಲ್ಲ. ತನ್ನ ಮಕ್ಕಳೊಂದಿಗೆ ತಾನು ಹೆಚ್ಚು ತವರು ಮನೆಗೆ ಹೊರೆಯಾಗುತ್ತಿರುವೆನೇನೋ ಎಂಬ ಭಾವನೆ ಮೂಡಿತು. ಹನ್ನಾ ತನ್ನ ಇಬ್ಬರು ಮಕ್ಕಳೊಂದಿಗೆ ಅದೇ ನಗರದ ಲ್ಯಾಂಬೆತ್‌ನ, ಸೇಂಟ್ ಜಾರ್ಜ್ ರಸ್ತೆಯ ಪೆಸ್ಟ್ ಸ್ಕ್ವೇರ್‌ನ ಪುಟ್ಟಮನೆಗೆ ತನ್ನ ನಿವಾಸ ಬದಲಿಸಿದಳು. ಆ ಮೂರು ಕೋಣೆಗಳ ಪುಟ್ಟ ಮನೆಯಲ್ಲಿ ಸಾಕಷ್ಟು ಪೀಠೋಪಕರಣಗಳಿದ್ದವು. ಒಮ್ಮೆ ಸಿಡ್ನಿಯೊಡನೆ ಥೇಟರ್‌ಗೆ ಹೋಗುತ್ತಿದ್ದ ಹನ್ನಾ ಇನ್ನೊಮ್ಮೆ ಸ್ಪೆನ್ಸರ್‌ನೊಡನೆ ಹೋಗುತ್ತಿದ್ದಳು. ಒಮ್ಮೊಮ್ಮೆ ತನ್ನಿಬ್ಬರು ಮಕ್ಕಳೊಂದಿಗೆ, ಅನೇಕ ಸಾರಿ ತಾನೊಬ್ಬಳೇ ಥೇಟರ್‌ಗೆ ಹೋಗಿ ಮಧ್ಯರಾತ್ರಿ ಮನೆಗೆ ಬರುತ್ತಿದ್ದುದುಂಟು. ಸೇವಕಿಯೋರ್ವಳ ಆರೈಕೆಯಲ್ಲಿರುತ್ತಿದ್ದ ಮಕ್ಕಳು ತಮ್ಮ ತಾಯಿಯ ನಿದ್ದೆಗೆ ಭಂಗ ಮಾಡಬಾರದೆಂದು ಗಲಾಟೆ ಮಾಡದೆ ಮೌನದಿಂದಿರುತ್ತಿದ್ದರು. ಸೂರ್ಯ ಎರಡುಮಾರು ಮೇಲೇರಿದ ನಂತರ ಎಚ್ಚರಾಗುತ್ತಿದ್ದ ಹನ್ನಾ ಬೆಳಗಿನ ಉಪಹಾರಕ್ಕೆ ಡೈನಿಂಗ್ ಟೇಬಲ್ ಮೇಲೆ ಪಿರಮಿಡ್ ಆಕಾರದಲ್ಲಿ ಹಣ್ಣುಗಳನ್ನು ಪೇರಿಸಿಡುತ್ತಿದ್ದಳು. ರುಚಿರುಚಿಯಾದ ಮಂಜು ಕೆನೆಯ ಹಲ್ವಾ ಅಥವಾ ಮಿಠಾಯಿಗಳನ್ನು ಸಹ ಮಕ್ಕಳಿಗೆ ತಾನು ತಿನ್ನಿಸುತ್ತಾ, ಮಕ್ಕಳಿಂದ ತಾನು ತಿನ್ನುತ್ತ ಉಪಹಾರ ಮುಗಿಸುವುದೆಂದರೆ ದೈವಿಕ ಕಳೆಮುಖದ ಆಕೆಗೆ ತುಂಬ ಇಷ್ಟ. ಒಟ್ಟಿನಲ್ಲಿ ಸ್ಪೆನ್ಸರ್ ಚಾಪ್ಲಿನ್ ಬಾಲ್ಯದ ಆರಂಭದ ದಿನಗಳು ಸಂತೋಷದ, ಅಪರೂಪದ ಕ್ಷಣಗಳಾಗಿದ್ದವು.

ಕಲಾವಿದರ ನಡುವೆ ಪೈಪೋಟಿ ಹೆಚ್ಚಿದ್ದರಿಂದಾಗಿಯೋ, ಆ ಸ್ಪರ್ಧಾತ್ಮಕ ಮನೋಭಾವ ತನ್ನಲ್ಲಿರದಿದ್ದುದರಿಂದಾಗಿಯೋ, ತನ್ನ ಕಂಠ ಹೆಚ್ಚು ಸೂಕ್ಷ್ಮ ಪ್ರವೃತ್ತಿವುಳ್ಳದ್ದು ಇದ್ದುದರಿಂದಾಗಿಯೋ ಹನ್ನಾಳ ಸಾಪ್ತಾಹಿಕ ಆದಾಯ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗತೊಡಗಿತು. ವಿಶ್ರಾಂತಿ ಪಡೆದು ತನ್ನ ಆರೋಗ್ಯ ಸುಧಾರಿಸಿಕೊಳ್ಳುವುದು ಆಕೆಗೆ ಸಾಧ್ಯವಿರಲಿಲ್ಲ. ಎಲ್ಲಿ ತನ್ನಿಬ್ಬರು ಮಕ್ಕಳು ಉಪವಾಸ ವನವಾಸ ಅನುಭವಿಸುವರೋ ಎಂಬ ಆತಂಕದಿಂದ ಆಕೆ ಹಾಡುವ ಅವಕಾಶಗಳು ಸಿಕ್ಕರೆ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆದರೆ ಆಕೆಗೆ ಮೊದಲಿನಷ್ಟು ಸುಶ್ರಾವ್ಯವಾಗಿ ಹಾಡಲಾಗುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಗಂಟಲಲ್ಲಿ ತೊಂದರೆ ಕಾಣಿಸಿಕೊಂಡು ಕೀರಲು ಸ್ವರ ಹೊರಟು ಬಿಡುತ್ತಿತ್ತು. ಆದರ ಅರಿವಿದ್ದ ಆಕೆ ಆರೋಹಣದಲ್ಲಿ ಹಾಡುತ್ತಿರಲಿಲ್ಲ. ಮುಂದೊಂದು ದಿನ ತಾನು ಅಸಭ್ಯ ಪ್ರೇಕ್ಷಕರಿಂದ ಅವಮಾನಕ್ಕೊಳಗಾಗಬಹುದೆಂದೇ ಭಾವಿಸಿದ್ದಳು. ಹಾಗೆ ಭಾವಿಸಿದ್ದ ಆ ದಿನ ಬಂದೇ ಬಿಟ್ಟಿತು.

ಆ ದಿನ ಹನ್ನಾ ಥೇಟರ್‌ಗೆ ತನ್ನ ಐದು ವರ್ಷದ ಮಗ ಸ್ಪೆನ್ಸರ್‌ನೊಂದಿಗೆ ಹಿಂಜರಿಕೆಯಿಂದಲೇ ಹೋದಳು. ಲಗುಬಗೆಯಿಂದ ಮೇಕಪ್ ಕೋಣೆ ಹೊಕ್ಕು ತುಸು ಹೊತ್ತಿನಲ್ಲಿ ಮರಳಿ ಬಂದಳು. ಪ್ರೇಕ್ಷಕರು ಎಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಭರ್ತಿಯಾಗಿದ್ದರು. ನಿರ್ವಾಹಕ ಕಾರ್ಯಕ್ರಮವನ್ನು ಪ್ರೇಕ್ಷಕರಿಗೆ ವಿವರಿಸಿ ಬಂದ ನಂತರ ಹನ್ನಾ ವೇದಿಕೆ ಪ್ರವೇಶಿಸಿದಳು. ಇಂಪಾಗಿಯೇ ಹಾಡು ಆರಂಭಿಸಿದಳು. ಆದರೆ ಸ್ವಲ್ಪ ಹೊತ್ತಿನಲ್ಲಿ ಆಕೆಯ



'ದಿ ಕಿಡ್' ಚಿತ್ರದಲ್ಲಿ
ಬಾಲನಟನೊಂದಿಗೆ ಚಾಪ್ಲಿನ್

ಕಂಠ ಕೈಕೊಟ್ಟಿತು. ಇದ್ದಕ್ಕಿದ್ದಂತೆ ಕೀರಲು ಸ್ವರ ಹೊರಟಿತು. ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದಂತೆ ಮತ್ತಷ್ಟು ಕೀರಲುಗೊಂಡಿತು. ಅದರಿಂದ ಕೆರಳಿದ ಪ್ರೇಕ್ಷಕರು ಸಹನೆ ಕಳೆದುಕೊಂಡರು. ಕೆಲವರು ಜೋರಾಗಿ ಕೇಕೆ ಹಾಕಿ ನಗತೊಡಗಿದರೆ ಕೆಲವರು ಬೆಕ್ಕಿನಂತೆ ಅಣಕಿಸತೊಡಗಿದರು. ಸೈಡ್‌ವಿಂಗ್‌ನಲ್ಲಿ ನಿಂತಿದ್ದ ಪುಟ್ಟ ಸ್ಪೆನ್ಸರ್‌ಗೆ ಪ್ರೇಕ್ಷಕರು ಸೃಷ್ಟಿಸಿದ ಗೊಂದಲ ಗಲಾಟೆಯಿಂದಾಗಿ ದಿಕ್ಕೇ ತೋಚಲಿಲ್ಲ. ಹನ್ನಾ ಮುಖವನ್ನು ಬೊಗಸೆಯಿಂದ ಮರೆಮಾಚಿ ಬಿಕ್ಕುತ್ತ ಸೈಡ್ ವಿಂಗ್‌ಗೆ ಓಡಿ ಬಂದಳು. ದುಃಖಿತಪ್ತೆಯಾಗಿದ್ದ ಆಕೆಗೂ, ಸ್ಟೇಜ್ ಮೇನೇಜರ್‌ನಿಗೂ ಲಘು ಜಗಳವಾಯಿತು. ಆಕೆಯ ಸಲಹೆಯಂತೆ ಪುಟ್ಟ ಸ್ಪೆನ್ಸರನನ್ನು ವೇದಿಕೆ ಮೇಲೆ ಕಳಿಸಲು ಮೇನೇಜರ್ ಒಪ್ಪಿದ. ಕಿವಿಗಡಚಿಕ್ಕುವ ಪ್ರೇಕ್ಷಕರ ಗಲಾಟೆಯಿಂದ ಕಕ್ಕಾವಿಕ್ಕಿಯಾಗಿದ್ದ ಮಗುವಿನ ತೋಳು ಹಿಡಿದು ಕೆಲವು ಸೂಚನೆಗಳನ್ನು ನೀಡಿ ಬೆನ್ನು ಚಪ್ಪರಿಸಿ ವೇದಿಕೆ ಮೇಲೆ ಬಿಟ್ಟ. ಝಗಝಗಿಸುವ ದೀಪಗಳ ಬೆಳಕಿಗೆ, ಆ ಬೆಳಕಿನಲ್ಲಿ ಚಿತ್ತಾರವಾಡುತ್ತಿದ್ದ ಹೊಗೆಗೆ ಸ್ಪೆನ್ಸರ್ ಒಂದು ಕ್ಷಣ ಮಂಕಾದವನಂತೆ ಕಂಡ. ಕಲಾವಿದರ ಉತ್ಸಾಹದ ಕತ್ತು ಹಿಚುಕುತ್ತಿರುವಂತೆ ಗಲಾಟೆ ಮಾಡುತ್ತಿರುವ ಉನ್ಮತ್ತ ಪ್ರೇಕ್ಷಕರು ಈ ಚೋಟುದ್ದದ ಹುಡುಗ ಏನು ತಾನೆ ಹಾಡಿಯಾನು ಎಂಬ ನಿರ್ಲಕ್ಷ್ಯ ಭಾವದಿಂದ ತಮ್ಮ ಪಾಡಿಗೆ ತಾವು ಗಲಾಟೆ ಮಾಡುತ್ತಲೇ ಇದ್ದರು. ಅದನ್ನು ಲೆಕ್ಕಿಸದೆ ಬಾಲ ಸ್ಪೆನ್ಸರ್ ಚಾಪ್ಲಿನ್ ತಾನು ಹಾಡಲಿರುವ ಹಾಡಿನ ಬಗ್ಗೆ ವಾದ್ಯಗಾರರಿಗೆ ಕಣ್ಣು ಮಿಟುಕಿಸಿ ಸೂಚನೆ ನೀಡಿದ. ಅದು ಮೊದಲ ತನ್ನ ಮೆಚ್ಚಿನ ಹಾಡು.

ಜಾಕ್ ಜೋನ್ಸ್ ವೆಲ್ ನೋನ್ ಟು ಎವ್ವರಿ ಬಡಿ ಕೌಂಡ್ ಅಬೌಟ್ ಮಾರ್ಕೆಟ್ ಡೋಂಟ್ ಯರ್‌ಸೀ

... ಎಂದು ತನ್ನದೇ ಆದ ರೀತಿಯಲ್ಲಿ ದನಿ ಎತ್ತರಿಸಿ ಹಾಡುತ್ತಾ ಹಾಡಿನ ಲಯಕ್ಕನುಗುಣವಾಗಿ ನರ್ತಿಸತೊಡಗಿದ. ಒಂದೇ ಒಂದು ಕ್ಷಣದಲ್ಲಿ ಆ ಬಾಲಕ ಇಡೀ ಪ್ರೇಕ್ಷಕ ಸ್ತೋಮವನ್ನು ತನ್ನ ಇಂಪಾದ ಶಾರೀರ ಮತ್ತು ನಟನೆಯ ಮೂಲಕ ಬೇರೊಂದು ಲೋಕಕ್ಕೆ ಕೊಂಡೊಯ್ದುಬಿಟ್ಟ. ಇಡೀ ಪ್ರದರ್ಶನ ಮಂದಿರ ಭಾವಪರವಶವಾಗಿಬಿಟ್ಟಿತು. ಪ್ರೇಕ್ಷಕರು ಸಮ್ಮೋಹಿತಗೊಂಡು ಹುಚ್ಚೆದ್ದು ಕುಣಿಯತೊಡಗಿದರು. ಸಂತೋಷದ ಅಮಲಿನಲ್ಲಿ ಕಾಸನ್ನು ವೇದಿಕೆ ಮೇಲೆ ಎಸೆಯತೊಡಗಿದರು. ಇದ್ದಕ್ಕಿದ್ದಂತೆ ಚಿಲ್ಲರೆ ಕಾಸಿನ ಮಳೆ ಸುರಿಯುತ್ತಿರುವುದನ್ನು ಕಂಡ ಬಾಲಕ ಒಂದು ಕ್ಷಣ ಮೂಕವಿಸ್ಮಿತನಾದ. ಹಾಡುವುದನ್ನು ನಿಲ್ಲಿಸಿ ಕಾಸನ್ನು ಆಯ್ದುಕೊಳ್ಳುವ ಪ್ರಯತ್ನಕ್ಕೆ ತೊಡಗಿದ. ಹಾಡು... ಹಾಡೂ ಎಂದು ಒಂದೇ ಸಮನೆ ಕೂಗುತ್ತಿದ್ದ ಪ್ರೇಕ್ಷಕರಿಗೆ ತಾನು ಹಣ ಆಯ್ದುಕೊಂಡ ನಂತರವೇ ಹಾಡುವುದಾಗಿ ಕಡ್ಡಿ ಮುರಿದಂತೆ ಹೇಳಿಬಿಟ್ಟ. ಅವರ ಆ ಮಾತು ಸಹ ನಗೆಯ ಅಲೆ ಎಬ್ಬಿಸಿತು! ಸೈಡ್‌ವಿಂಗ್‌ನಿಂದ ಬಂದ ಮ್ಯಾನೇಜರ್ ಸಹ ಜೇಬಿನಿಂದ ಕರವಸ್ತ್ರ ತೆಗೆದು ಕಾಸು ಆಯುವಲ್ಲಿ ಸಹಕರಿಸಿದ. ಮತ್ತು ಹಣದ ಪುಟ್ಟ ಗಂಟಿನೊಂದಿಗೆ ಅವನು ನೇಪಥ್ಯಕ್ಕೆ ಸರಿದ. ಆ ಗಂಟನ್ನು ಮೇನೇಜರ್ ಲಪಟಾಯಿಸಬಹುದೆಂದು ಅನುಮಾನಿಸಿ ಅವರ ಹಿಂದೆಯೆ ತಾನೂ ಹೆಜ್ಜೆ ಹಾಕಿದ. ಅದನ್ನು ಅವನು ತನ್ನ ತಾಯಿಯ ಕೈಗೆ ಒಪ್ಪಿಸಿದ್ದನ್ನು ಕಣ್ಣಾರೆ ಕಂಡ ನಂತರವೇ ಬಾಲಕ ತನ್ನ ಹಾಡು ಮತ್ತು ನರ್ತನವನ್ನು ಹುಮ್ಮಸ್ಸಿನಿಂದ ಮುಂದುವರಿಸಿದ್ದು. ಬಾಲಕ ತನ್ನ ಕಂಠ ಸಿರಿ ಮತ್ತು ನಟನಾ ಪ್ರತಿಭೆಯಿಂದ ಸಮಸ್ತ ಪ್ರೇಕ್ಷಕರ ಅಭಿಮಾನವನ್ನು ಸೂರೆಗೊಂಡ. ಅವರ ಒತ್ತಾಯದ ಮೇರೆಗೆ ಮತ್ತೊಂದು ಹಾಡು, ಮತ್ತೊಂದು ಐರಿಷ್ ಹಾಡು.... ಹೀಗೆ ಒಂದರ ಹಿಂದೆ ಒಂದರಂತೆ ಪ್ರೇಕ್ಷಕ ಸಮುದಾಯದ ಪ್ರೋತ್ಸಾಹಕ್ಕೆ ಮೇರೆಯೇ ಇರಲಿಲ್ಲ. ಕೊನೆಗೆ ಬೇಸತ್ತು ಹನ್ನಾ ವೇದಿಕೆ ಪ್ರವೇಶಿಸಿ ಮಗನ ಕೈಹಿಡಿದು ನೇಪಥ್ಯಕ್ಕೆ ಕರೆತರಬೇಕಾಯಿತು. ಚಾರ್ಲಿಸ್ ಸ್ಪೆನ್ಸರ್ ಚಾಪ್ಲಿನ್ ತನ್ನ ಐದನೆಯ ಕಿರಿ ವಯಸ್ಸಿನಲ್ಲಿ ನೀಡಿದ ಮೊಟ್ಟಮೊದಲ ಪ್ರದರ್ಶನವಾದರೆ ಆತನ ಅಭಿಜಾತ ಕಲಾವಿದೆಯಾದ ಆತನ ತಾಯಿ ಹನ್ನಾ ನೀಡಿದ ಕಟ್ಟಕೊನೆಯ ಪ್ರದರ್ಶನವಾಯಿತು. ವಿಧಿ ಆಕೆಯನ್ನು ಚೇತರಿಸಿಕೊಳ್ಳಲು ಬಿಡಲೇ ಇಲ್ಲ. ಆಕೆ ತನ್ನ ಕಂಠ ಸಿರಿಯನ್ನು ಮುಂದೆಂದೂ ಪಡೆದುಕೊಳ್ಳಲೇ ಇಲ್ಲ.

(ಮುಂದುವರಿಯುವುದು)



ಆಸ್ಕರ್ ಬಹುಮಾನ ವಿಜೇತ ಚಿತ್ರ

"ಅಪ್ಪ, ನನ್ನಂತಹ ಮಕ್ಕಳನ್ನು ಕುದಿಯುವ ಕೊಪ್ಪರಿಗೆಯಲ್ಲಿ ಹಾಕಿ ಕುದಿಸುತ್ತಾರಂತೆ, ಅದರಿಂದ ಸೂಪು ಮಾಡುತ್ತಾರಂತೆ, ಚರ್ಮ ಸುಲಿದು ಚೀಲ ಮಾಡುತ್ತಾರಂತೆ ಹೌದೆ"

'ಜೀವನವೆಂಬುದು ಸುಂದರ' ಚಿತ್ರದಲ್ಲಿ 5 ವರ್ಷದ ಮಗುವೊಂದು ಕೇಳಿದ ಪ್ರಶ್ನೆ. ಜೀವನವೆಂಬುದು ಸುಂದರ ಎಂಬುದು ಸಾವಿರ, ನಿರಂತರ ಸಾವಿನ ಭಯದ ನಡುವೆ, ಚಿತ್ರ ವಿಚಿತ್ರ ಕ್ರೂರ ಹಿಂಸೆಯ ನಡುವೆ ಅರಳಿದ ಸತ್ಯ. ಇಟಲಿಯಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಯಹೂದ್ಯರನ್ನು ತಳ್ಳಿದ ಮರಣಕೂಪದಲ್ಲಿ ಸಿಲುಕಿದ 5 ವರ್ಷದ ಮಗುವಿಗೆ ಜೀವನದ ಈ ಕ್ರೌರ್ಯ ತಿಳಿಯಬಾರದು, ತನ್ನ ಮುಗ್ಧ ಮಗು ಪ್ರಪಂಚದ ಬಗ್ಗೆ, ಜೀವನದ ಬಗ್ಗೆ ದ್ವೇಷವನ್ನು ಬೆಳೆಸಿಕೊಂಡು ವಿಕಾರಮನಸ್ಸಿನವನಾಗಿ ಬೆಳೆಯಬಾರದೆಂದು ಪ್ರಯತ್ನಿಸುತ್ತಿರುವ ಅಪ್ಪ, ಮಗುವಿನ ಮನಸ್ಸಿನಿಂದ ಈ ವಿಷವನ್ನು ತೆಗೆಯಲು ಪ್ರಯತ್ನ ಪಡುತ್ತಾನೆ. ಕೊನೆಯಲ್ಲಿ ಪ್ರಾಣವನ್ನು ತೆರುತ್ತಾನೆ.

ಇಡೀ ಚಿತ್ರದಲ್ಲಿ ಮಗ ಅಪ್ಪನಿಗೆ ಕೇಳುವ ಪ್ರಶ್ನೆಗಳ ಮೂಲಕ ಫ್ಯಾಸಿಸ್ಟ್ ಕ್ರೌರ್ಯವನ್ನು, ಅಂದಿನ ವಾತಾವರಣದ ಭೀಕರತೆಯನ್ನು ಬಿಚ್ಚಿಡುವ ಚಿತ್ರದ ಮೊದಲ ಅರ್ಧ ಲವಲವಿಕೆ[illegible] ಹಾಸ್ಯದಿಂದ ಪ್ರೇಕ್ಷಕರನ್ನು ಸೆಳೆಯುತ್ತದೆ. ಫ್ಯಾಸಿ[illegible] ಕ್ರೌರ್ಯ ರಾಕ್ಷಸೀ ವರ್ತನೆಗಳ ಬಗ್ಗೆ ಹಲವು ಉತ್ತ[illegible] ಚಲನಚಿತ್ರಗಳು ಬಂದಿವೆ. ಅವೆಲ್ಲವೂ ನೇರವ[illegible] ಫ್ಯಾಸಿಸ್ಟ್ ಕ್ರೌರ್ಯದ ವಿವಿಧ ಮುಖಗಳ[illegible] ಹಿಡಿದಿಟ್ಟರೆ ಈ ಚಲನಚಿತ್ರ[illegible] ಪ್ರಯತ್ನಪೂರ್ವಕವಾಗಿ ಭಿನ್ನ ರೀತಿಯ[illegible] ಆದ್ದರಿಂದಲೇ ನೋಡಬೇಕಾದದ್ದು. ಆ[illegible] ಫ್ಯಾಸಿಸಂ ಬಗ್ಗೆ ಈಗಾಗ[illegible] ತಿಳಿದುಕೊಂಡಿರುವವರಿಗೆ ಮಾತ್ರ ತಟ್ಟುತ್ತ[illegible] ರಾಬರ್ಟ್ ಬೆನಿನಿ ತಾನೆ ಚಿತ್ರ ಕಥೆ ಬರ[illegible] ನಿರ್ದೇಶಿಸಿ ನಟಿಸಿರುವುದರಿಂದಲೇ ಏನೋ ಚಿ[illegible] ತುಂಬಾ ಕೇವಲ ಅವರೊಬ್ಬರೇ ಮೆರೆ[illegible] ಬಿಟ್ಟಿದ್ದಾರೆ. ಹೀಗಾಗಿ ಫ್ಯಾಸಿಸಂ ಬಗ್ಗೆ ಪರಿಸ್ಥಿತಿ[illegible] ಬಗ್ಗೆ ಇನ್ನೂ ಸಮರ್ಥವಾ[illegible] ಕಟ್ಟಿಕೊಡಬಹುದಾಗಿದ್ದ ಅವಕಾಶವ[illegible] ಕಳೆದುಕೊಂಡಂತಾಗಿದೆ.

ಈ ಬಗ್ಗೆ ಲಂಕೇಶಪತ್ರಿಕೆಯ ಸಂಪಾದಕೀ[illegible] ಬರಹವನ್ನು ಜೊತೆಯಲ್ಲಿ ಪ್ರಕಟಿಸುತ್ತಿದ್ದೇವೆ[illegible]

'ಜೀವನವೆಂಬುದು ಸುಂದರ'

(Life is beutiful)

ಗ್ಯೂಡೋ ಸದಾ ಹಸನ್ಮುಖಿಯಾಗಿರುವ ಮನುಷ್ಯ. ಅಕ್ಕಪಕ್ಕದವರ ತಂಟೆ ತಕರಾರುಗಳಿಂದ ಅವನೆಂದು ವಿಚಲಿತನಾಗುವವನಲ್ಲ. ಅವನು ಜಾಣನಾದರೂ ಬದುಕಿನಲ್ಲಿ ಅಷ್ಟೇನೂ ಯಶಸ್ವಿ ಕಂಡವನಲ್ಲ. ಅವನ ಸ್ವಭಾವ ಎಂಥದೆಂದರೆ ವರ್ತನೆಯಲ್ಲಿ ಚಾಪ್ಲಿನ್ ತರಹ ಇದ್ದರೂ ಚಾಪ್ಲಿನ್‌ನ ವಿಷಾದದ ಛಾಯೆ ಕಾಣುವುದಿಲ್ಲ.

ಒಟ್ಟಿನಲ್ಲಿ ಗ್ಯೂಡೋ ಎಂಥವನೆಂದರೆ ನೀವು ನಿಮ್ಮ ವಿಷಾದಗಳನ್ನು ನೀವು ನಿಮ್ಮ ವಿಷಾದಗಳನ್ನು ಮರೆತು ಅವನೊಂದಿಗೆ ವಿರಾಮವಾಗಿ ನಕ್ಕು ಬರಬೇಕು ಎಂಬ ಭಾವನೆ ಮೂಡಿಸುವಂಥ ವ್ಯಕ್ತಿ.

ಇಟಲಿಯ ಸಣ್ಣ ಪಟ್ಟಣವೊಂದರಲ್ಲಿ ಇವನ ವಾಸ. ಗೆಳತಿ ಡೋರಾಳೊಂದಿಗೆ ಇವನ ಸಂವಾದ ಬರೀ ಹುಡುಗಾಟಿಕೆ. ಆದರೂ ತನ್ನ ಮಾಮೂಲಿ ಗೇಲಿ-ತಮಾಷೆ ಮಾತಾಡುತ್ತಲೇ ಡೋರಾಳಿಗೆ ತನ್ನ ಪ್ರೀತಿ ಹೇಳಿಕೊಳ್ಳುತ್ತಾನೆ. ಇವನ ಹಾಸ್ಯದ ಪ್ರವೃತ್ತಿ ಇಷ್ಟಪಡುವ ಡೋರಾ ತನ್ನ ಅನುಕೂಲಕರ ಸುಭದ್ರ ಜೀವನ ಬಿಟ್ಟುಕೊಟ್ಟು ಗ್ಯೂಡೋ ಜೊತೆ ಬಂದು ಇದ್ದುಬಿಡುತ್ತಾಳೆ. ಇವರ ಪ್ರೇಮದ ಸರಳ ಬದುಕು ಖುಷಿಯಾಗಿ ಅರಳತೊಡಗುತ್ತಿದ್ದಂತೆ ಮತ್ತೊಂದೆಡೆ ಘೋರ ಘಟನೆಗಳ ವಾಸ್ತವ ಚಾಲನೆ ಪಡೆಯಲಾರಂಭಿಸಿರುತ್ತದೆ. ಎರಡನೇ ಮಹಾಯುದ್ಧ ಆರಂಭವಾಗುತ್ತದೆ.

ಜರ್ಮನಿಯಲ್ಲಿ ಯಹೂದಿಗಳ ಬರ್ಬರ ಹತ್ಯೆಗಳು ಶುರುವಾಗಿ ಅದು ಇಟಲಿಯಲ್ಲೂ ಕಾಣಿಸಿಕೊಳ್ಳುತ್ತದೆ. ಇವರ ಪುಟ್ಟ ಪಟ್ಟಣದ ನಾಜಿ ಗೂಂಡಾಗಳು ಗ್ಯುಡೋನ ಮನೆಗೆ ದಾಳಿ ಮಾಡುತ್ತಾರೆ. ನಂತರ ಅಲ್ಲಿದ್ದ ಕುದುರೆಯ ಮೇಲೆ ಯಹೂದಿ ವಿರೋಧಿ ಘೋಷಣೆಗಳನ್ನು ಪೈಂಟ್ ಮಾಡುತ್ತಾರೆ. ನಾಜಿ ಗೂಂಡಾಗಳ ಬಗ್ಗೆ ಗ್ಯುಡೋಗೆ ಎಚ್ಚರದಿಂದಿರುವಂತೆ ಹೇಳಿದರೆ ಹಸನ್ಮುಖಿ ಗ್ಯೂಡೋ "ಮುಂದೆ ಅವರು ನನಗೂ ಬಣ್ಣ ಹೊಡೆಯಬಹುದು ಎಂದು ಕಾಣುತ್ತೆ" ಎಂದಷ್ಟೇ ಹೇಳಿ ನಗುತ್ತಾನೆ.

ಈ ಗಂಡ ಹೆಂಡತಿಗೆ ಪುಟ್ಟ ಗಂಡು ಮಗುವೊಂದು ಹುಟ್ಟಿ ಅದು ನಾಜಿ ದಾಳಿ ಹಿಂಸೆಯ ನಡುವೆ ಬೆಳೆಯುತ್ತಾ ಐದು ವರ್ಷದ ಮುದ್ದಾದ ಹುಡುಗನಾಗುತ್ತಾನೆ.

ಒಮ್ಮೆ ಅಂಗಡಿಯೊಂದರ ಮುಂದೆ "ಯೆಹೂದಿಯರಿಗೆ ಹಾಗೂ ನಾಯಿಗಳಿಗೆ ಪ್ರವೇಶವಿಲ್ಲ" ಎಂಬ ನೋಟೀಸ್ ಅನ್ನು ಮಗು ಗಮನಿಸುತ್ತದೆ. ಯಹೂದಿಯಾದ ಗ್ಯೂಡೋ ತನ್ನ ಎಂದಿನ ತಮಾಷೆ ಶೈಲಿಯಲ್ಲಿ "ಕೆಲವರಿಗೆ ಯಾವುದರ ಬಗ್ಗೆಯೋ ಇಷ್ಟ ಆಗುವುದಿಲ್ಲ. ಈಗ ನಿನಗೆ ಜೇಡರ ಹುಳು ಎಂದರೆ ಆಗುವುದಿಲ್ಲ ಅಲ್ಲವೆ. ನಾಳೆ ನಾವೂ ನಮ್ಮ ಪುಸ್ತಕದ ಅಂಗಡಿ ಎದುರು 'ಜೇಡಗಳಿಂದ ಪ್ರವೇಶ ನಿಷೇಧಿಸಿದೆ' ಎಂಬ ನೋಟೀಸ್ ಹಾಕೋಣ.. ಏನಂತೀ?" ಎನ್ನುತ್ತಾನೆ.

ಅವಮಾನ-ಹಿಂಸೆಗಳನ್ನು ತಣ್ಣಗೆ ಸಹಿಸುತ್ತಲೇ ತನ್ನ ಪುಟ್ಟ ಸಂಸಾರವನ್ನು ಉಳಿಸಿಕೊಳ್ಳಬೇಕೆಂಬ ಗ್ಯೂಡೋ ಆಸೆ ಬೇಗನೆ ಮುರಿದುಬೀಳುತ್ತದೆ. ಮಗನ ಐದನೇ ಹುಟ್ಟುಹಬ್ಬದ ದಿನ ನಾಜಿಗಳು ಬಂದು ಗ್ಯೂಡೋ ಹಾಗೂ ಮಗುವನ್ನು ಎಳೆದೊಯ್ಯುತ್ತಾರೆ. ತಮ್ಮನ್ನು ಕಾನ್‌ಸನ್‌ಟ್ರೇಷನ್ ಕ್ಯಾಂಪ್ ಒಂದಕ್ಕೆ ಒಯ್ಯಲಾಗುತ್ತಿದೆ ಎಂದು ತಿಳಿದ ಗ್ಯೂಡೋ ಆ ಕ್ರೂರ ಸನ್ನಿವೇಶ ಹಾಗೂ ಮಗುವಿನ ಮುಗ್ಧತೆ ಪರಸ್ಪರ ಮುಖಾಮುಖಿಯಾಗದಿರುವಂತೆ ನೋಡಿಕೊಳ್ಳಲು ನಿರ್ಧರಿಸುತ್ತಾನೆ. ಹಾಗಾಗಿ ಗ್ಯೂಡೋ ತನ್ನ ಮಗನೊಂದಿಗೆ ಒಂದು ಕಲ್ಪನೆಯ ಆಟ ಶುರುಮಾಡಿಕೊಳ್ಳುತ್ತಾನೆ. "ನಿನ್ನ ಹುಟ್ಟುಹಬ್ಬದ ಕಾರಣ ನಾವೀಗ ಒಂದು ಸಾಹಸ ಯಾತ್ರೆ ನಡೆಸಲು ಹೋಗುತ್ತಿದ್ದೇವೆ. ಇದೊಂದು ಕಣ್ಣಾಮುಚ್ಚಾಲೆ ತರದ ಆಟ. ನಮ್ಮ ಜೊತೆ ಸೈನಿಕರೂ ಈ ಆಟದಲ್ಲಿರುತ್ತಾರೆ' ಎಂದು ನಂಬಿಸುತ್ತಾನೆ. "ಆಟದ ಪ್ರತಿಹಂತದಲ್ಲೂ ನಮಗೆ



ಪಾಯಿಂಟ್ಸ್ ಕೊಡುತ್ತಾರೆ. ನಾವು ಮೊದಲು ಒಂದು ಸಾವಿರ ಪಾಯಿಂಟ್ಸ್ ಪಡೆದರೆ ಬಹುಮಾನವಾಗಿ ಒಂದು ನಿಜವಾದ ಯುದ್ಧದ ಟ್ಯಾಂಕ್ ಸಿಗುತ್ತದೆ. ಆಟದ ನಿಯಮದಂತೆ ನಾಜಿಗಳು ನಮ್ಮೊಂದಿಗೆ ಕೆಟ್ಟದಾಗಿ ವರ್ತಿಸುತ್ತಾರೆ. ಆದರೆ ನಾವು ಈ ಆಟದಲ್ಲಿ ಗೆಲ್ಲಲೇಬೇಕು" ಎಂದು ಮಗನಿಗೆ ನಂಬಿಸುತ್ತಾನೆ.

ಈ ಪ್ರಕ್ರಿಯೆಯಲ್ಲಿ ಗ್ಯೂಡೋ ಆ ಕ್ರೂರ ಸಂದರ್ಭವನ್ನು ಮಗನ ಪಾಲಿಗೆ ರಜಾ ದಿನಗಳೇನೋ ಎಂಬ ಅನಿಸಿಕೆ ಬರುವಂತೆ ಶ್ರಮಿಸುತ್ತಾನೆ. ಅಷ್ಟರಲ್ಲಿ ಕ್ಯಾಂಪ್‌ನ ಇನ್ನಿತರ ಮಕ್ಕಳನ್ನು ಗ್ಯಾಸ್ ಚೇಂಬರ್‌ಗೆ ನೂಕಿ ಕೊಲ್ಲುತ್ತಾರೆ. ಗ್ಯೂಡೋನ ಮಗ ಅಪ್ಪ ಹೇಳಿದಂತೆ ಕಣ್ಣಾಮುಚ್ಚಾಲೆ ಆಡಿ ಈ ಹತ್ಯೆಯಿಂದ ತಪ್ಪಿಸಿಕೊಳ್ಳುತ್ತಾನೆ.

ತಮ್ಮ ಶ್ರಮಶಿಬಿರದ ಯೂನಿಫಾರಂ ಮೇಲಿರುವ ಯಹೂದಿಗಳ ಸ್ಟಾರ್ ಚಿಹ್ನೆಯ ಬಗ್ಗೆ ಗ್ಯೂಡೋ ಮಗನಿಗೆ ಹೇಳುವುದೇನೆಂದರೆ "ಇದು ನಾವು ಆಟ ಚೆನ್ನಾಗಿ ಆಡುತ್ತಿದ್ದೇವೆ ಎಂದು ನಮ್ಮಿಬ್ಬರಿಗೆ ಕೊಟ್ಟಿರುವ ಪದವಿ" ಎಂದು.

ಹಾಗೆಯೇ ಅವನ ಕೈಮೇಲೆ ಬಂಧಿಖಾನೆಯಲ್ಲಿ ಅವನಿಗೆ ಕೊಟ್ಟಿರುವ ಸಂಖ್ಯೆಯ ಹಚ್ಚೆಯನ್ನು ತೋರಿಸಿ "ಇದು ನಾವು ಈಗಾಗಲೇ ಗೆದ್ದಿರುವ ಪಾಯಿಂಟ್ಸ್‌ಗಳು" ಎಂದು ಕಠೋರ ಸತ್ಯವನ್ನು ತಿರುಚಿ, ಆಟದಲ್ಲಿ ಮಗನ ಆಸಕ್ತಿ ಕುಂದದಂತೆ ನೋಡಿಕೊಳ್ಳುತ್ತಾನೆ.

ಸಾವಿನ ಭೀಕರ ಕಠೋರತೆಯೆದುರು ಸಹ ತಂದೆಯೊಬ್ಬ ತನ್ನ ಮಗುವನ್ನು ಕಾಪಾಡಲು ಹೇಗೆ ಪ್ರಯತ್ನಿಸುತ್ತಾನೆ ಎಂಬುದಕ್ಕೆ ಗ್ಯೂಡೋ ಉದಾಹರಣೆಯಾಗುತ್ತಾನೆ. ಯುದ್ಧ ಕೊನೆಯಾಗುತ್ತಿದ್ದಂತೆ ತನ್ನ ಮಗನ ಮುಗ್ಧತೆ ಕಾಪಾಡುವ ಯತ್ನದಲ್ಲೇ ಗ್ಯೂಡೋ ಕೊಲೆಗೀಡಾಗುತ್ತಾನೆ. ಮಿತ್ರ ರಾಷ್ಟ್ರಗಳ ಸೇನೆ ಎಲ್ಲೆಡೆ ಗೆಲವು ಸಾಧಿಸಿ ನಾಜಿಗಳ ಸೋಲು ಖಚಿತವಾಗುತ್ತಿದ್ದಂತೆ ಗ್ಯೂಡೋ ಇದ್ದ ಕ್ಯಾಂಪ್ ಅನ್ನು ನಾಜಿಗಳು ಬಿಟ್ಟು ಓಡುತ್ತಾರೆ.

ಕಣ್ಣಾಮುಚ್ಚಾಲೆ ಆಟದ ಭ್ರಮೆಯಲ್ಲಿದ್ದ ಮಗ ತಾನು ಅವಿತಿಟ್ಟುಕೊಂಡಿದ್ದ ಸ್ಥಳದಿಂದ ಹೊರ ಬಂದಾಗ ಮೊದಲು ಅವನಿಗೆ ಕಾಣುವುದು ಒಂದು ಮಿಲಿಟರಿ ಟ್ಯಾಂಕ್. ಆ ಪುಟ್ಟ ಬಾಲಕ ತಾವು ಆಟದಲ್ಲಿ ಗೆದ್ದ ಕಾರಣ ಈ ಟ್ಯಾಂಕ್ ಬಹುಮಾನ ವಾಗಿ ಬಂದಿದೆ ಎಂದು ಭಾವಿಸುತಾನೆ. ಗ್ಯೂಡೋ ಕೊನೆಗೂ ಅಸಾಧ್ಯವೆನ್ನಬಹುದಾದ ಪರಿಸ್ಥಿತಿಯಲ್ಲೂ ಮಗನ ಮುಗ್ಧತೆಯನ್ನು ಕಾಪಾಡುವುದರಲ್ಲಿ ಯಶಸ್ವಿಯಾಗಿರುತ್ತಾನೆ.

ಈಗ ಬೆಂಗಳೂರಿನಲ್ಲಿ ಬಿಡುಗಡೆಯಾಗಿರುವ ಇಟಾಲಿಯನ್ ಚಿತ್ರ(ಇಂಗ್ಲೀಷ್ ಆವೃತ್ತಿ) 'ಲೈಫ್ ಇಸ್ ಬ್ಯೂಟಿಫುಲ್' ನ ಕತೆಯಿದು.

ರೋಬರ್ಟೋ ಬೆನಿನಿ ಗ್ಯೂಡೋನ ಪಾತ್ರ ಮಾಡಿದ್ದಾನೆ. ಚಿತ್ರಕತೆ ಹಾಗೂ ನಿರ್ದೇಶನ ಸಹ ಅವನದೆ. ಕೆಲವರ್ಷಗಳ ಹಿಂದೆ ಈ ಚಿತ್ರಕ್ಕೆ ಮೂರು ಆಸ್ಕರ್ ಅವಾರ್ಡ್ ಸಹ ಬಂದಿತ್ತು. ಬೆನಿನಿ ಇಟಲಿಯ ಪ್ರಸಿದ್ಧ ಹಾಸ್ಯನಟ. ಅರವತ್ತು ಲಕ್ಷ ಯಹೂದಿಯರು ಹತ್ಯೆಗೀಡಾ 20ನೇ ಶತಮಾನದ ಈ ಬರ್ಬರ ಘಟನಾವಳಿಗಳಲ್ಲಿ ಹಾಸ್ಯಕ್ಕೆ ಅವಕಾಶವಿಲ್ಲ. ಆದರೆ ನಟ ನಿರ್ದೇಶಕ ಬೆನಿನಿ ಮಗನಿಗಾಗಿ ತಂದೆಯೊಬ್ಬನ ಪ್ರೀತಿಯ ಹಂಬಲ ಹಾಗೂ ತ್ಯಾಗವನ್ನು ಈ ಟ್ರಾಜಿಕ್ ಕಾಮಿಡಿಯಲ್ಲಿ ಮನಮುಟ್ಟುವಂತೆ ನಿರೂಪಿಸಿದ್ದಾನೆ. ವಾಸ್ತವದ ಭಯಾನಕತೆಯನ್ನು ಗ್ಯೂಡೋ ತನ್ನ ಚೇಷ್ಟೆಗಳಿಂದಲೇ ಎದುರಿಸಿ ನ[illegible] ಇಷ್ಟವಾಗುತ್ತಾನೆ, ಕೊನೆಗೆ ಬೆಚ್ಚಿ ಬೀಳಿಸುತ್ತ[illegible]

ಭಾರತದಲ್ಲೂ ಕೋಮುದ್ವೇಷದ [illegible] ಬೆಳೆಯುತ್ತಾ ಹೋಗುತ್ತಿದೆ. ಈ ಕ್ರೌರ್ಯದ[illegible] ಹಾತೊರೆಯುವ ಜನ ನಿರರ್ಥಕ[illegible] ಪೂರ್ಣಾಹುತಿಯಾದ ಯಹೂದಿಗ[illegible] ನೆನೆದುಕೊಂಡರೆ ಸಾಕು, ಆತ್ಮವಿಮರ್ಶೆಗ[illegible] ದೊರಕುತ್ತದೆ. ಹಾಗೆಯೇ, ಕೋಮುದ್ವೇ[illegible] ವಿರುದ್ಧಹೋರಾಡಿ ಸಿನಿಕರಾಗುತ್ತಿರುವ [illegible] ಗ್ಯೂಡೋನಿಂದ ಸ್ಫೂರ್ತಿ ಪಡೆಯಲಿ. ಅದೇ[illegible] ನಾವು ನಮ್ಮ ಬದುಕಿನಲ್ಲಿ ಆಶೆ ಮತ್ತು ಭರವಸೆ[illegible] ಕಳೆದುಕೊಂಡ ದಿನವೇ ಬದುಕನ್ನು ಕಳೆದುಕೊ[illegible] ಎಂಬುದು.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ